ಜನಮನದ ದನಿ

ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

ಪಾನ್ ಮಸಾಲಕ್ಕೆ ಸಂಬಂಧಿಸಿದ ಜಾಹೀರಾತಿನ ಮೂಲಕ ತಪ್ಪು ಸಂದೇಶ ನೀಡಲಾಗಿದೆಂಬ ಆರೋಪದಡಿ ನಟ ಸಲ್ಮಾನ ಖಾನ್ ಅವರ ವಿರುದ್ಧ ಹೊರಡಿಸಿದ್ದ ವಾರಂಟ್‌ಗೆ ರಾಷ್ಟ್ರೀಯ ಗ್ರಾಹಕ ವ್ಯಾಜ್ಯ ಪರಿಹಾರ ಆಯೋಗ(ಎನ್‌ಸಿಡಿಆರ್‌ಸಿ) ತಡೆ ನೀಡಿದೆ.

09 ಏಪ್ರಿಲ್ 2026 ಗುರುವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 30 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

ಇಂದಿನ ಬೇಸಿಗೆ ಮತ್ತಷ್ಟು ಬಿಸಿ » 2

ಮಲ್ಲಿಕಾರ್ಜುನ ಖರ್ಗೆಗೆ ಮಾನಸಿಕ ಅಸ್ವಸ್ಥತೆ » 3

ಗ್ರಾಮೀಣ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ ನಿವಾರಿಸಲು ಕ್ರಮ » 4

ಗ್ಯಾರಂಟಿ ವಿವರ ಕೇಳಿದ ಚುನಾವಣಾ ಆಯೋಗ

ಗೊಡ್ಡು ಬೆದರಿಕೆಗೆ ಹೆದರುವುದಿಲ್ಲ | ಮುಖ್ಯಮಂತ್ರಿ ಸಿದ್ದರಾಮಯ್ಯ ತಿರುಗೇಟು

• ಪ್ರಜೋದಯ ವರದಿ

ಬೆಂಗಳೂರು: ಕೇಂದ್ರ ಚುನಾವಣಾ ಆಯೋಗ ಗ್ಯಾರಂಟಿ ಯೋಜನೆಗಳಡಿ ಬಿಡುಗಡೆಯಾದ ಅನುದಾನದ ವಿವರ ಕೇಳಿರುವುದು ಪಕ್ಷಪಾತ, ಇಬ್ಬಗೆಯ ನೀತಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ದಾವಣಗೆರೆ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ನಡೆಯುತ್ತಿರುವ ಉಪ ಚುನಾವಣೆಗಳ ಸಂದರ್ಭದಲ್ಲಿ ಆಯೋಗವು ಕರ್ನಾಟಕ ಸರ್ಕಾರಕ್ಕೆ ಪತ್ರ ಬರೆದು, ರಾಜ್ಯದ ಗ್ಯಾರಂಟಿ ಯೋಜನೆಗಳಡಿ ಬಿಡುಗಡೆಯಾದ ನಿಧಿಗಳ ವಿವರಗಳನ್ನು ಕೇಳಿರುವುದು ಖಂಡನೀಯ. ನಮ್ಮ ಗ್ಯಾರಂಟಿ ಯೋಜನೆಗಳು ಈ ಉಪಚುನಾವಣೆ ಸಮಯದಲ್ಲಿ ಜಾರಿಯಾದವುಗಳಲ್ಲ ಎಂಬುದನ್ನು ಆರಂಭದಲ್ಲೇ ಸ್ಪಷ್ಟಪಡಿಸುತ್ತಿದ್ದೇನೆ. ಇವು 2023ರ ವಿಧಾನಸಭೆ ಚುನಾವಣೆಯಲ್ಲಿ ಜನರಿಗೆ ನೀಡಿದ ಭರವಸೆಗಳ ಭಾಗವಾಗಿ ನಮ್ಮ ಸರ್ಕಾರ ಅನುಷ್ಠಾನಕ್ಕೆ ತಂದಿರುವ ಕಾರ್ಯಕ್ರಮಗಳಾಗಿವೆ. ಈ ಯೋಜನೆಗಳಡಿ ರಾಜ್ಯದ ಎಲ್ಲಾ ಫಲಾನುಭವಿ

ಗಳ ಖಾತೆಗಳಿಗೆ ನಿಯಮಿತವಾಗಿ, ಪಾರದರ್ಶಕವಾಗಿ ಹಣ ವರ್ಗಾವಣೆಯಾಗುತ್ತಿದೆ. ರಾಜ್ಯದ ಎಲ್ಲಾ ವರ್ಗದ ಜನರು ಘನತೆಯಿಂದ ಜೀವಿಸಲು ಮತ್ತು ಜೀವನ ನಿರ್ವಹಣೆಗೆ ಹಾಗು ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ಸರ್ಕಾರವು ನೇರವಾಗಿ ಒದಗಿಸುತ್ತಿರುವ ಅನುದಾನವಾಗಿದೆ. ಈ ಯೋಜನೆಗಳು ಆಡಳಿತದ ಭಾಗವೇ ಹೊರತು, ಮತದಾರರನ್ನು ಸೆಳೆಯುವ ಕಾರ್ಯಕ್ರಮಗಳಲ್ಲ ಎಂದಿದ್ದಾರೆ.

ಬಿಜೆಪಿಯು ಗ್ಯಾರಂಟಿ ಯೋಜನೆಗಳ ಬಗ್ಗೆ ಇಬ್ಬಗೆ ನೀತಿಯ ಧೋರಣೆಯನ್ನು ತಳೆದಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಒಂದು ಕಡೆ ಕರ್ನಾಟಕದ ಗ್ಯಾರಂಟಿ ಯೋಜನೆಗಳನ್ನು ಬಿಟ್ಟಿ ಭಾಗ್ಯವೆಂದು ಅಪಹಾಸ್ಯ ಮಾಡುತ್ತಾರೆ. ಮತ್ತೊಂದು ಕಡೆ ಅದೇ ಯೋಜನೆಗಳನ್ನು ಅನುಕರಿಸಿ ತಾವು ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಜಾರಿಗೊಳಿಸುತ್ತಾರೆ. ಇದರಿಂದ ಕರ್ನಾಟಕದ ಮಾದರಿಯು ದೇಶಕ್ಕೆ ಪ್ರೇರಣೆಯಾಗಿದೆ ಎಂಬುದು ಸ್ಪಷ್ಟವಾಗುತ್ತದೆಂದು ತಿಳಿಸಿದ್ದಾರೆ.

ಆದರೆ, ಈ ವಿಚಾರವಾಗಿ ಚುನಾವಣಾ ಆಯೋಗ ಅನುಸರಿಸುತ್ತಿರುವ ನೀತಿಯು ಅನುಮಾನಸ್ಪದವಾಗಿದೆ. ಮಹಾರಾಷ್ಟ್ರ ಮತ್ತು ಬಿಹಾರದಂತಹ ರಾಜ್ಯಗಳಲ್ಲಿ ಚುನಾವಣೆಗೂ ಮುನ್ನ ನಗದು ವರ್ಗಾವಣೆ ಯೋಜನೆಗಳನ್ನು ಪ್ರಕಟಿಸಲಾಗಿದೆ ಮತ್ತು ಅಂತಹ ಯೋಜನೆಗಳ ಪ್ರಕ್ರಿಯೆಯನ್ನು ವೇಗಗೊಳಿಸಲಾಗಿದೆ. ಮತದಾರರಿಗೆ ನೇರವಾಗಿ ಯೋಜನೆಗಳ ಲಾಭವನ್ನು

> **ಬಿಜೆಪಿ ಅಥವಾ ಎನ್‌ಡಿಎ ಸರ್ಕಾರಗಳು ಏನು ಮಾಡಿದರೂ ಚುನಾವಣಾ ಆಯೋಗ ಕಣ್ಣು ಮುಚ್ಚಿಕೊಂಡಿರುತ್ತದೆ. ಆದರೆ ಕರ್ನಾಟಕ ಸರ್ಕಾರ ವಿಧಾನಸಭಾ ಚುನಾವಣೆ ಪೂರ್ವದಲ್ಲಿ ನೀಡಿದ್ದ ಭರವಸೆಗಳನ್ನು ಈಡೇರಿಸುತ್ತಿರುವಾಗ ಅದೇ ಆಯೋಗವು ಕ್ಯಾತೆ ತೆಗೆಯುತ್ತಿದೆ.**
> -ಸಿದ್ದರಾಮಯ್ಯ, ಮುಖ್ಯಮಂತ್ರಿ

ವರ್ಗಾವಣೆ ಮಾಡಲಾಗಿದೆ. ಅವೆಲ್ಲವೂ ಬಹಿರಂಗವಾಗಿ ನಡೆದಿವೆ. ಆದರೂ ಚುನಾವಣಾ ಆಯೋಗ ಮೌನ ವಹಿಸಿತ್ತು. ಯಾವುದೇ ಪರಿಶೀಲನೆಗೆ ಒಳಪಡಿಸದೆ ಯೋಜನೆಗಳನ್ನು ಮುಂದುವರಿಸಲು ಅನುಮತಿ ನೀಡಿತ್ತು ಎಂದು ಹೇಳಿದ್ದಾರೆ.

ಇದು ನಿಷ್ಪಕ್ಷಪಾತ ನಡೆಯಲ್ಲ, ಇದು ಒಂದು ಪಕ್ಷಕ್ಕೆ ನೀಡಿದ ಸಹಕಾರವಾಗಿದೆ. ಈ ಇಬ್ಬಗೆಯ ನೀತಿಯು ಚುನಾವಣಾ ಆಯೋಗದ ಪಕ್ಷಪಾತವನ್ನು ಬಯಲು ಮಾಡುತ್ತದೆಂದು ಆರೋಪಿಸಿದ್ದಾರೆ. ಕರ್ನಾಟಕದ ಗ್ಯಾರಂಟಿ ಯೋಜನೆಗಳನ್ನು ಗುರಿಯಾಗಿಸಿ ದಾಳಿ ಮಾಡುವುದು ಕೇವಲ ರಾಜಕೀಯ ಎಂದೆನಿಸುವುದಿಲ್ಲ. ಇದು ಬಡವರ ವಿರುದ್ಧ, ಮಹಿಳೆಯರ ವಿರುದ್ಧ ಮತ್ತು ಕರ್ನಾಟಕದ ವಿರುದ್ಧದ ಪರೋಕ್ಷ ದಾಳಿಯಾಗಿದೆ. ನುಡಿದಂತೆ ನಡೆವ ಸರ್ಕಾರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ನಮ್ಮ ಸರ್ಕಾರವು ಚುನಾವಣಾ ಆಯೋಗದ ಇಂತಹ ಗೊಡ್ಡು ಬೆದರಿಕೆಗಳಿಗೆ ಬಗ್ಗದೆ ತಾನು ಕೊಟ್ಟ ಭರವಸೆಗಳನ್ನು ಪೂರೈಸುವಲ್ಲಿ ಬದ್ಧವಾಗಿರುತ್ತದೆ ಮತ್ತು ಪ್ರತಿ ಕನ್ನಡಿಗನ ಸೇವೆಯನ್ನು ಎಂದಿನಂತೆ ಮುಂದುವರಿಸಲಿದೆ ಎಂದಿದ್ದಾರೆ.

ಇಂದು ಎರಡು ಕ್ಷೇತ್ರಗಳಲ್ಲಿ ಮತದಾನ

ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ಉಪ ಚುನಾವಣೆ ಏ. 9ರ ಗುರುವಾರ ನಡೆಯಲಿದೆ. ಆಡಳಿತಾರೂಢ ಕಾಂಗ್ರೆಸ್ ಹಾಗು ಬಿಜೆಪಿಗೆ ಎರಡೂ ಕ್ಷೇತ್ರಗಳು ಪ್ರತಿಷ್ಠೆಯ ಕಣವಾಗಿವೆ.

ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಸಮರ್ಥ್ ಶಾಮನೂರು, ಬಿಜೆಪಿ ಅಭ್ಯರ್ಥಿಯಾಗಿ ಶ್ರೀನಿವಾಸ ದಾಸಕರಿಯಪ್ಪ ಹಾಗು ಬಾಗಲಕೋಟೆಯಲ್ಲಿ ಬಿಜೆಪಿಯಿಂದ ವೀರಣ್ಣ ಚರಂತಿಮಠ ಮತ್ತು ಕಾಂಗ್ರೆಸ್‌ನಿಂದ ಉಮೇಶ್ ಮೇಟಿ ಸ್ಪರ್ಧಿಸಿದ್ದಾರೆ.

ಶಾಂತಿಯುತ ಮತದಾನಕ್ಕೆ ರಾಜ್ಯ ಚುನಾವಣಾ ಆಯೋಗ ಎಲ್ಲಾ ಸಿದ್ಧತೆ ಮಾಡಿಕೊಂಡಿದ್ದು, ಪ್ರತಿ ಮತಗಟ್ಟೆಗೆ ಓರ್ವ ಪ್ರಿಸೈಡಿಂಗ್ ಅಧಿಕಾರಿ ಮತ್ತು 3 ಪೋಲೀಂಗ ಅಧಿಕಾರಿ, ಅಲ್ಲದೆ 1564 ಸಿಬ್ಬಂದಿ ನೇಮಕ ಮಾಡಲಾಗಿದೆ.

ಸೋಲಾರ್ ಅಳವಡಿಕೆಗೆ ನಿರ್ಲಕ್ಷ್ಯ: ಶಾಸಕ ಎ.ಮಂಜು ಆಕ್ರೋಶ

• ಪ್ರಜೋದಯ ವರದಿ

ಅರಕಲಗೂಡು: ರೈತರ ಪಂಪ್ ಸೆಟ್‌ಗಳಿಗೆ ಕುಸುಮ ಬಿ ಯೋಜನೆಯಡಿ ಕಾಲಮಿತಿ ಮೀರಿದರೂ ಸೋಲಾರ್ ಅಳವಡಿಸದೇ ನಿರ್ಲಕ್ಷ್ಯಿಸಿರುವ ಗುತ್ತಿಗೆದಾರ ಕಂಪನಿಗಳ ವಿರುದ್ಧ ಶಾಸಕ ಎ.ಮಂಜು ಅವರು ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದ ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ನಡೆದ ಕಂಪನಿಗಳ ಮೇಲ್ವಿಚಾರಕರು ಮತ್ತು ಸೆಸ್ಕ್ ಇಂಜಿನೀಯರ್‌ಗಳ ಸಭೆಯಲ್ಲಿ ಮಾತನಾಡಿದ ಅವರು, ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 507 ರೈತರ ಜಮೀನಿಗೆ ಸೋಲಾರ್ ಅಳವಡಿಸಬೇಕಿದೆ. ಗುತ್ತಿಗೆ ಪಡೆದ ಕಂಪನಿಗಳು ಉಪ ಗುತ್ತಿಗೆ ನೀಡಿದ್ದು, ಅವರೂ ಸೋಲಾರ್ ಅಳವಡಿಕೆ ಮಾಡದೆ ಇಲ್ಲ ಸಲ್ಲದ ಸಬೂಬು ಹೇಳಿಕೊಂಡು ರೈತರನ್ನು ವಿನಾಕಾರಣ ಅಲೆದಾಡಿಸುತ್ತಿದ್ದಾರೆ. ರೈತರ ಕೆಲಸ ಮಾಡಿಕೊಡುವಲ್ಲಿ ಬೇಜವಾಬ್ದಾರಿ ವಹಿಸಲಾಗಿದೆ ಎಂದು ತರಾಟೆಗೆ ತೆಗೆದುಕೊಂಡರು.

ಸಭೆಗೆ ಕಂಪನಿಗಳ ಮಾಲೀಕರು ಗೈರಾಗಿ ಉಪ ಕಂಪನಿಗಳ ಮೇಲ್ವಿಚಾರಕರನ್ನು ಕಳುಹಿಸಿದ್ದಾರೆ. ಹೀಗಾಗಿ ಏ. 13ರಂದು ಮರು ಸಭೆ ಕರೆಯಲಾಗಿದ್ದು, ಸೋಲಾರ್ ಅಳವಡಿಕೆಗೆ ನೋಂದಣಿಯಾದ ಎಲ್ಲಾ ರೈತರು ಹಾಜರಾಗಬೇಕೆಂದರು. ಸಭೆಯಲ್ಲಿ ಭಾಗವಹಿಸಿದ್ದ ರೈತರು ಸೋಲಾರ್ ಅಳವಡಿಸದೆ ಸತಾಯಿಸುತ್ತಿರುವ ಉಪ ಕಂಪನಿಗಳ ಬೇಜವಾಬ್ದಾರಿಯನ್ನು ಖಂಡಿಸಿದರು.

ತಹಶೀಲ್ದಾರ್ ಕೆ.ಸಿ.ಸೌಮ್ಯ, ಶಿರಸ್ತೇದಾರ್ ಸೋಮಶೇಖರ್, ಸೆಸ್ಕ್ ಇಂಜಿನೀಯರ್ ಚಿದಂಬರಂ, ಮೋಹನ್, ಚಿನ್ನಸ್ವಾಮಿ ಇದ್ದರು.

ನಾಳೆ ಬೇಲೂರಿನಲ್ಲಿ ಜನ ಸ್ಪಂದನಾ ಸಭೆ

ಸಿದ್ಧತೆ ಪರಿಶೀಲಿಸಿದ ತಹಶೀಲ್ದಾರ್ | 1 ಸಾವಿರ ಅರ್ಜಿ ಸಲ್ಲಿಕೆ ನಿರೀಕ್ಷೆ

• ಪ್ರಜೋದಯ ವರದಿ

ಬೇಲೂರು: ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರ ಅಧ್ಯಕ್ಷತೆಯಲ್ಲಿ ಏ. 10ರ ಶುಕ್ರವಾರ ತಾಲ್ಲೂಕು ಪಂಚಾಯಿತಿ ಆವರಣದಲ್ಲಿ ಜನ ಸ್ಪಂದನಾ ಸಭೆ ಹಮ್ಮಿಕೊಂಡಿದ್ದು, ತಾಲ್ಲೂಕಿನ ಸಾರ್ವಜನಿಕರು ತಮ್ಮ ಅಹವಾಲು ಸಲ್ಲಿಸುವ ಮೂಲಕ ಪರಿಹಾರ ಕಂಡುಕೊಳ್ಳಬೇಕೆಂದು ತಹಶೀಲ್ದಾರ್ ಶ್ರೀಧರ್ ಕಂಕಣವಾಡಿ ಅವರು ಹೇಳಿದರು.

ಬುಧವಾರ ವೇದಿಕೆ ಸಿದ್ಧತೆ ಪರಿಶೀಲಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶುಕ್ರವಾರ ಬೆಳಿಗ್ಗೆ 9 ಗಂಟೆಗೆ ಸಭೆ ಆರಂಭವಾಗಲಿದ್ದು, ಸಾರ್ವಜನಿಕರು ಈ ಅವಕಾಶದ ಸದುಪಯೋಗ ಪಡೆಯಬೇಕು. ಸಚಿವರು ಈಗಾಗಲೇ ಜಿಲ್ಲೆಯ ವಿವಿಧೆಡೆ ಜನ ಸ್ಪಂದನಾ ಹಾಗು ಸಾರ್ವಜನಿಕರ ಕುಂದು ಕೊರತೆಗಳ ಸಭೆ ನಡೆಸಿ ಸ್ಥಳದಲ್ಲಿಯೇ ಹತ್ತಾರು ಸಮಸ್ಯೆಗಳಿಗೆ

ಪರಿಹಾರ ಒದಗಿಸಿದ್ದಾರೆ. ಬೇಲೂರಿನಲ್ಲೂ ಸಭೆ ನಡೆಸುತ್ತಿರುವುದು ಸಾಕಷ್ಟು ಅನುಕೂಲಕರವಾಗಿದೆ. ಸಭೆಯಲ್ಲಿ ಸ್ಥಳೀಯ ಶಾಸಕರು, ಲೋಕ ಸಭಾ ಸದಸ್ಯರು, ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗು ಸಕಲೇಶಪುರದ ಉಪವಿಭಾಗಾಧಿಕಾರಿ ಸೇರಿ ಜಿಲ್ಲೆ ಮತ್ತು ತಾಲ್ಲೂಕು ಮಟ್ಟದ ಬಹುತೇಕ ಇಲಾಖೆಯ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಲಿದ್ದಾರೆ.

ಕಂದಾಯ ಇಲಾಖೆ, ಪಂಚಾಯತ್ ರಾಜ್, ಅರಣ್ಯ ಇಲಾಖೆ, ಪುರಸಭೆ ಸೇರಿ ಹಲವು ಸಮಸ್ಯೆಗಳ ಬಗ್ಗೆ ಸಾವಿರಕ್ಕೂ ಹೆಚ್ಚು ಅರ್ಜಿಗಳು ಬರಬಹುದು ಎಂಬ ಅಂದಾಜಿದೆ. ಸಾರ್ವಜನಿಕರಿಗೆ ಕುಳಿತುಕೊಳ್ಳಲು ಮತ್ತು ಸುಗಮವಾಗಿ ಅರ್ಜಿ ಸಲ್ಲಿಸಲು ತಾಲ್ಲೂಕು ಪಂಚಾಯಿತಿ ಹಿಂಭಾಗದ ಜಾಗದಲ್ಲಿ ಶಾಮಿಯಾನ ಹಾಕಲಾಗಿದೆ. ಕುಡಿಯುವ ನೀರು ಮತ್ತು ಉಪಹಾರ ವ್ಯವಸ್ಥೆ ಜೊತೆಗೆ ಆರೋಗ್ಯ ಇಲಾಖೆಯಿಂದ ತುರ್ತು ವಾಹನ, ಅಗ್ನಿ ಶಾಮಕ ದಳ ವಾಹನದ ವ್ಯವಸ್ಥೆ ಮಾಡಲಾಗುತ್ತದೆ ಎಂದರು.

ಆರಕ್ಷಕ ನಿರೀಕ್ಷಕ ರೇವಣ್ಣ ಅವರು ಮಾತನಾಡಿ, ಜಿಲ್ಲಾ ಪೊಲೀಸ್

» ನಾಲ್ಕನೇ ಪುಟದಲ್ಲಿ

ಕಾರ್ಯಕರ್ತರು ಹೋರಾಟ ಮನೋಭಾವ ಬೆಳೆಸಿಕೊಳ್ಳಿ

• ಪ್ರಜೋದಯ ವರದಿ

ಸಕಲೇಶಪುರ: ಬಿಜೆಪಿ ಕಾರ್ಯಕರ್ತರು ಯಾವಾಗಲೂ ಹೋರಾಟದ ಮನೋಭಾವವನ್ನು ಬೆಳೆಸಿಕೊಳ್ಳಬೇಕೆಂದು ಉಡುಪಿ-ಚಿಕ್ಕಮಗಳೂರು ಸಂಸದ ಕೋಟಾ ಶ್ರೀನಿವಾಸ ಪೂಜಾರಿ ಅವರು ಸಲಹೆ ನೀಡಿದರು.

ತಾಲ್ಲೂಕಿನ ಹಾನುಬಾಳ್ ಹೋಬಳಿಯ ಖಾಸಗಿ ರೆಸಾರ್ಟ್‌ನಲ್ಲಿ ಬುಧವಾರ ಹಮ್ಮಿಕೊಂಡಿದ್ದ ವಿಧಾನ ಸಭಾ ಕ್ಷೇತ್ರದ ಬಿಜೆಪಿ ಕಾರ್ಯಕರ್ತರ ಪಂಡಿತ್ ದೀನ್ ದಯಾಳ ಉಪಾಧ್ಯಾಯ ಪ್ರಶಿಕ್ಷಣ ವರ್ಗದಲ್ಲಿ ಮಾತನಾಡಿದ ಅವರು, 2014ರ ಪೂರ್ವದ ಹಾಗು ಇಂದಿನ ಭಾರತಕ್ಕೆ ವ್ಯತ್ಯಾಸವಿದೆ. ಒಂದು ಕಾಲದಲ್ಲಿ ಭಾರತವನ್ನು ಬಡತನ ಮತ್ತು ಹಿಂದುಳಿದ ಆರ್ಥಿಕತೆಯ ದೇಶವೆಂದು ನೋಡಲಾಗುತ್ತಿತ್ತು. ಆದರೆ, ಈಗ ದೇಶವು ಜಾಗತಿಕ ಮಟ್ಟದಲ್ಲಿ ತನ್ನ ಪ್ರಭಾವವನ್ನು ಹೆಚ್ಚಿಸಿಕೊಂಡಿದೆ. ಸುಮಾರು 72ಕ್ಕೂ ಹೆಚ್ಚು ರಾಷ್ಟ್ರಗಳಿಗೆ ಆರ್ಥಿಕ ನೆರವು ನೀಡುವಷ್ಟು ಶಕ್ತಿಯುತವಾಗಿ

ಬೆಳೆದಿದೆ ಎಂದರು.

ಕೇಂದ್ರ ಸರ್ಕಾರದ ವಿವಿಧ ಜನಪರ ಯೋಜನೆಗಳು ಬಡವರು, ರೈತರು ಹಾಗು ಮಧ್ಯಮ ವರ್ಗದವರ ಬದುಕು ಸುಧಾರಿಸಲು ನೆರವಾಗಿವೆ. ರಾಜ್ಯ ಸರ್ಕಾರವು ಕೇಂದ್ರದ ಈ ಯೋಜನೆಗಳನ್ನು ತನ್ನದೇ ಸಾಧನೆ ಎಂದು ಬಿಂಬಿಸಿಕೊಳ್ಳುತ್ತಿರುವುದು ವಿಷಾದನೀಯ ಎಂದು ಟೀಕಿಸಿದರು.

ಕಾರ್ಯಕರ್ತರು ಪಕ್ಷದ ತತ್ವ ಹಾಗು ಸಿದ್ಧಾಂತಗಳನ್ನು ಜನರಿಗೆ ತಲುಪಿಸುವಲ್ಲಿ ಹೆಚ್ಚು ಸಕ್ರಿಯರಾಗಬೇಕು. ತರಬೇತಿ ವರ್ಗಗಳ ಮೂಲಕ ಸಂಘಟನಾ ಸಾಮರ್ಥ್ಯ ಹೆಚ್ಚಿಸಿಕೊಳ್ಳಬೇಕೆಂದು ಕರೆ ನೀಡಿದರು.

ಶಾಸಕ ಸಿಮೆಂಟ್ ಮಂಜು ಅವರು ಮಾತನಾಡಿ, ಸಾಮಾನ್ಯ ಕಾರ್ಯಕರ್ತನು ಉನ್ನತ ಮಟ್ಟಕ್ಕೆ ಬೆಳೆಯುವುದು ಬಿಜೆಪಿಯಲ್ಲಿ ಮಾತ್ರ ಸಾಧ್ಯ. ಇತರ ಪಕ್ಷಗಳಲ್ಲಿ ಮುಂದಿನ ಅಧ್ಯಕ್ಷರು ಯಾರಾಗುತ್ತಾರೆಂದು ಮೊದಲೇ ಹೇಳಬಹುದು. ಆದರೆ, ಬಿಜೆಪಿಯಲ್ಲಿ ಕಾರ್ಯಕರ್ತರ ಶ್ರಮಕ್ಕೆ ಮನ್ನಣೆ ಇರುವುದರಿಂದ ಯಾರೂ ಬೇಕಾದರೂ ಉನ್ನತ ಜವಾಬ್ದಾರಿ ಪಡೆಯಬಹುದು. ರಾಷ್ಟ್ರೀಯವಾದದ ಸಿದ್ಧಾಂತದಡಿ ಕಾರ್ಯ ನಿರ್ವಹಿಸುವ ಬಿಜೆಪಿ ಕುಟುಂಬಕ್ಕಿಂತ ದೇಶ ಮೊದಲು ಎಂಬ ತತ್ವವನ್ನು ನಂಬಿದೆ. ನನ್ನಂತಹ ಸಾಮಾನ್ಯ ಕಾರ್ಯಕರ್ತನನ್ನು ಶಾಸಕನನ್ನಾಗಿ ಮಾಡುವ ಮೂಲಕ ಪಕ್ಷವು ಪ್ರಾಮಾಣಿಕ ದುಡಿಮೆಗೆ ಗೌರವ ನೀಡಿದೆ. ಈ ಅಭ್ಯಾಸ ವರ್ಗವನ್ನು ಸದುಪಯೋಗಪಡಿಸಿಕೊಂಡು ಕ್ಷೇತ್ರದಲ್ಲಿ ಪಕ್ಷವನ್ನು ಮತ್ತಷ್ಟು ಬಲಿಷ್ಠಗೊಳಿಸಬೇಕೆಂದು ಮನವಿ ಮಾಡಿದರು.

ಎರಡು ದಿನಗಳ ಕಾಲ ನಡೆದ ಈ ಶಿಬಿರದಲ್ಲಿ ಕಾರ್ಯಕರ್ತರಿಗೆ ಸಂಘಟನಾ ಕೌಶಲ, ರಾಜಕೀಯ ಜಾಗೃತಿ ಮತ್ತು ಸಾರ್ವಜನಿಕ ಸಂಪರ್ಕದ ಬಗ್ಗೆ ತರಬೇತಿ ನೀಡಲಾಯಿತು. ಮಾಜಿ ಸಚಿವ ಅಪ್ಪಚ್ಚು ರಂಜನ್, ಮಾಜಿ ವಿಧಾನ ಪರಿಷತ್ ಸದಸ್ಯ ಗಣೇಶ್ ಕಾರ್ತಿಕ್, ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ, ಮುಖಂಡರಾದ ಪುಣ್ಯಪಾಲ್, ಕ್ಯಾಮನಹಳ್ಳಿ ರಾಜ್‌ಕುಮಾರ್, ನೇತ್ರಾ, ಮಂಜುನಾಥ್, ವಳಲಹಳ್ಳಿ ಅಶ್ವತ್, ಉಮಾ ರವಿಪ್ರಕಾಶ್, ಸೋಮಶೇಖರ್, ಮಧು ಬೊಮ್ಮನಕೆರೆ, ಅಬ್ಬನ ಕೃಷ್ಣ ಇತರರಿದ್ದರು.

ಜಿಲ್ಲೆಯ ವಿವಿಧೆಡೆ 7 ಕಿಶೋರ ಕಾರ್ಮಿಕರ ರಕ್ಷಣೆ

• ಪ್ರಜೋದಯ ವರದಿ



ಹಾಸನ: ಜಿಲ್ಲೆಯ ವಿವಿಧೆಡೆ ಕಾನೂನು ಬಾಹಿರವಾಗಿ ಕೆಲಸ ಮಾಡಿಕೊಂಡಿದ್ದ 7 ಕಿಶೋರ ಕಾರ್ಮಿಕರನ್ನು ರಕ್ಷಿಸಲಾಗಿದೆ.

2026ರ ಜ. 28ರಿಂದ ಮಾ. 27ರ ವರೆಗೆ ಜಿಲ್ಲಾ ಬಾಲ ಕಾರ್ಮಿಕ ಯೋಜನಾ ಸೊಸೈಟಿ, ಕಾರ್ಮಿಕ ಇಲಾಖೆಯಿಂದ ರಕ್ಷಣಾ ಕಾರ್ಯಾಚರಣೆ ಕೈಗೊಳ್ಳಲಾಗಿತ್ತು. ಮಕ್ಕಳನ್ನು ಕೆಲಸಕ್ಕೆ ಇಟ್ಟುಕೊಂಡಿದ್ದ ತಪ್ಪಿತಸ್ಥ ಮಾಲೀಕರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗಿದೆ. ಮಕ್ಕಳನ್ನು ಪೋಷಕರಿಗೆ ಒಪ್ಪಿಸಲಾಗಿದೆ.

14 ವರ್ಷದೊಳಗಿನ ಮಕ್ಕಳನ್ನು ಯಾವುದೇ ಉದ್ದಿಮೆಯಲ್ಲಿ ಹಾಗು 14 ರಿಂದ 18 ವರ್ಷದೊಳಗಿನ ಕಿಶೋರರನ್ನು ಅಪಾಯಕಾರಿ ಕೆಲಸದಲ್ಲಿ ದುಡಿಸಿಕೊಳ್ಳುವುದು ಶಿಕ್ಷಾರ್ಹ ಅಪರಾಧ. ಇಂತಹ ಮಕ್ಕಳು ಕೆಲಸದಲ್ಲಿ ತೊಡಗಿರುವುದು ಕಂಡು ಬಂದಲ್ಲಿ ಕಾರ್ಮಿಕ ಸಹಾಯವಾಣಿ 155214, ಮಕ್ಕಳ ಸಹಾಯವಾಣಿ 1098, ಹತ್ತಿರದ ಪೊಲೀಸ್ ಠಾಣೆ ಹಾಗು ಆಯಾ ತಾಲ್ಲೂಕು ಹಿರಿಯ/ಕಾರ್ಮಿಕ ನಿರೀಕ್ಷಕರ ಕಚೇರಿಗೆ ದೂರು ನೀಡಬಹುದಾಗಿದೆ ಎಂದು ಜಿಲ್ಲಾ ಕಾರ್ಮಿಕ ಅಧಿಕಾರಿ ಕೆ.ಎನ್.ಯಮುನಾ ತಿಳಿಸಿದ್ದಾರೆ.

ಅದ್ದೂರಿ ದೊಡ್ಡಮ್ಮ, ಚಿಕ್ಕಮ್ಮ, ಆನೆಕೆರೆಮ್ಮ ದೇವಿ ರಥೋತ್ಸವ

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ತಾಲ್ಲೂಕಿನ ದಂಡಿಗನಹಳ್ಳಿ ಹೋಬಳಿ ಆನೆಕೆರೆ ಗ್ರಾಮದ ದೊಡ್ಡಮ್ಮ, ಚಿಕ್ಕಮ್ಮ ದೇವಿಯ ಅದ್ದೂರಿ ಜಾತ್ರಾ ಮಹೋತ್ಸವ ಬುಧವಾರ ಸಾವಿರಾರು ಭಕ್ತರ ಸಮ್ಮುಖದಲ್ಲಿ ಜರುಗಿತು.

ತಾಲ್ಲೂಕಿನಲ್ಲಿಯೇ ಪ್ರಸಿದ್ಧವಾಗಿರುವ ಆನೆಕೆರೆ ಗ್ರಾಮದ ದೊಡ್ಡಮ್ಮ, ಚಿಕ್ಕಮ್ಮ ಜಾತ್ರಾ ಮಹೋತ್ಸವವು ಮೂರು ದಿನಗಳಿಂದ ನಡೆದು ಧಾರ್ಮಿಕ ವಿಧಿವಿಧಾನಗಳನ್ನು ಪೂರೈಸಲಾಗಿತ್ತು. ರಥೋತ್ಸವದ ಮುನ್ನಾ ದಿನ ಮಂಗಳವಾರ ಸಂಜೆ ನೆರೆಯ ಸಾಗತವಳ್ಳಿ ಗ್ರಾಮದ ರಥ, ನಿಂಬಿಹಳ್ಳಿಯ ರಥ ತಮ್ಮ

ಗ್ರಾಮಗಳಲ್ಲಿ ಅಲಂಕೃತಗೊಂಡು, ಗ್ರಾಮಸ್ಥರಿಂದ ಪೂಜೆ ಸಲ್ಲಿಸಿದ ನಂತರ ಆನೆಕೆರೆಗೆ ತರಲಾಯಿತು. ರಾತ್ರಿ, ಸಂಪ್ರದಾಯದಂತೆ ಗ್ರಾಮದ ಮಧ್ಯೆ ಸ್ವಲ್ಪ ದೂರ ಆನೆಕೆರೆ ಅಮ್ಮನವರ ರಥ ಎಳೆಯಲಾಯಿತು. ಮಂಗಳವಾರ ರಾತ್ರಿ ಮಡೆ, ಬಾಯಿ ಬೀಗ, ಸೋಮನ ಕುಣಿತ, ಗೊಂಬೆ ಕುಣಿತ, ವೀರಭದ್ರಸ್ವಾಮಿ ಸನ್ನಿಧಿಯ ಮುಂದೆ ಭಕ್ತರು ಕೆಂಡೋತ್ಸವದಲ್ಲಿ ಭಾಗಿಯಾದರು.

» ನಾಲ್ಕನೇ ಪುಟದಲ್ಲಿ

ಶಿಕ್ಷಕಿ ಮೇಲೆ ಅತ್ಯಾಚಾರಕ್ಕೆ ಯತ್ನ

• ಪ್ರಜೋದಯ ವರದಿ

ಹಾಸನ: ಡ್ರಾಪ್ ಕೊಡುವ ನೆಪದಲ್ಲಿ ಬೈಕ್ ಹತ್ತಿಸಿಕೊಂಡ ವ್ಯಕ್ತಿಯೊಬ್ಬ ಪ್ರಾಥಮಿಕ ಶಾಲಾ ಶಿಕ್ಷಕಿ ಮೇಲೆ ಅತ್ಯಾಚಾರಕ್ಕೆ ಯತ್ನಿಸಿದ್ದಾನೆ ಎನ್ನಲಾಗಿದ್ದು, ತಾಲ್ಲೂಕಿನ ದುದ್ದ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ದುದ್ದ ಹೋಬಳಿಯ ಗಂಗಾಧರ್ ಆರೋಪಿ. ಏ.6ರಂದು ಶಿಕ್ಷಕಿ ಶಾಲೆ ಮುಗಿಸಿ ಸಂಜೆ 5 ಗಂಟೆ ಸಮಯದಲ್ಲಿ ಬಸ್‌ಗಾಗಿ ನಿಂತಿದ್ದಾಗ ಅಲ್ಲಿಗೆ ಬಂದ ಗಂಗಾಧರ್ ದುದ್ದಕ್ಕೆ ಹೋಗುತ್ತಿದ್ದು ಬನ್ನಿ ಎಂದು ಕರೆದಿದ್ದಾನೆ. ಆಗ ಶಿಕ್ಷಕಿ ಬಸ್‌ನಲ್ಲೇ ಬರುತ್ತೇನೆ, ನೀವು ಹೊರಡಿ ಎಂದಿದ್ದಾರೆ. ಶಿಕ್ಷಕಿ ವಿರುದ್ಧ ಗದರಿದ ಗಂಗಾಧರ್, ಬಲವಂತವಾಗಿ ಬೈಕ್ ಮೇಲೆ ಕೂರಿಸಿಕೊಂಡಿದ್ದ ಎನ್ನಲಾಗಿದೆ.

ನಂತರ ದುದ್ದಕ್ಕೆ ಹೋಗದೆ ಗೋಪನಹಳ್ಳಿ ಮಾರ್ಗವಾಗಿ ಸುತ್ತಾಡಿಸಿದ ಗಂಗಾಧರ್ ದೊಡ್ಡಪುರದ ರೈಲ್ವೆ ಟ್ರ್ಯಾಕ್ ಸಮೀಪದ ನಿರ್ಜನ ಪ್ರದೇಶದತ್ತ ತೆರಳಿದ್ದಾನೆ. ಬೈಕ್ ನಿಲ್ಲಿಸುವಂತೆ ಹೇಳಿದರೂ ಕೇಳದ ಆರೋಪಿಯು, ನಿನ್ನ ಮೇಲೆ ಅತ್ಯಾಚಾರ ಎಸಗುತ್ತೇನೆ. ಹೆಚ್ಚು ಮಾತನಾಡಿದರೆ ಇಲ್ಲಿಯೇ ಕೊಲೆ ಮಾಡುತ್ತೇನೆಂದು ಬೆದರಿಕೆ ಹಾಕಿದ್ದಾನೆಂದು ತಿಳಿದುಬಂದಿದೆ.

ಆತನ ಮಾತಿನಿಂದ ಗಾಬರಿಗೊಂಡ ಶಿಕ್ಷಕಿ ಬೈಕ್ ಮೇಲಿಂದ ಕೆಳಗೆ ನೆಗೆದು ತಪ್ಪಿಸಿಕೊಂಡು ದೊಡ್ಡಪುರ ಗೇಟ್‌ಗೆ ಬಂದಿದ್ದಾರೆ. ನಂತರ ತಮ್ಮ ಸಹೋದರನಿಗೆ ಕರೆ ಮಾಡಿ ವಿಷಯ ತಿಳಿಸಿದ್ದು, ಹಿಮ್ಸ್‌ನಲ್ಲಿ ಚಿಕಿತ್ಸೆ ಪಡೆದಿದ್ದಾರೆ. ದುದ್ದ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಐಸ್ ಕ್ರೀಂ ಖರೀದಿ ನೆಪದಲ್ಲಿ ಹಣ ಕಳವು

• ಪ್ರಜೋದಯ ವರದಿ

ಹಾಸನ: ಐಸ್ ಕ್ರೀಂ ಖರೀದಿಸುವ ನೆಪದಲ್ಲಿ ಹೋಟೆಲ್‌ಗೆ ಬಂದ ಯುವಕನೊಬ್ಬ ಕ್ಯಾಶ್ ಕೌಂಟರ್‌ನಲ್ಲಿದ್ದ ಹಣವನ್ನು ದೋಚಿರುವ ಘಟನೆ ನಗರದ ಕೆಹೆಚ್‌ಬಿ ಬಡಾವಣೆಯ ಚಾಮುಂಡಿ ಹೋಟೆಲ್‌ನಲ್ಲಿ ಮಂಗಳವಾರ ನಡೆದಿದೆ.

ಹೋಟೆಲ್‌ಗೆ ಬಂದ ಅನಾಮಿಕ ಐಸ್ ಕ್ರೀಂ ಕೇಳಿದ್ದಾನೆ. ಐಸ್ ಕ್ರೀಂ ಇಲ್ಲವೆಂದು ಹೋಟೆಲ್‌ನವರು ಹೇಳಿದಾಗ ಎಲ್ಲಿ ಸಿಗುತ್ತದೆಂದು ಕೇಳಿದ್ದಾನೆ. ಅವರು ಬೇರೆ ಅಂಗಡಿಯ ಮಾರ್ಗ ತೋರಿಸುತ್ತಿದ್ದಂತೆ ಆ ಕಡೆಗೆ ಹೋದಂತೆ ನಟಿಸಿದ ಯುವಕ ಪುನ: ಹೋಟೆಲ್‌ಗೆ ಬಂದು ಕುಳಿತಿದ್ದಾನೆ. ಸಾರ್ವಜನಿಕರು ಇಲ್ಲದಿರುವುದು ಹಾಗು ಮಾಲೀಕರು ಒಳಗೆ ಇರುವುದನ್ನು ಖಚಿತಪಡಿಸಿಕೊಂಡ ಆತ ಕ್ಯಾಶ್ ಕೌಂಟರ್ ಬಳಿ ಬಂದು ಹಣವನ್ನೆಲ್ಲಾ ಕದ್ದು ಪರಾರಿಯಾಗಿದ್ದಾನೆ.

ಕೆಲ ಸಮಯದ ಬಳಿಕ ಹೋಟೆಲ್ ಮಾಲೀಕರು ಕ್ಯಾಶ್ ಕೌಂಟರ್ ಪರಿಶೀಲಿಸಿದಾಗ ಖಾಲಿ ಇರುವುದು ತಿಳಿದಿದೆ. ತಕ್ಷಣ ಸಿಸಿಟಿವಿ ಕ್ಯಾಮರಾ ಪರಿಶೀಲಿಸಿದಾಗ ಕಳ್ಳನ ಕರಾಮತ್ತು ಬಯಲಾಗಿದೆ. ನಗರ ಠಾಣೆ ಪೊಲೀಸರು ಪರಿಶೀಲಿಸಿ, ಪ್ರಕರಣ ದಾಖಲಿಸಿಕೊಂಡು ಆರೋಪಿ ಪತ್ತೆಗೆ ಮುಂದಾಗಿದ್ದಾರೆ.

ಎರಡು ತಿಂಗಳಿನಿಂದ 40 ಜನರ ಭೇಟಿ | ಹಣ, ಸಮಯ ಉಳಿತಾಯದ ಆಶಾಭಾವ

ಬಡವರಿಗೆ ಸಂಜೀವಿನಿಯಾದ ಉಚಿತ ಕಾನೂನು ಸಲಹಾ ಕೇಂದ್ರ

-ಮಲ್ಲಿಕಾರ್ಜುನ ಕೊಚ್ಚರಗಿ

• ಪ್ರಜೋದಯ ವರದಿ

ಹಾಸನ: ಬಡವರು, ಅನಕ್ಷರಸ್ಥರಿಗೆ ಕಾನೂನು ಅರಿವು ಮೂಡಿಸುವ ಉದ್ದೇಶದಿಂದ ಜಿಲ್ಲಾಡಳಿತ ಹಾಗು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಿಂದ ಉಚಿತ ಕಾನೂನು ಸಲಹಾ ಕೇಂದ್ರ ಪ್ರಾರಂಭಿಸಿದ್ದು, ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ.

ಜಿಲ್ಲಾಧಿಕಾರಿ ಕಚೇರಿಯ ಕೊಠಡಿ ಸಂಖ್ಯೆ 10ರಲ್ಲಿ ವಕೀಲರಿಗೆ ಪ್ರತ್ಯೇಕ ವ್ಯವಸ್ಥೆ ಮಾಡಿಕೊಟ್ಟಿದ್ದು, ಗ್ರಾಮೀಣ ಭಾಗದ ಜನರಿಗೆ ಕಾನೂನಾತ್ಮಕ ಸಲಹೆಗಳನ್ನು ನೀಡುತ್ತಿದ್ದಾರೆ. ಮಾ. 1ರಂದು ಜಿಲ್ಲಾ ನ್ಯಾಯಾಧೀಶರು ಹಾಗು ಜಿಲ್ಲಾಧಿಕಾರಿ ನೇತೃತ್ವದಲ್ಲಿ ಕಾನೂನು ಸಲಹಾ ಕೇಂದ್ರ ಸ್ಥಾಪಿಸಲಾಗಿದೆ. ಈವರೆಗೆ 40 ಜನರು ಮಾಹಿತಿ ಪಡೆದಿದ್ದಾರೆ. ಮತ್ತೆ ಕೆಲವರು ದೂರವಾಣಿ ಕರೆ ಮೂಲಕ ಸಮಸ್ಯೆಗಳನ್ನು ಹೇಳಿಕೊಳ್ಳುತ್ತಿದ್ದಾರೆ. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಿಂದ ವಕೀಲ ತಿಮ್ಮಶೆಟ್ಟಿ ಎಂಬುವವರನ್ನು ಈ ಕಾರ್ಯಕ್ಕೆ ನಿಯೋಜಿಸಲಾಗಿದೆ. ಪೊಲೀಸ್ ಠಾಣೆ, ಕೋರ್ಟ್, ಕೇಸು, ರಾಜಿ ಸಂಧಾನ, ಶಿಕ್ಷೆ ದಂಡ ಹೀಗೆ ಇಂತಹ ಪದಗಳೆಂದರೆ ಸಾರ್ವಜನಿಕರಿಗೆ ಭಯವಾಗುವುದು ಸಹಜ. ಅಂತಹವರಿಗೆ ಈ ಕೇಂದ್ರವು ಸಂಜೀವಿನಿಯಂತೆ ಕೆಲಸ ಮಾಡುತ್ತಿದೆ.

ಪ್ರತಿದಿನ ಅನೇಕ ಕಕ್ಷಿದಾರರು ಜಿಲ್ಲಾಧಿಕಾರಿ ಕಚೇರಿಗೆ ಭೇಟಿ ನೀಡಿ ತಮ್ಮ ವೈಯಕ್ತಿಕ, ಕುಟುಂಬ, ಭೂಮಿ ಹಾಗು ಇತರ ಕಾನೂನು ಸಂಬಂಧಿತ ಸಮಸ್ಯೆಗಳ ಬಗ್ಗೆ ವಕೀಲರಿಂದ ಸಲಹೆ ಪಡೆಯುತ್ತಿದ್ದಾರೆ. ವಕೀಲರು ಸಮಸ್ಯೆಗಳನ್ನು ಆಲಿಸಿ, ಸಂಬಂಧಿತ ಕಾನೂನು ವಿಧಿಗಳು ಮತ್ತು ಪರಿಹಾರ ಮಾರ್ಗಗಳನ್ನು ಸರಳವಾಗಿ ವಿವರಿಸುತ್ತಿದ್ದಾರೆ. ಈ ಸೇವೆಯಿಂದಾಗಿ ಬಡಜನರಿಗೆ ನ್ಯಾಯಾಲಯಕ್ಕೆ ತೆರಳುವ ಮುನ್ನವೇ ಸೂಕ್ತ ಮಾರ್ಗದರ್ಶನ ಸಿಗುತ್ತಿದ್ದು, ಅನಗತ್ಯ ವೆಚ್ಚ ಮತ್ತು ಸಮಯದ ಉಳಿತಾಯವಾಗುತ್ತಿದೆ. ಜೊತೆಗೆ ಜನರಲ್ಲಿ ಕಾನೂನು ಅರಿವು ಹೆಚ್ಚಲು ಸಹ ಇದು ಸಹಾಯಕವಾಗಿದ್ದು, ನ್ಯಾಯವನ್ನು ಎಲ್ಲರಿಗೂ ಸಮಾನವಾಗಿ ತಲುಪಿಸುವ ದಿಶೆಯಲ್ಲಿ ಪರಿಣಾಮಕಾರಿ ಹೆಜ್ಜೆಯಾಗಿದೆ.

ಸಿವಿಲ್ ವ್ಯಾಜ್ಯಗಳೇ ಹೆಚ್ಚು

ಇತ್ತೀಚಿನ ವರ್ಷಗಳಲ್ಲಿ ಹಾಸನದಲ್ಲಿ ಸಿವಿಲ್ ವ್ಯಾಜ್ಯಗಳ ಪ್ರಮಾಣ ಹೆಚ್ಚುತ್ತಿದೆ. ಆಸ್ತಿಗಾಗಿ ಕುಟುಂಬಸ್ಥರ ಜಗಳ, ಆಸ್ತಿ ಭಾಗ, ಕೌಟುಂಬಿಕ ಕಲಹದಿಂದ ಹೊಡೆದಾಡಿಕೊಳ್ಳುವುದು ಇಂತಹ ಅಹಿತಕರ ಘಟನೆಗಳು ಹೆಚ್ಚುತ್ತಲೇ ಇವೆ. ಇಂತಹ ಸಂದರ್ಭದಲ್ಲಿ ಎಫ್‌ಐಆರ್ ದಾಖಲಾಗುವುದು ಸಾಮಾನ್ಯ ಪ್ರಕ್ರಿಯೆ. ಎಫ್‌ಐಆರ್ ದಾಖಲಾದ ಬಳಿಕ ರಾಜಿ ಸಂಧಾನಕ್ಕೆ ಕಕ್ಷಿದಾರರು ಎಷ್ಟೇ ಪ್ರಯತ್ನಿಸಿದರೂ ಒಮ್ಮತ ಮೂಡಿ ಬರುವುದಿಲ್ಲ. ಅಂತಹ ಸಂದರ್ಭದಲ್ಲಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಕೆಯಾಗುತ್ತಿದ್ದಂತೆ ಫಿರ್ಯಾದಿಗಳು ಸಹ ಮೊದಲು ಜಾಮೀನು ಪಡೆಯುವುದು ಅನಿವಾರ್ಯವಾಗಿರುತ್ತದೆ. ಅಂತಹ ಸಂದರ್ಭದಲ್ಲಿ ವಕೀಲರ ನೆರವು ಪಡೆಯುವುದು ಅತ್ಯವಶ್ಯಕ. ಈ ಅಸ್ತ್ರವನ್ನೇ ಬಂಡವಾಳ ಮಾಡಿಕೊಳ್ಳುವ ಕೆಲ ವಕೀಲರು ಜನರಿಂದ ಅಗತ್ಯಕ್ಕಿಂತ ಹೆಚ್ಚು ಹಣ ಪೀಕುವ ಸಾಧ್ಯತೆಗಳು ಹೆಚ್ಚಿರುತ್ತವೆ. ಅಂತಹ ಸಂದರ್ಭದಲ್ಲಿ ಉಚಿತ ಕಾನೂನು ಸಲಹಾ ಕೇಂದ್ರಕ್ಕೆ ಭೇಟಿ ನೀಡಿದರೆ ಯಾವ ಸೆಕ್ಷನ್ ಅಡಿಯಲ್ಲಿ ಪ್ರಕರಣ ದಾಖಲಾಗಿದೆ, ಆರೋಪ ಸಾಬೀತಾದರೆ ಎಷ್ಟು ವರ್ಷಗಳವರೆಗೆ ಶಿಕ್ಷೆ ವಿಧಿಸುವ ಸಾಧ್ಯತೆ ಇದೆ, ಜಾಮೀನು ಪಡೆಯಲು ಅನುಸರಿಸಬೇಕಾದ ಕ್ರಮಗಳು, ನ್ಯಾಯಾಧೀಶರ ಮುಂದೆ ಮಾತನಾಡುವ ಬಗೆ ಹೀಗೆ ಎಲ್ಲಾ ಮಾಹಿತಿಯನ್ನು ಉಚಿತ ಕಾನೂನು ಸಲಹಾ ಕೇಂದ್ರದಲ್ಲಿ ನೀಡಲಾಗುತ್ತಿದೆ.

> **ಕಳೆದ ಎರಡು ತಿಂಗಳಿನಿಂದ ಉಚಿತ ಕಾನೂನು ಸಲಹೆಗಾರನಾಗಿ ಕೆಲಸ ಮಾಡುತ್ತಿದ್ದೇನೆ. 40ಕ್ಕಿಂತ ಹೆಚ್ಚು ಜನರು ನೇರವಾಗಿ ಭೇಟಿ ಮಾಡಿ ಸಮಸ್ಯೆ ಹೇಳಿಕೊಂಡಿದ್ದಾರೆ. ಇನ್ನು ಅನೇಕರು ಕರೆ ಮಾಡಿ ಮಾಹಿತಿ ಪಡೆದಿದ್ದಾರೆ. ಉಚಿತ ಕಾನೂನು ಸಲಹಾ ಕೇಂದ್ರದಿಂದ ಸಾರ್ವಜನಿಕರ ಸಮಯ ಹಾಗು ಹಣ ಉಳಿತಾಯವಾಗಿದೆ.**
> -ತಿಮ್ಮಶೆಟ್ಟಿ, ವಕೀಲ

ಪ್ರತಿ ಸೋಮವಾರ ಕಡ್ಡಾಯ

ಉಚಿತ ಕಾನೂನು ಸಲಹಾ ಕೇಂದ್ರಕ್ಕೆ ನಿಯೋಜನೆಗೊಂಡಿರುವ ವಕೀಲರು ಖಾಯಂ ನೌಕರರಲ್ಲ, ಗೌರವ ಧನ ಆಧಾರದಡಿ ಅವರು ಸೇವೆ ಸಲ್ಲಿಸುತ್ತಿದ್ದು, ಪ್ರತಿದಿನವೂ ಕಚೇರಿಯಲ್ಲಿ ಲಭ್ಯ ಇರುವುದಿಲ್ಲ. ಪ್ರತಿ ಸೋಮವಾರ ಮಾತ್ರ ಕೇಂದ್ರದಲ್ಲಿರುವುದನ್ನು ಕಡ್ಡಾಯಗೊಳಿಸಲಾಗಿದೆ. ಉಳಿದಂತೆ ಯಾರಾದರೂ ಕರೆ ಮಾಡಿ ತಾವು ಬಂದಿರುವ ಮಾಹಿತಿ ನೀಡಿದರೆ ವಕೀಲರು ಬರುತ್ತಾರೆ. ಗ್ರಾಮೀಣ ಭಾಗದಿಂದ ಬರುವ ಜನರು ಬರಿಗೈಯಲ್ಲಿ ವಾಪಾಸ್ಸಾಗುವ ಬದಲು ವಕೀಲರ ಮೊ.ನಂ. 9964125278, ಸಹಾಯವಾಣಿ 15100 ಇಲ್ಲಿಗೆ ಕರೆ ಮಾಡಬಹುದು.

ಅಪಘಾತ: ವ್ಯಕ್ತಿಗೆ ಪೆಟ್ಟು

• ಪ್ರಜೋದಯ ವರದಿ

ಸಕಲೇಶಪುರ: ಮತ ಚಲಾಯಿಸುವುದಕ್ಕಾಗಿ ಊರಿಗೆ ಹೊರಟಿದ್ದ ಕೇರಳ ನಿವಾಸಿಯೊಬ್ಬರು ಅಪಘಾತದಲ್ಲಿ ಗಂಭೀರ ಗಾಯಗೊಂಡಿರುವ ಘಟನೆ ತಾಲ್ಲೂಕಿನ ಮಳಲಿ ಬೈಪಾಸ್ ಬಳಿ ಬುಧವಾರ ನಡೆದಿದೆ.

ಏಪ್ರಿಲ್ 9ರಂದು ನಡೆಯಲಿರುವ ಕೇರಳ ವಿಧಾನಸಭೆ ಚುನಾವಣೆ ಹಿನ್ನಲೆಯಲ್ಲಿ ಕಾಸರಗೋಡು ಜಿಲ್ಲೆಯ ವಿದ್ಯಾನಗರದ ಅಬ್ದುಲ್ ಖಾದರ್ ಅವರು ಸ್ನೇಹಿತರೊಂದಿಗೆ ಕಾರಿನಲ್ಲಿ ತೆರಳುತ್ತಿದ್ದರು. ಚಾಲಕನ ನಿಯಂತ್ರಣ ತಪ್ಪಿದ ಕಾರು ರಸ್ತೆಯಿಂದ ಸುಮಾರು 25 ಅಡಿ ದೂರಕ್ಕೆ ಹಾರಿದೆ. ಅಪಘಾತದ ಪರಿಣಾಮ ಅಬ್ದುಲ್ ಖಾದರ್ ಅವರಿಗೆ ಗಂಭೀರ ಗಾಯಗಳಾಗಿದ್ದು, ತಕ್ಷಣ ಅವರನ್ನು ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಯಿತು. ಹೆಚ್ಚಿನ ಚಿಕಿತ್ಸೆಗೆ ಮಂಗಳೂರಿನ ಆಸ್ಪತ್ರೆಗೆ ರವಾನಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ದೂರ ಪಯಣ ಹಾಗು ನಿದ್ರೆ, ಮಂಪರು ಅಪಘಾತಕ್ಕೆ ಕಾರಣವಾಗಿರಬಹುದೆಂದು ಶಂಕಿಸಲಾಗಿದೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜಿಲ್ಲಾಧಿಕಾರಿ ಕಚೇರಿಯಲ್ಲಿ
ಉಚಿತ ಕಾನೂನು ನೆರವು ನೀಡುವ



ಪ್ರವಾಸಿ ತಾಣಗಳು ಸಂಸ್ಕೃತಿಯ ಪ್ರತಿಬಿಂಬ ಗೊರೂರು ಅನಂತರಾಜು ಪ್ರವಾಸ ಕಥನ

ಇತಿಹಾಸವು ಆಧಾರಗಳಿಂದಲೇ ಸೃಷ್ಟಿಯಾಗಿದೆ. ಆಧಾರಗಳಿಲ್ಲದೆ ಇತಿಹಾಸವಿಲ್ಲ. ಒಂದು ಸ್ಥಳದಲ್ಲಿ ದೊರೆತ ಸಾಹಿತ್ಯ, ನಾಣ್ಯ, ಶಾಸನ, ಸ್ಮಾರಕ, ದೇವಾಲಯ, ಮುಂತಾದವುಗಳು ತನ್ನದೇ ಚರಿತ್ರೆಯನ್ನು ಜಗತ್ತಿಗೆ ಸಾರುತ್ತವೆ. ಕಾಲ ಎಲ್ಲವನ್ನು ಮರೆಸುತ್ತದೆ ಮತ್ತು ಎಲ್ಲವನ್ನು ಮರೆಸುತ್ತದೆ. ಆದರೆ ಅಲ್ಲಿ ಉಳಿಯುವ ಸಾಕ್ಷಿಗಳು ಮತ್ತೆ ಮತ್ತೆ ನೆನಪುಗಳನ್ನು ಮರುಕಳಿಸುತ್ತದೆ. ಕಾಲದ ಹೆಜ್ಜೆ ಗುರುತುಗಳನ್ನು ಹುಡುಕುವುದು ಎಂದರೆ ಒಂದು ಅನ್ವೇಷಣೆಯೇ ಸರಿ. ದೇಶ ಸುತ್ತು ಕೋಶ ಓದು ಎಂದು ಜನಜನಿತವಾದ ಗಾದೆ ಮಾತು ಕೇವಲ ಜ್ಞಾನಾರ್ಜನೆಯ ಮಾರ್ಗವಲ್ಲ; ಅದು ಮನುಷ್ಯನ ಅಸ್ತಿತ್ವದ ವಿಸ್ತರಣೆಯ ಸಂಕೇತವೂ ಹೌದು. ಇಡೀ ಪ್ರಪಂಚವನ್ನು ಒಂದು ಮಹತ್ತರವಾದ ಗ್ರಂಥವೆಂದು ಭಾವಿಸುವುದಾದರೆ, ಪ್ರೇಕ್ಷಣೀಯ ಸ್ಥಳಗಳು ಆ ಗ್ರಂಥದ ಒಂದೊಂದು ಅಮೂಲ್ಯವಾದ ಅಧ್ಯಾಯಗಳು ಎನ್ನಬಹುದು. ನಾಗರಿಕತೆಯ ಆರಂಭದಿಂದ ಇಂದಿನ ಆಧುನಿಕ ಯುಗದವರೆಗೆ, ಮನುಷ್ಯ ಹೊಸತನ್ನು ಹುಡುಕುತ್ತಾ, ಪ್ರಕೃತಿಯ ಸೊಬಗನ್ನು ಆರಾಧಿಸುತ್ತಾ ಮತ್ತು ಪೂರ್ವಜರು ಬಿಟ್ಟು ಹೋದ ಸ್ಮಾರಕಗಳ ಮೌನ ಸಂಭಾಷಣೆಯನ್ನು ಆಲಿಸುತ್ತಾ ಸಾಗಿದ್ದಾನೆ. ಪ್ರವಾಸವೆಂಬುದು ಹೊಸ ಚೇತನವನ್ನು ತುಂಬುವ ಪಯಣವಾಗಿದೆ. ಪ್ರವಾಸವೆಂದರೆ ಕೇವಲ ಒಂದು ಭೌಗೋಳಿಕ ಬಿಂದುವಿನಿಂದ ಮತ್ತೊಂದು ಬಿಂದುವಿಗೆ ಚಲಿಸುವುದಲ್ಲ, ಅದು ನಮ್ಮೊಳಗಿನ ಸಂಕುಚಿತ ಭಾವನೆಗಳನ್ನು ಕಿತ್ತೆಸೆದು, ವಿಶಾಲವಾದ ವಿಶ್ವದೊಂದಿಗೆ ಮೇಳೈಸುವ ಪ್ರಕ್ರಿಯೆಯಾಗಿದೆ. ಒಂದು ಕಲ್ಲಿನ ಕೆತ್ತನೆಯಲ್ಲಿ ಅಡಗಿರುವ ಶಿಲ್ಪಿಯ ಶ್ರಮ, ಗೋಪುರದ ಭವ್ಯತೆ ಅಥವಾ ಪ್ರಕೃತಿಯ ಮಡಿಲಲ್ಲಿ ಹರಿಯುವ ಜಲಪಾತದ ನಿನಾದ ಇವೆಲ್ಲವೂ ನಮಗೆ ಬದುಕಿನ ಅರ್ಥವನ್ನು ಹೊಸದಾಗಿ ಕಲಿಸಿಕೊಡುತ್ತವೆ.

ನನ್ನ ಹಿತೈಷಿ ಸ್ನೇಹಿತರಾದ ಗೊರೂರು ಅನಂತರಾಜು ಅವರು ಹೆಸರೇ ಹೇಳುವಂತೆ ಗೊರೂರಿನವರು. ಇವರ ಬರಹದ ಹವ್ಯಾಸ ನಿಲ್ಲದ ಪಯಣವಾಗಿದೆ. ತನಗೆ ಗೊತ್ತಿರುವ ವಿಷಯದೊಂದಿಗೆ ಮತ್ತಷ್ಟು ಅಧ್ಯಯನ, ವಿಷಯ ಸಂಗ್ರಹದ ಮೂಲಕ ಲೇಖನಗಳನ್ನು ಪ್ರಕಟಿಸುತ್ತಿರುವ ಇವರು ಅವೆಲ್ಲವನ್ನು ಒಟ್ಟಾಗಿಸಿ ಓದುಗರಿಗೆ ಒಂದೆಡೆ ಸಿಗುವಂತೆ ಮಾಡಿರುವ ಈ ಪ್ರಯತ್ನ ನಿಜಕ್ಕೂ ಶ್ಲಾಘನೀಯವಾದುದು. ಗೊರೂರು ಅನಂತರಾಜುರವರು ಪ್ರವಾಸಿ ಸ್ಥಳಗಳಿಗೆ ಭೇಟಿ ನೀಡುವ ಮೂಲಕ ಸುಮ್ಮನಾಗಲಿಲ್ಲ; ಬದಲಾಗಿ ಆ ಸ್ಥಳದ ಕುರಿತು ಮಾಹಿತಿ ಸಂಗ್ರಹಿಸಿ ಓದುಗ ಬಳಗಕ್ಕೆ ಉಣಬಡಿಸಿದ್ದಾರೆ. ಎಡತೊರೆ ಎನಿಸಿದ ಕಾವೇರಿ ನದಿಯ ತಟದಲ್ಲಿ ನಿರ್ಮಾಣಗೊಂಡಿರುವ ಅರ್ಕೇಶ್ವರ ದೇವಾಲಯ ಕುರಿತ ಮಾಹಿತಿ ನೀಡಿದ್ದಾರೆ. ಮುಗೂರಿನ ತ್ರಿಪುರ ಸುಂದರಿ ದೇವಾಲಯದ ಕುರಿತ ಮಾಹಿತಿ ವಿಚಾರ ಪೂರ್ಣವಾಗಿದೆ. ತಲಕಾಡಿನಲ್ಲಿ ಪಂಚಲಿಂಗ ದರ್ಶನದ ಬಗೆಗೆ ನೀಡಿರುವ ಮಾಹಿತಿ, ಅಲಮೇಲಮ್ಮನ ವಿಚಾರ, ಕಾವೇರಿ ತಟದಲ್ಲಿನ ಮರಳರಾಶಿ, ಗಂಗ ಇತಿಹಾಸದ ಬಗ್ಗೆ ಬೆಳಕು ಚೆಲ್ಲಿರುವರು. ಬಿಳಿಗಿರಿರಂಗನ ಬೆಟ್ಟದಲ್ಲಿ ನೆಲೆಸಿರುವ ರಂಗನಾಥ ಸ್ವಾಮಿಯ ದೇವಾಲಯದ ಕುರಿತು ನೀಡಿರುವ ಮಾಹಿತಿ ಓದುಗರಿಗೆ ಅತ್ಯುಪಯುಕ್ತವಾಗಿದೆ.

ಬೆಲಗೂರಿನ ಹಾಲು ರಾಮೇಶ್ವರ ದೇವಾಲಯದ ಐತಿಹ್ಯವನ್ನು ತಿಳಿಯುತ್ತಾ ಓದು ಮುಂದುವರಿದಾಗ ಅನಂತರಾಜುರವರ ಹಕ್ಕಿಂಟ್ಟೂರಾದ ಗೊರೂರಿನ ತ್ರಿಕೂಟಲಿಂಗೇಶ್ವರ ದೇವಾಲಯ ಮಾಹಿತಿ ದೊರಕುತ್ತದೆ. ಪ್ರವಾತಿ ತಾಣಗಳ ಕುರಿತು ತಿಳಿಯುವ ನಮ್ಮ ಓದುವ ಪಯಣ, ಗೊರೂರಿನ ರಥಚಕ್ರಗಳ ಕುರಿತಂತೆ ತಿಳಿಸುತ್ತದೆ. ಚುಂಚನಕಟ್ಟೆಯ ಕೋದಂಡರಾಮನ ದೇವಾಲಯದ ವಿಚಾರವನ್ನು ಲೇಖಕರಾದ ಗೊರೂರು ಅನಂತರಾಜುರವರು ತುಂಬಾ ಚೆನ್ನಾಗಿ ಓದುಗರಿಗೆ ಕಟ್ಟಿಕೊಟ್ಟಿದ್ದಾರೆ. ಈ ಪ್ರವಾಸ ಕಥನ ಕೇವಲ ಕರ್ನಾಟಕದ ಸ್ಥಳಗಳನ್ನು ಮಾತ್ರವಲ್ಲದೇ ತಮಿಳುನಾಡಿನ ಕುಂಭಕೋಣಂನ ನವಗ್ರಹ ದೇವಾಲಯಗಳವರೆಗೂ ಕರೆದೊಯ್ಯುತ್ತದೆ.

ಒಟ್ಟಿನಲ್ಲಿ ಈ ಕೃತಿಯ ಆಶಯವೇನೆಂದರೆ, ಈ ಕೃತಿಯು ಕೇವಲ ಪ್ರವಾಸಿ ತಾಣಗಳ ಪಟ್ಟಿಯಲ್ಲ; ಇದು ಇತಿಹಾಸ ಮತ್ತು ವರ್ತಮಾನದ ನಡುವಿನ ಸೇತುವೆ. ನಮ್ಮ ನಾಡಿನ ಅಪ್ರತಿಮ ವಾಸ್ತುಶಿಲ್ಪ, ಪ್ರಕೃತಿಯ ಅಚ್ಚರಿಯಗಳು ಮತ್ತು ಧಾರ್ಮಿಕ ಕೇಂದ್ರಗಳ ಹಿಂದಿರುವ ತಾತ್ವಿಕ ಹಿನ್ನೆಲೆಯನ್ನು ಓದುಗರಿಗೆ ಮನದಟ್ಟು ಮಾಡುವ ಪ್ರಯತ್ನ ಇಲ್ಲಿ ನಡೆದಿದೆ. ಪ್ರತಿಯೊಂದು ಸ್ಥಳಕ್ಕೂ ತನ್ನದೇ ಆದ ಕಥೆಯಿದೆ, ತನ್ನದೇ ಆದ ನೋವುನಲಿವುಗಳಿವೆ. ಆ ಸ್ಥಳಗಳ ಮೌನದಲ್ಲಿ ಅಡಗಿರುವ ಇತಿಹಾಸದ ಚೀತ್ಕಾರವನ್ನು ಅಥವಾ ಶಾಂತಿಯನ್ನು ಗುರುತಿಸುವ ದೃಷ್ಟಿಕೋನವನ್ನು ಈ ಬರಹಗಳು ನೀಡುತ್ತವೆ. ಪ್ರವಾಸೀ ತಾಣಗಳು ಸಂಸ್ಕೃತಿಯ ಪ್ರತಿಬಿಂಬವಾಗಿವೆ.

ಒಂದು ಪ್ರೇಕ್ಷಣೀಯ ಸ್ಥಳವು ಒಂದು ಜನಾಂಗದ ಸಂಸ್ಕೃತಿ ಮತ್ತು ಕಲಾಪ್ರೌಢಿಮೆಯ ಕೈಗನ್ನಡಿಯಾಗಿರುತ್ತದೆ. ಹಳೇಬೀಡು ಬೇಲೂರಿನ ಶಿಲ್ಪಕಲೆಗಳು ಕೇವಲ ಕಲ್ಲುಗಳಲ್ಲ, ಅವು ಅಂದಿನ ಕಾಲದ ಜನರ ಸೌಂದರ್ಯ ಪ್ರಜ್ಞೆಯ ಸಾಕಾರ ರೂಪಗಳು. ಹಾಗೆಯೇ, ಪಶ್ಚಿಮ ಘಟ್ಟಗಳ ಹಸಿರು ಕೇವಲ ಅರಣ್ಯವಲ್ಲ, ಅದು ನಮ್ಮ ಜೀವಸಂಕುಲದ ಅಸ್ತಿತ್ವದ ಮೂಲ. ಇವುಗಳನ್ನು ರಕ್ಷಿಸುವುದು ಮತ್ತು ಮುಂದಿನ ಪೀಳಿಗೆಗೆ ದಾಟಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಈ ಹೊತ್ತಿಗೆಯು ಆ ಜವಾಬ್ದಾರಿಯನ್ನು ಪ್ರತಿಯೊಬ್ಬ ಓದುಗನಲ್ಲೂ ಜಾಗೃತಗೊಳಿಸುತ್ತದೆ ಎಂಬ ನಂಬಿಕೆ ನನಗಿದೆ.

ಪ್ರವಾಸವು ಮನುಷ್ಯನನ್ನು ವಿನಮ್ರನನ್ನಾಗಿ ಮಾಡುತ್ತದೆ. ಜಗತ್ತು ಎಷ್ಟು ವಿಶಾಲವಾಗಿದೆ ಮತ್ತು ಅದರ ಮುಂದೆ ತಾನು ಎಷ್ಟು ಸಣ್ಣವನು ಎಂಬ ಸತ್ಯದ ದರ್ಶನ ಪ್ರವಾಸಿಗನಿಗಾಗುತ್ತದೆ. ಈ ಕೃತಿಯ ಪುಟಗಳನ್ನು ತಿರುವಿದಾಗ ಓದುಗರು ಕೇವಲ ಮಾಹಿತಿಯನ್ನು ಪಡೆಯದೆ, ಆಯಾ ಸ್ಥಳಗಳ ಅನುಭೂತಿಯನ್ನು ಪಡೆಯಲಿ ಎಂಬುದು ನನ್ನ ಆಶಯ. ಆಗ ಮಾತ್ರ ಗೊರೂರು ಅನಂತರಾಜುರವರು ಹೊರತರುತ್ತಿರುವ ಈ ಕೃತಿಯ ಉದ್ದೇಶ ಸಾಧಿತವಾದಂತೆ. ಕಾಲದ ಪ್ರವಾಹದಲ್ಲಿ ಅಳಿಯದೆ ಉಳಿದಿರುವ ಈ ಐತಿಹಾಸಿಕ ಮತ್ತು ನೈಸರ್ಗಿಕ ತಾಣಗಳತ್ತ ಒಂದು ಅರ್ಥಪೂರ್ಣ ಪಯಣ ಬೆಳೆಸಲು ಈ ಕೃತಿ ನಿಮಗೆ ಪ್ರೇರಣೆಯಾಗಲಿ.

- ಕೆ.ಎನ್.ಚಿದಾನಂದ, ಸಹ ಶಿಕ್ಷಕರು, ಜಿ.ಜಿ.ಜೆ.ಸಿ., ಪ್ರಧಾನ ಪ್ರೌಢಶಾಲಾ ವಿಭಾಗ, ಆರ್.ಸಿ. ರಸ್ತೆ, ಹಾಸನ-573201.

ಇಂದಿನ ಬೇಸಿಗೆ ಮತ್ತಷ್ಟು ಬಿಸಿ

ಮಕ್ಕಳ ಬೇಸಿಗೆ ರಜೆ ಇನ್ನೇನು ಆರಂಭವಾಗಲಿದೆ. ಈ ಬಾರಿಯ ಬೇಸಿಗೆ ಎಲ್ ನಿನೋ ದ ಕಾರಣದಿಂದ ಅಪಾಯಕಾರಿಯಾಗಲಿದೆ. ಆದ್ದರಿಂದ ಈ ಬೇಸಿಗೆಯ ರಜೆಯಲ್ಲಿ ನೀವು ತೆಗೆದುಕೊಳ್ಳಬೇಕಾದ ಕ್ರಮಗಳು ಮತ್ತು ಇದಕ್ಕೆ ಕಾರಣಗಳನ್ನು ಮುಂದೆ ಓದಿ.

ನಾನು ಹೇಳಿ ಕೇಳಿ ಕೃಷಿಕ. ನನ್ನ ತಂದೆಯ ಹೆಸರಿನಲ್ಲಿ ಕೃಷಿ ಭೂಮಿ ಇದೆ ಎನ್ನುವ ಕಾರಣಕ್ಕೆ ನಾನು ಕೃಷಿಕನಾದುದಲ್ಲ. ತಂದೆಯ ಮತ್ತು ಅಮ್ಮನಿಂದ ತರಬೇತಿ ಪಡೆದ ವೃತ್ತಿಪರ ಕೃಷಿಕ. ಕೃಷಿಕರು ಆಗಿ ಹೋಗಿರುವುದರ ಬಗ್ಗೆ ವ್ಯಥೆಪಡುತ್ತಾ ಕುಳಿತುಕೊಳ್ಳುವುದಿಲ್ಲ. ಬದಲಾಗಿ ಮುಂದಿನ ಬೆಳೆಗೆ ಹೂಡಿಕೆ ಮಾಡುವುದನ್ನು ಮುಂದುವರಿಸುತ್ತಾರೆ. ನಿಸರ್ಗದ ಆಶ್ವಾಸನೆಗಳನ್ನು ನಂಬಿ ಅವರ ಹೂಡಿಕೆ ಮುಂದುವರಿಯುತ್ತದೆ. ಮುಂಗಾರು ನಾಲ್ಕೈದು ತಿಂಗಳು ಇರುವಾಗಲೇ ಸಮಗ್ರ ಕಳೆ ಮತ್ತು ಕೀಟ ನಿಯಂತ್ರಣಕ್ಕಾಗಿ ಆತ ಮಾಗಿ ಉಳುಮೆಯಲ್ಲಿ ತೊಡಗಿರುತ್ತಾನೆ. ಪ್ರಕೃತಿ ಮುಂದಿನ ಮಳೆ ಬೆಳೆ ಸಮೃದ್ಧಿಯ ಬಗ್ಗೆ ಆತ ತೆರೆದ ಕಣ್ಣಿನ ವೀಕ್ಷಣೆಯಲ್ಲಿರುತ್ತಾನೆ.

ನಾನು ಈ ವರ್ಷ ಬಹಳ ಖುಷಿಯಲ್ಲಿದ್ದೆ. ಏಕೆಂದರೆ ಮಾವು ಮತ್ತು ಗೇರು ದಂಡಿಯಾಗಿ ಹೂ ಬಿಟ್ಟಿದ್ದವು. ಮಾವು ಗೇರು ಚನ್ನಾಗಿ ಹೂ ಬಿಟ್ಟ ವರ್ಷ ಮಳೆ ಬೆಳೆ ಚನ್ನಾಗಿರುತ್ತದೆ ಎಂದು ಕರಾವಳಿಗರು ನಂಬುತ್ತಾರೆ. ಆದರೆ ಮಾವಿನ ಹೂ ನೋಡ ನೋಡುತ್ತಾ ಕರಗಿಯೇ ಹೋಯಿತು. ಆದ್ದರಿಂದ ಅವ್ಯಕ್ತ ಭಯದಲ್ಲಿದ್ದೆ. ಅದರ ಜೊತೆಗೆ ಪತ್ರಿಕೆಗಳಲ್ಲಿ ಎಲ್ ನಿನೋ ಪರಿಣಾಮದಿಂದಾಗಿ ಈ ವರ್ಷ ಮಳೆ ಕಡಿಮೆ ಇರುವುದಾಗಿ ಬರೆದಿದ್ದರು. ಹೀಗೆ ಅಮ್ಮನ ಬಳಿ ಮಾತನಾಡುತ್ತಾ ಕುಳಿತಿದ್ದೆ. ಅಮ್ಮ ಹೇಳಿದಳು ಮಗಾ ಈ ವರ್ಷ ಮಳೆ ತಡ ಮತ್ತು ಕಡಿಮೆ ನಿನ್ನ ಮುಂದಿನ ವರ್ಷದ ಬೆಳೆಯ ಬಗ್ಗೆ ಏನು ಯೋಚನೆ? ಒಮ್ಮೆಲೇ ಗಾಬರಿಯಾದೆ. ಅಮ್ಮ ಪೇಪರ್ ಓದುವುದಿಲ್ಲ. ಸುದ್ದಿ ವಾಹಿನಿಗಳನ್ನು ನೋಡುವುದಿಲ್ಲ. ಮತ್ತೆ ಹೇಗೆ ನಿಖರವಾಗಿ ಹೇಳುತ್ತಾಳೆ ಎಂದು ಗಾಬರಿ ಮೂಡಿ ಕೇಳಿದೆ, ನಿಂಗೆ ಹೇಗೆ ಗೊತ್ತು ಎಂದು. ನೋಡು ಶಿವರಾತ್ರಿ ಹಬ್ಬದ ನಂತರ ಬೆಳಿಗ್ಗೆ ಚಳಿ ಇರಬಾರದು. ಆ ನಂತರವೂ ಚಳಿ ಇದ್ದರೆ ಆ ವರ್ಷ ಮಳೆ ತಡ ಮತ್ತು ಕಡಿಮೆ. ಆದ್ದರಿಂದ ಬಿತ್ತನೆ ದಿನಾಂಕ ಮತ್ತು ಅಲ್ಪಾವಧಿ ತಳಿಗಳನ್ನು ಆಯ್ಕೆ ಮಾಡಿಕೊಳ್ಳಬೇಕು. ಎರಡನೆಯ ಬೆಳೆಯ ಯೋಚನೆ ಬಿಟ್ಟು ಬಿಡಬೇಕಾಗಬಹುದು ಎಂದಳು. ಅಮ್ಮನ ಈ ಎಲ್ ನಿನೋ ಜ್ಞಾನಕ್ಕೆ ಬೆಚ್ಚಿ ಬಿದ್ದೆ.

ನನ್ನ ಅಮ್ಮನಂತಹ ಅಮ್ಮನಿಗೂ ಈ ಎಲ್ ನಿನೋ ಮುನ್ನೆಚ್ಚರಿಕೆ ಇದೆ ಎಂದರೆ ಎಲ್ ನಿನೋ ಒಂದು ಅಸಾಧಾರಣ ವಿದ್ಯಮಾನ ಅಲ್ಲ ಒಂದು ಮಾಮೂಲಿ ಪ್ರಕ್ರಿಯೆ ಎಂಬುದು ಮನವರಿಕೆಯಾಯಿತು. ಎಲ್ ನಿನೋ 2 ರಿಂದ 7 ವರ್ಷಗಳಿಗೊಮ್ಮೆ ಪುನರಾವರ್ತನೆಯಾಗುವ ಒಂದು ಹವಾಮಾನ ವಿದ್ಯಮಾನ. ಇದರ ಪ್ರಭಾವ 3 ತಿಂಗಳಿಂದ 9 ತಿಂಗಳ ವರೆಗೂ ಇರಬಹುದು. ಕೆಲವೊಮ್ಮೆ 12 ತಿಂಗಳ ವರೆಗೆ ಮುಂದುವರಿಯಬಹುದು. ಹಲವಾರು ಶತಮಾನಗಳಿಂದ ಮನುಷ್ಯ ಈ ಹವಾಮಾನ ಬದಲಾವಣೆಯ ಬಗ್ಗೆ ಗಮನಿಸುತ್ತಾ ವರದಿ ಮಾಡುತ್ತಾ ಬಂದಿದ್ದಾನೆ. ಈ ಎಲ್ ನಿನೋ ಪೂರ್ವ ಹವಾಮಾನದ ಸ್ಥಿತಿಗಳನ್ನು ಆತ ಗಮನಿಸಿದ್ದಾನೆ ಮತ್ತು ತನ್ನ ತದನಂತರದ ಪೀಳಿಗೆಗಳಿಗೆ ಮನವರಿಕೆ ಮಾಡಿದ್ದಾನೆ. ಆದ್ದರಿಂದ ನನ್ನಮ್ಮ ತಕ್ಷಣ ನನ್ನನ್ನು ಎಚ್ಚರಿಸಿದ್ದಾಳೆ.

ಎಲ್ ನಿನೋ ಎಂದರೆ ಎಂದರೆ ಸ್ಪಾನಿಶ್ ಭಾಷೆಯಲ್ಲಿ ಚಿಕ್ಕ ಹುಡುಗ ಎಂದು ಅರ್ಥವಂತೆ. ಅಮೇರಿಕಾದ ನಾವಿಕರು ತಮ್ಮ ಸುತ್ತಲೂ ಇರುವ ಬೆಚ್ಚಗಿನ ಸಮುದ್ರವನ್ನು ನೋಡಿ ಹಾಗೆ ಕರೆದರು. ಇದೊಂದು ನೈಸರ್ಗಿಕ ಹವಾಮನ ವೈಪರೀತ್ಯ. ಕೇಂದ್ರ, ಪೂರ್ವ ಉಷ್ಣ ವಲಯದ ಶಾಂತ ಸಾಗರದಲ್ಲಿ ನೀರು ಸಾಮಾನ್ಯಕ್ಕಿಂತ ಬೆಚ್ಚಗಾದಾಗ ಈ ಎಲ್ ನಿನೋ ಪರಿಣಾಮ ಉಂಟಾಗುತ್ತದೆ. ದುರ್ಬಲಗೊಳ್ಳುವ ವಾಣಿಜ್ಯ ಮಾರುತಗಳು ಈ ನಾಟಕೀಯ ಭೌಗೋಳಿಕ ಬದಲಾವಣೆಯನ್ನು ತರುತ್ತವೆ. ಪೂರ್ವದಿಂದ ಪಶ್ಚಿಮಕ್ಕೆ ಬೀಸುವ ಈ ವಾಣಿಜ್ಯ ಮಾರುತಗಳು ತಮ್ಮ ವೇಗವನ್ನು ಕಳೆದುಕೊಳ್ಳುತ್ತವೆ ಅಥವಾ ವಿರುದ್ಧವಾಗಿ ಬೀಸ ತೊಡಗುತ್ತವೆ. ಇದರಿಂದ ಆಸ್ಟ್ರೇಲಿಯಾ, ಇಂಡೋನೇಷ್ಯಾ, ಮತ್ತು ಭಾರತಗಳಲ್ಲಿ ಮಳೆ ಕಡಿಮೆಯಾಗಿ ಬರ ಕಾಣಿಸಿಕೊಂಡರೆ ದಕ್ಷಿಣ ಅಮೇರಿಕಾ ಸಂಯುಕ್ತ ಸಂಸ್ಥಾನ ಮತ್ತು ಪೆರುವಿನಲ್ಲಿ ಅತಿ ವೃಷ್ಠಿ ಅಥವಾ ನೆರೆ ಉಂಟಾದರೆ ಪಕ್ಕದ ಕೆನಡಾ ಚೆಚ್ಚಗಿರುತ್ತದೆ.

ಈ ಸಂದರ್ಭದಲ್ಲಿ ಸಮುದ್ರದ ಉಷ್ಣತೆ ಕನಿಷ್ಠ 0.5 ನಷ್ಟು ಹೆಚ್ಚಿಸುತ್ತದೆ. ಹಾಗಾದರೆ ಇದು ಮಳೆಯನ್ನು ಹೇಗೆ ಪ್ರಭಾವಿಸುತ್ತದೆ ನೋಡೋಣ. ಗಾಳಿಯು ತಣ್ಣಗಿರುವ ಪ್ರದೇಶದಿಂದ (ಹೆಚ್ಚು ಒತ್ತಡದ ಪ್ರದೇಶ) ಕಡಿಮೆ ಒತ್ತಡದ ಪ್ರದೇಶದ (ಬೆಚ್ಚಗಿನ) ಕಡೆಗೆ ಬೀಸುತ್ತದೆ. ಹೀಗೆ ಬೀಸುವಾಗ ತನ್ನೊಂದಿಗೆ ನೀರಾವಿಯನ್ನು ಒಯ್ಯುತ್ತದೆ. ಈ ನೀರಾವಿ ಮೋಡವಾಗಿ ಮಳೆ ಸುರಿಸುತ್ತದೆ. ಭಾರತದ ಭೂ ಖಂಡದಲ್ಲಿ ಟಿಬೇಟಿಯನ್ ಪ್ರಸ್ಥಭೂಮಿ ಕಾಯುತ್ತದೆ. ಆಗ ಸಮುದ್ರದ ಮೇಲಿನಿಂದ ಗಾಳಿ ಭಾರತದ ಭೂ ಪ್ರದೇಶದ ಮೇಲೆ ಬೀಸುತ್ತದೆ. ಆದ್ದರಿಂದ ಮಾನ್ಸೂನ್ ದಕ್ಷಿಣದಿಂದ ಉತ್ತರಕ್ಕೆ ವ್ಯಾಪಿಸುತ್ತಾ ಸಾಗುವುದು. ಈಗ ಸಮುದ್ರವೇ ಬಿಸಿಯಾಗಿರುವುದರಿಂದ ಮಳೆಯ ಮಾರುತಗಳು ಭೂಮಿಯ ಕಡೆಗೆ ಬೀಸುವುದಿಲ್ಲ. ಭೂಮಧ್ಯ ರೇಖೆಯ ಆಸುಪಾಸು ಇರುವ ಪ್ರದೇಶಗಳು ಪ್ರಮುಖವಾಗಿ ಬಾಧಿತವಾಗುತ್ತವೆ.

ಇದರ ಪರಿಣಾಮಗಳನ್ನು ನೋಡೋಣ. ಮೊದಲೇ ಹೇಳಿದಂತೆ ಭಾರತ, ಆಫ್ರಿಕಾ, ಇಂಡೋನೇಷ್ಯಾ ಮತ್ತು ಆಸ್ಟ್ರೇಲಿಯಾಗಳಲ್ಲಿ ಕಡಿಮೆ ಮಳೆ ಅಥವಾ ಬರ. ದಕ್ಷಿಣ ಅಮೇರಿಕಾ ಸಂಯುಕ್ತ ಸಂಸ್ಥಾನ, ಪೆರು ಬೊಲಿವಿಯಾಗಳಲ್ಲಿ ವಿಪರೀತ ಮಳೆ ಮತ್ತು ನೆರೆ. ಆಸ್ಟ್ರೇಲಿಯಾ ಭಾಗಗಳಲ್ಲಿ ನಿಯಂತ್ರಣಕ್ಕೆ ಸಿಗದ ಕಾಳ್ಗಿಚ್ಚು. ಕೃಷಿ ಸಾಗರ ಮೀನು ಉತ್ಪಾದನೆಯಲ್ಲಿ ಗಣನೀಯ ಕುಸಿತ. ಬೇಸಿಗೆಯ ಉಷ್ಣತೆಯಲ್ಲಿ ಗಣನೀಯ ಏರಿಕೆ. ಹೀಗೆ ಎಲ್ ನಿನೋ ಒಂದು ಹವಾಮಾನ ವೈಪರೀತ್ಯವಾದರೂ ಜಾಗತಿಕ ಆರ್ಥಿಕತೆ, ಜೀವಿ ಪರಿಸ್ಥಿತಿ ಶಾಸ್ತ್ರ ಮತ್ತು ಮಾನವನ ಬದುಕಿನ ಮೇಲೆ ಪರಿಣಾಮ ಬೀರುತ್ತದೆ.

ರಜೆಯಲ್ಲಿ ತಂದೆ ತಾಯಿಯೊಂದಿಗೆ ಸ್ನೇಹಿತರೊಂದಿಗೆ ಪ್ರವಾಸ ಹೊರಟಾಗ ಕಾಡಿನ ಅಂಚಿನಲ್ಲಿ ಯಾವುದೇ ಕಾರಣಕ್ಕೂ ಬೆಂಕಿ ಹೊತ್ತಿಸುವ ಕೆಲಸ ಮಾಡಬೇಡಿ. ಧೂಮಪಾನ ಮಾಡುವವರು ನಿಮ್ಮ ಜೊತೆಗಿದ್ದರೆ ಅವರು ತಮ್ಮ ಸಿಗರೇಟ್ ಅನ್ನು ಹೊತ್ತಿಸಿದ ಬೆಂಕಿ ಕಡ್ಡಿಯನ್ನು ಆರಿಸಿ ಎಸೆದಿದ್ದಾರೆ ಎನ್ನುವುದನ್ನು ಖಾತ್ರಿ ಮಾಡಿಕೊಂಡ ನಂತರವೇ ಆ ಜಾಗದಿಂದ ಹೊರಡಿ. ಇಲ್ಲವಾದಲ್ಲಿ ಇದು ಭಯಂಕರ ಕಾಡ್ಗಿಚ್ಚಿಗೆ ಕಾರಣವಾಗಿ ಅರ್ಜುನ ಖಾಂಡವ ವನ ದಹನ ಮಾಡಿದ ಹಾಗೆ ಅಪಾರ ಕಾಡು ಮಾತ್ರವಲ್ಲ ಅಪರೂಪದ ಮೂಲಿಕೆಗಳು ಮತ್ತು ಅಪಾರ ಜೀವ ಸಂಕುಲ ನಾಶವಾಗಬಹುದು. ನಿಮ್ಮ ಕಾರಿನ ಒಳಗೆ ಲೈಟರಗಳು, ದಹನ ಶೀಲ ವಸ್ತುಗಳಾದ ಪರ್ ಫ್ಯೂಮ್‌ಗಳು, ಡಿ ಓಡರೈಸರ್‌ಗಳನ್ನು ಇಟ್ಟು ಕೆಳಗಿಳಿಯಬೇಡಿ. ಒಂದು ಕ್ಷಣ ಇವುಗಳನ್ನು ಒಯ್ಯಬೇಕಾದಲ್ಲಿ ಅವುಗಳನ್ನು ಬಟ್ಟೆಯಲ್ಲಿ ಸುತ್ತಿ ಬ್ಯಾಗ್ ನ ಒಳಭಾಗದಲ್ಲಿ ಆಳವಾಗಿರಿಸಿ. ಬಿಸಿಲಿನಲ್ಲಿ ಟ್ರೆಕ್ಕಿಂಗ್ ಹೋಬೇಡಿ. ನಿಮ್ಮ ಜೊತೆ ಸಾಕಷ್ಟು ಕುಡಿಯುವ ನೀರನ್ನು ಒಯ್ಯಿರಿ ಮತ್ತು ಪದೇ ಪದೇ ಕುಡಿಯಿರಿ.. ದೇಹ ಮುಚ್ಚುವ ಹಾಗೆ ಸಡಿಲವಾದ ಹತ್ತಿಯ ಬಟ್ಟೆಗಳನ್ನು ಬಳಸಿ. ಯಾವುದೇ ಕಾರಣಕ್ಕೆ ಬಿಗಿಯಾದ ಸಿಂಥೆಟಿಕ್ ಬಟ್ಟೆಗಳನ್ನು ಬಳಸಬೇಡಿ. ದ್ವಿಚಕ್ರ ವಾಹನಗಳಲ್ಲಿ ಹೋಗುವಾಗ ಕಡ್ಡಾಯವಾಗಿ ಮೂಗನ್ನು ಬಟ್ಟೆ ಅಥವಾ ಮಾಸ್ಕ್‌ನಿಂದ ಮುಚ್ಚಿ. ಇಲ್ಲವಾದಲ್ಲಿ ವಾತಾವರಣದ ಆರ್ದ್ರತೆ ಕಡಿಮೆ ಇರುವುದರಿಂದ ಮೂಗಿನಿಂದ ರಕ್ತಸ್ರಾವವಾಗಬಹುದು.

- ದಿವಾಕರ ಶೆಟ್ಟಿ ಎಚ್, ಮಂಗಳೂರು

ದೇವರ ದಾಸಿಮಯ್ಯ ಅವರ ವಚನಗಳ ಪ್ರಸಾರ ಇಂಡಿಯನ್ ಬುಕ್ ಆಫ್ ರೆಕಾರ್ಡ್ ದಾಖಲೆ

ಶ್ರೀಮತಿ ಸುನಂದ ಅರುಣ್‌ಕುಮಾರ್ ಗೋಸಿ ಅವರು ಆದ್ಯ ವಚನಕಾರ ದೇವರ ದಾಸಿಮಯ್ಯನವರ ಎಲ್ಲಾ 176 ವಚನಗಳನ್ನು ಪ್ರಸಿದ್ದ ಗಾಯಕ ಗಾಯಕಿಯರಿಂದ ಹಾಡಿಸಿ ಭಾವಾರ್ಥ ಸಹಿತ ದೃಶ್ಯೀಕರಿಸಿಯೂ ಟ್ಯೂಬ್‌ನಲ್ಲಿ ಹಾಕಿ ಇಂಡಿಯನ್ ಬುಕ್ ಆಫ್ ರೆಕಾರ್ಡ್ ದಾಖಲೆ ಮಾಡಿದ್ದಾರೆ. ಶ್ರೀಮತಿ ಸುನಂದ ಅರುಣ್ ಕುಮಾರ್ ಗೋಸಿಯವರ ತಂದೆ ಶೇಷಾದ್ರಿ ಮತ್ತು ತಾಯಿ ಕಮಲಮ್ಮನವರು. ಇವರು ಬೆಂಗಳೂರಿನ ನಿವಾಸಿಗಳಾಗಿದ್ದು, ಪತಿ ಅರುಣ್ ಕುಮಾರ್‌ರವರು ಇಂಜಿನಿಯರಿಂಗ್ ವೃತ್ತಿಯಲ್ಲಿ ಸೇವೆ ಸಲ್ಲಿಸಿ ಸಮಾಜ ಸೇವೆಯಲ್ಲಿ ತೊಡಗಿದ್ದಾರೆ. ಮಕ್ಕಳಾದ ಆಕಾಶ್, ಮಹೇಶ್, ಸೊಸೆ ಐಶ್ವರ್ಯ, ಸ್ನಾತಕೋತ್ತರ ಪದವಿ ಮುಗಿಸಿ, ಮೊಮ್ಮಗ ಅವಿಯನ್ ಅಮೇರಿಕದಲ್ಲಿ ನೆಲಿಸಿದ್ದಾರೆ. ಇವರು ಸಮಾಜದ ಕಳಕಳಿಯುಳ್ಳವರಾಗಿ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಹಾಗೂ ಸಮಾಜದ ಏಳಿಗೆಯ ಸದುದ್ದೇಶದಿಂದ ದೇವಾಂಗ ಇತಿಹಾಸನ್ನು ಸಂಗ್ರಹಿಸಿ, ತಾವೇ ನಿರ್ಮಿಸಿದ ಗೋಸಿ ಯೂನಿವರ್ಸ್ ಎಂಬ ಅಂತರ್ಜಾಲ ತಾಣದಿಂದ ಜನರಿಗೆ ತಲುಪಿಸುವ ನಿಟ್ಟನಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಮತ್ತು ದೇವಲ ಮಹರ್ಷಿ ಹಾಗು ದಾಸಿಮಯ್ಯನವರ ಜೀವನ ಚರಿತ್ರೆಯನ್ನು ವಿಕಿಪೀಡಿಯದಲ್ಲಿ ದಾಖಲಿಸಿದ್ದಾರೆ. ವಚನ ಸಾಹಿತ್ಯಕ್ಕೆ ಭದ್ರಬುನಾದಿಯನ್ನು ಹಾಕಿ ಬಸವಾದಿ ಪ್ರಮಥರಿಗೆ ಮಾರ್ಗ ದರ್ಶನ ಮಾಡಿದ ಆದ್ಯ ವಚನಕಾರ, ವಚನ ಬ್ರಹ್ಮ, ಶ್ರೀದೇವರ ದಾಸಿಮಯ್ಯನವರು ರಚಿಸಿರುವ ಎಲ್ಲಾ 176 ವಚನಗಳನ್ನು ರಾಗ ಸಂಯೋಜನೆ ಮಾಡಿಸಿ, ಮೊಟ್ಟಮೊದಲ ಬಾರಿಗೆ ವಚನ ಬ್ರಹ್ಮನ ವಚನಾಮೃತ ಎಂಬ ನಾಮದಿಂದ, ವಚನ, ಗಾಯನ, ಮತ್ತು ಭಾವಾರ್ಥ ಸಹಿತ ದೃಶ್ಯೀಕರಿಸಿ, ಸಾಹಿತ್ಯ ಲೋಕ ಹಾಗೂ ಸಮಾಜಕ್ಕೆ ಕೊಡುಗೆಯಾಗಿ ನೀಡಿರುವುದು ಶ್ಲಾಘನೀಯ ಕಾರ್ಯವಾಗಿದೆ. ಲೋಕ ಕಲ್ಯಾಣಾರ್ಥಕ್ಕಾಗಿ ನಿರ್ಮಿಸಿದ ಈ ಮಹತ್ಕಾರ್ಯವನ್ನು ಗುರುತಿಸಿ ಇಂಡಿಯಾ ಬುಕ್ ಆಫ್ ರೆಕಾರ್ಡ್ ಅವರು ದಾಖಲಿಸಿ ಸಮ್ಮಾನಿಸಿದ್ದಾರೆ.



ಇದರ ಸಂಪೂರ್ಣ ನಿರ್ದೇಶನ ಹಾಗೂ ನಿರ್ಮಾಣವನ್ನು, ಅವರ ಕುಟುಂಬದ ಸಹಕಾರದೊಂದಿಗೆ ಲೋಕಾರ್ಪಣೆ ಮಾಡಿ. ಈ ಎಲ್ಲಾ ವಚನಗಳನ್ನು ನಿರಂತರವಾಗಿ ವೀಕ್ಷಿಸಲು, ಗೋಸಿ ಯೂನಿವರ್ಸ್ ಯೂಟ್ಯೂಬ್ ಚಾನಲ್ ನಲ್ಲಿ ಪ್ರಸಾರ ಮಾಡಿರುತ್ತಾರೆ. ಹಾಗು, ಮೊಟ್ಟ ಮೊದಲ ಬಾರಿಗೆ ದಾಸಿಮಯ್ಯ ವಚನಗಳನ್ನು, ದೂರದರ್ಶನ ಚಂದನ ವಾಹಿನಿಯಲ್ಲಿ ಕೂಡ ಪ್ರಸಾರ ಮಾಡಿಸಿರುತ್ತಾರೆ. ಇವರ ಈ ಮಹತ್ಕಾರ್ಯವನ್ನು ಗುರುತಿಸಿ ಹಲವಾರು ಸಂಘ ಸಂಸ್ಥೆಗಳು ಪ್ರಶಸ್ತಿ ಸನ್ಮಾನಗಳನ್ನು ನೀಡಿ ಗೌರವಿಸಿವೆ. ಮೇಡಂ ಕುಟುಂಬದ ಈ ಮಹತ್ಕಾರ್ಯ ಸಮಾಜ ಮೆಚ್ಚುವಂತಹದ್ದಾಗಿದೆ.

- ಗೊರೂರು ಅನಂತರಾಜು, ಹಾಸನ, 9449462879, ಹುಣಸಿನಕೆರೆ ಬಡಾವಣೆ, 29ನೇ ವಾರ್ಡ್, 3ನೇ ಕ್ರಾಸ್, ಹಾಸನ-573201.

ಮಾದಕ ದ್ರವ್ಯ ಪಿಡುಗು ತಡೆಗೆ ಪರಿಣಾಮಕಾರಿ ಕ್ರಮ ಅಗತ್ಯ

ಎಲ್ಲ ವೈದ್ಯಕೀಯ ಕಾಲೇಜುಗಳಲ್ಲಿ ವ್ಯಸನ ನಿವಾರಣೆ ಕೇಂದ್ರ ಆರಂಭಿಸಲು ಸರಕಾರ ಮುಂದಾಗಿರುವುದು ಉತ್ತಮ ಕ್ರಮ. ಮಾದಕ ದ್ರವ್ಯ ವ್ಯಸನ ಇಂದು ಮಿತಿಮೀರುತ್ತಿದ್ದು, ಇದನ್ನು ತಡೆಯಲು ಇಂತಹ ಸಮರ್ಥ ಕ್ರಮಾ ಅಗತ್ಯವಾಗಿತ್ತು. ಎಲ್ಲ ಕಾಲೇಜುಗಳಿಗೂ ಇದನ್ನು ವಿಸ್ತರಿಸಬೇಕು. ಕೆಲವು ಪ್ರದೇಶಗಳ ಶಾಲೆಗಳಲ್ಲಿ ಕೂಡ ಮಕ್ಕಳು ಮಾದಕ ದ್ರವ್ಯ ವ್ಯಸನಿಗಳಾಗಿರುವುದು ಕಂಡುಬಂದಿದೆ. ಹೀಗಾಗಿ ಪ್ರದೇಶಕ್ಕೆ ಅನುಗುಣವಾಗಿ ಶಾಲೆಗಳಲ್ಲಿ ಕೂಡ ಆಪ್ತ ಸಮಾಲೋಚನೆ ಕೇಂದ್ರ, ಮಾದಕ ದ್ರವ್ಯ ವ್ಯಸನ ಮುಕ್ತಿ ಕೇಂದ್ರ ಆರಂಭಿಸಿದರೆ ಇನ್ನಷ್ಟು ಪರಿಣಾಮಕಾರಿಯಾಗಲು ಸಾಧ್ಯ.

ರಾಜ್ಯದಲ್ಲಿ 2023ರಲ್ಲಿ 6,767 ಮಾದಕ ದ್ರವ್ಯ ಪ್ರಕರಣಗಳು ದಾಖಲಾಗಿ, 134 ಕೋಟಿ ರೂ. ಮೌಲ್ಯದ ಮಾದಕ ದ್ರವ್ಯವನ್ನು ವಶಪಡಿಸಿಕೊಳ್ಳಲಾಗಿದೆ. ಅದೇ 2026ರ ಎರಡೇ ತಿಂಗಳಲ್ಲಿ 2,378 ಪ್ರಕರಣಗಳು ದಾಖಲಾಗಿದ್ದು, 35 ಕೋಟಿ ರೂ. ಮೌಲ್ಯದ ಮಾದಕ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಮಾದಕ ದ್ರವ್ಯ ಪಿಡುಗು ತೀವ್ರವಾಗಿ ಹೆಚ್ಚಳವಾಗಿರುವುದು ಇದರಿಂದ ಸಾಬೀತಾಗುತ್ತಿದೆ.

ರಾಜ್ಯದಲ್ಲಿ ಮಾದಕ ದ್ರವ್ಯ ನಿಷೇಧ ಕಾಯ್ದೆಯಡಿ ದಾಖಲಾದ ಪ್ರಕರಣಗಳ ಸಂಖ್ಯೆಯಲ್ಲಿ ಭಾರೀ ಏರಿಕೆಯಾಗಿದೆ. ಕೇವಲ ಒಂದು ವರ್ಷದಲ್ಲಿ ಪ್ರಕರಣಗಳ ಸಂಖ್ಯೆಯಲ್ಲಿ ಶೇ.63ರಷ್ಟು ತೀವ್ರ ಏರಿಕೆಯಾಗಿದೆ ಎಂದು ರಾಜ್ಯ ಪೊಲೀಸ್ ಅಧಿಕೃತ ಅಂಕಿಅಂಶಗಳು ಹೇಳುತ್ತವೆ. ಇದು ರಾಜ್ಯದಲ್ಲಿ ಬೆಳೆಯುತ್ತಿರುವ ಮಾದಕವಸ್ತು ಜಾಲದ ಭೀಕರತೆಯನ್ನು ಎತ್ತಿ ತೋರಿಸುತ್ತದೆ.

ಮಾದಕ ವ್ಯಸನವು ವಿಶೇಷವಾಗಿ ಯುವಜನರಲ್ಲಿ ಮತ್ತು ವಿದ್ಯಾರ್ಥಿಗಳಲ್ಲಿ ಹೆಚ್ಚುತ್ತಿರುವುದು ತಜ್ಞರಲ್ಲಿ ಆತಂಕ ಮೂಡಿಸಿದೆ. ಸಿಂಥೆಟಿಕ್ ಡ್ರಗ್ ಬಳಕೆ ಹೆಚ್ಚುತ್ತಿದೆ. ಮುಂಬಯಿ ಪೊಲೀಸ್ ತಂಡವು ಈಚೆಗೆ ಮೈಸೂರಿನ ಹೊರವಲಯದಲ್ಲಿ ಡ್ರಗ್ ಉತ್ಪಾದನೆ ಘಟಕದ ಮೇಲೆ ದಾಳಿ ನಡೆಸಿತ್ತು. ಇದಾದ ಬಳಿಕ ಶಿಕ್ಷಣ ಸಂಸ್ಥೆಗಳು, ಐಟಿ ಕಾರಿಡಾರ್‌ಗಳು, ಸಾರಿಗೆ ಕೇಂದ್ರಗಳು ಮತ್ತು ಕೈಗಾರಿಕ ಪ್ರದೇಶಗಳ ಬಳಿ ಪೊಲೀಸರು ಕಣ್ಣಾವಲು ಹೆಚ್ಚಿಸಿದ್ದಾರೆ.

ಮಾದಕವಸ್ತು ಜಾಲಗಳು ಈಗ ಗ್ರಾಮೀಣ ಮತ್ತು ಅರೆ-ನಗರ ಪ್ರದೇಶಗಳಿಗೂ ಸಂಘಟಿತವಾಗಿ ವಿಸ್ತರಿಸುತ್ತಿವೆ. ಸ್ನೇಹಿತರ ಒತ್ತಡ, ವಿಲಾಸಿ ಜೀವನ ಶೈಲಿಯ ಆಕರ್ಷಣೆ, ಮಾದಕ ವಸ್ತುಗಳು ಸುಲಭವಾಗಿ ಸಿಗುತ್ತಿರುವುದು ವ್ಯಸನ ಹೆಚ್ಚಲು ಮುಖ್ಯ ಕಾರಣಗಳಾಗಿವೆ. ಈ ಜಾಲಗಳು ಪ್ರಮುಖವಾಗಿ ವಿದ್ಯಾರ್ಥಿಗಳು ಮತ್ತು ವಲಸೆ ಕಾರ್ಮಿಕರಂತಹ ದುರ್ಬಲ ವರ್ಗದವರನ್ನು ಗುರಿಯಾಗಿಸಿಕೊಂಡಿವೆ. ಅಪ್ರಾಪ್ತ ವಯಸ್ಕರು ಹಾಗೂ ಯುವ ಜನತೆ ಮಿತಿ ಮೀರಿ ಮಾದಕ ವ್ಯಸನಕ್ಕೆ ಬಲಿಯಾಗುತ್ತಿದ್ದಾರೆ.

ಈ ಹಿನ್ನೆಲೆಯಲ್ಲಿ ಸರಕಾರವು ಎಲ್ಲ ಮೆಡಿಕಲ್ ಕಾಲೇಜುಗಳಲ್ಲೂ ಹೊಸದಾಗಿ ವ್ಯಸನ ನಿವಾರಣೆ ಕೇಂದ್ರ ತೆರೆಯಲು ಮುಂದಾಗಿದೆ.

ಸದ್ಯ ಶೇ.20ರಷ್ಟು ಮೆಡಿಕಲ್ ಕಾಲೇಜುಗಳಲ್ಲಿ ಈ ಸೇವೆ ಆರಂಭಗೊಂಡಿವೆ. ಇಲ್ಲಿ ಮಾದಕ ವಸ್ತು ಸೇವನೆ ವ್ಯಸನಿಗಳನ್ನು ಗುರುತಿಸಿ ಅವರಿಗೆ ಸೂಕ್ತ ಚಿಕಿತ್ಸೆ ನೀಡಿ, ಸಮಾಜದಲ್ಲಿ ಗೌರವಯುತವಾಗಿ ಬದುಕಲು ಅವಕಾಶ ಮಾಡಿ ಕೊಡಲಾಗುತ್ತದೆ.

ಸದ್ಯ ಈ ಕ್ರಮ ಸ್ವಾಗತಾರ್ಹವಾದರೂ ಪಿಡುಗನ್ನು ಇನ್ನಷ್ಟು ಸಮರ್ಥವಾಗಿ ಎದುರಿಸಲು ಇದನ್ನು ವಿಸ್ತರಿಸಬೇಕಾಗಿದೆ. ಎಲ್ಲ ಕಾಲೇಜುಗಳಲ್ಲಿ ಮತ್ತು ಆಯ್ದ ಕೆಲವು ಪ್ರದೇಶಗಳಲ್ಲಿ ಶಾಲಾ ಹಂತದಲ್ಲಿಯೂ ಇವುಗಳನ್ನು ಜತೆಗೆ ಆಪ್ತ ಸಮಾ ಲೋಚನೆ ಸೌಲಭ್ಯವನ್ನು ಆರಂಭಿಸಬೇಕಾಗಿದೆ. ಮಾದಕ ದ್ರವ್ಯ ವ್ಯಸನವು ವೈದ್ಯಕೀಯ ಅಥವಾ ಎಂಜಿನಿಯರಿಂಗ್ - ಹೀಗೆ ಕೆಲವೇ ಶಿಕ್ಷಣ ಸಂಸ್ಥೆಗಳಲ್ಲಿ ಮಾತ್ರ ಇರುವುದಲ್ಲ, ಈ ಜಾಲದ ಕರಾಳ ಬಾಹುಗಳು ಎಲ್ಲೆಡೆಗೂ ವ್ಯಾಪಿಸಿರುವ ಹಿನ್ನೆಲೆಯಲ್ಲಿ ಈ ಕ್ರಮ ಅಗತ್ಯವಾಗಿದೆ. ಆಗ ಸಮಾಜದ ಸ್ವಾಸ್ಥವನ್ನು ಕಾಯ್ದುಕೊಳ್ಳುವುದು ಸಾಧ್ಯ.

ಹಣ ಗಳಿಕೆಯೊಂದಿಗೆ ಆರೋಗ್ಯವನ್ನೂ ಕಾಪಾಡಿಕೊಳ್ಳೋಣ....

ಹಣವೇ ನಿನ್ನಯ ಗುಣವೆಷ್ಟು ಹಿರಿದು! ದಾಸರ ನುಡಿ, ಒಂದು ರೀತಿಯ ವ್ಯಂಗ್ಯವೂ ಹೌದು. ಹಣದಿಂದ ಎಲ್ಲವನ್ನೂ ಪಡೆಯಬಹುದೆಂಬ ತಪ್ಪು ಕಲ್ಪನೆಯಿದೆ. ಕಛೇರಿ ಕೆಲಸ ಹಣವಿದ್ದವರಿಗೆ ಬಹಳ ಬೇಗ ಆಗುವುದು. ಹಣವಿಲ್ಲದ ಬಡವ ಬಾಗಿಲ ಬಳಿಯೇ ಕುತ್ತಿಗೆ ಉದ್ದ ಮಾಡಿ, ತನ್ನ ಸರದಿಗಾಗಿ ನೋಡಿದರೂ ಗಮನಿಸುವವರಿಲ್ಲ. ಪಾಪಪ್ರಜ್ಞೆ ನಶಿಸಿ ವರ್ಷವೆಷ್ಟೋ ಸಂದಿತು. ಜೀವನಕ್ಕೆ ಹಣ ಬೇಕು. ಸಕಾಲದಲ್ಲಿ ಸಹಕರಿಸದವಗೆ ಹಣ ಎಷ್ಟಿದ್ದರೇನು? (ಹಳ್ಳಿಯಲ್ಲಿ ಒಂದು ಮಾತಿದೆ, ಕಷ್ಟಕ್ಕೆ ನೆರವಾಗದ ಹಣ ಶ್ವಾನದ ಮೈಮೇಲಿನ ಜಿಗಣೆಗೆ ಸಮವಂತೆ) ಸತ್ಪಾತ್ರರ ಕಷ್ಟಕ್ಕೆ ಮರುಗುವ, ಸಹಕರಿಸುವ ಗುಣವಿರಲಿ. ಪಡಕೊಂಡ ಹಣವನ್ನು ತಪ್ಪದೇ ಹಿಂದಿರುಗಿಸುವ ಬುದ್ಧಿಯಿರಲಿ. ಕೊಡುವವರು ಬೇಡ ಎಂದರೆ ಸರಿ. ದೊಡ್ಡ ಮೊತ್ತವಾದರೆ. ಕೊಡುವವರೂ ಏನೋ ಒಂದು ಮಾಡಿ ಒಗ್ಗೂಡಿಸಿ ಕೊಟ್ಟಿರುತ್ತಾರೆಂಬ ಪ್ರಜ್ಞೆಯಿರಬೇಕು. ಇತ್ತೀಚೆಗೆ ಹಣ ಮತ್ತು ಗುಣವನ್ನು ಒಂದೇ ತಕ್ಕಡಿಯಲ್ಲಿಟ್ಟರೆ ಹಣಕ್ಕೆ ತೂಕ ಹೆಚ್ಚು. ಗುಣವೇನು ಅನ್ನ ಕೊಡುವುದೇ? ಕೇಳುವವರೂ ಇದ್ದಾರೆ. ಯಾರು ಯಾರ ಉದರಕ್ಕೆ ಬಡಿದ ಹಣ ಪಾಪದ ಗಂಟು. ಒಮ್ಮೆಗೆ ಸಂಪಾದಿಸಿದೆ ಎಂದು ಕಂಡರೂ ವಿಷಯ ಗೊತ್ತಾದಾಗ ತಲೆತಗ್ಗಿಸುವ ಹಾಗಾಗಬಹುದು. ಈಗಂತೂ ಮಾಧ್ಯಮಗಳಲ್ಲಿ ತಕ್ಷಣ ಪ್ರಸಾರ, ಪ್ರಚಾರ ಎರಡೂ ಆಗಿಬಿಡುತ್ತದೆ. ಬಹಳ ಬೇಗ ವಿಷಯ ಹಬ್ಬುತ್ತದೆ. ನಾವೆಲ್ಲ ಸಣ್ಣವರಿದ್ದಾಗ ಮನೆ ಮನೆಗಳಲ್ಲಿ ಅಥವಾ ನೆರೆಯವರನ್ನೆಲ್ಲ ಸೇರಿಸಿ ಶನಿವಾರ, ಭಾನುವಾರ ಸಂಜೆಯ ಹೊತ್ತು ರಾಮಾಯಣ, ಮಹಾಭಾರತ, ಭಾಗವತ ವಾಚನ ಮತ್ತು ವ್ಯಾಖ್ಯಾನ ಮಾಡಿಸುವ ಕ್ರಮವಿತ್ತು. ಹಲವಾರು ಉಪಕಥೆಗಳನ್ನು ಆಯಾಯ ಸಂದರ್ಭಕ್ಕೆ ಸೇರಿಸಿ ಹೇಳುತ್ತಿದ್ದರು. ಸಂಪಾದಿಸಿದ್ದರಲ್ಲಿ ಸ್ವಲ್ಪ ಇಲ್ಲದವರಿಗೆ ಕೊಡಬೇಕೆಂದು ಹೇಳಿದ ಮಾತು ಇಂದಿಗೂ ಜ್ಞಾಪಕವಿದೆ. ಮಗ್ಗಿ, ವಾರದ ದಿನಗಳು, ನಕ್ಷತ್ರಗಳು, ತಿಂಗಳುಗಳು, ಸಂವತ್ಸರಗಳು, ನಿತ್ಯಶ್ಲೋಕಗಳನ್ನು ನಿತ್ಯವೂ ಓದುತ್ತಿದ್ದೆವು. ಭಜನೆಯಿತ್ತು. ಇದರಿಂದ ಸಾತ್ವಿಕತೆ, ನೆನಪುಶಕ್ತಿ, ಕಲಿಯಬೇಕೆಂಬ ಹಂಬಲ, ಸರಾಗ ಓದಿಗೆ ಸಹಕಾರಿಯಾಗುತ್ತಿತ್ತು. ಈಗ ಇದೆಲ್ಲ ಅಪರೂಪ ಎನ್ನಬಹುದು. ಮನೆಯ ವಾತಾವರಣ ಮಗುವಿನ ಬುದ್ಧಿ ವಿಕಸನ, ಸ್ವಂತಿಕೆಗೆ ಪೂರಕವಾಗಿರುವಂತಿದ್ದರೆ ಮಾತ್ರ ಆ ಮಗು ಸಹ ಗುಣಗಳ ಗಣಿ ಆಗಬಹುದು. ಹಣ ಗಳಿಕೆಯೊಂದಿಗೆ ಆರೋಗ್ಯವನ್ನೂ ಕಾಪಾಡಿಕೊಳ್ಳೋಣ.

- ರತ್ನಾ ಭಟ್, ತಲಂಜೇರಿ

ನಾಟಿ ಹತ್ತಿಯಿಂದ ಬಿಟಿ ಹತ್ತಿ ಕಡೆಗೆ

ಕೋಣಗಳೆರಡರ ಜಗಳದಲ್ಲಿ ಕಾಲ ಬುಡದಲ್ಲಿದ್ದ ಗಿಡ ಸತ್ತು ಹೋಯಿತಂತೆ. ಹಾಗಾಗಿತ್ತು ಹತ್ತಿ ಬೆಳೆಯಲ್ಲಿ ಬಿಟಿ ತಂತ್ರಜ್ಞಾನ ಬಂದಾಗ. ಮೊದಲಿನ ಕೆಲವು ವರ್ಷಗಳಲ್ಲಿ ರೈತರಿಗೆ ಭಾರೀ ಗೊಂದಲಗಳು. ಬಿಟಿ ಹತ್ತಿ ಬೆಳೆಸುವುದೇ ಬಿಡುವುದೇ ಎಂದು. ಕೊನೆಗೆ ಅರಿವಿಗೆ ಬಂತು ಇದೆಲ್ಲಾ ಒಂದು ನಾಟಕ ಅಷ್ಟೇ. ಬಿ ಟಿ ಹತ್ತಿಯ ಪ್ರಚಾರಕ್ಕಾಗಿ ಇದನ್ನು ತಯಾರಿಸುವವರೇ ವಿರೋಧಿಗಳನ್ನು ಹುಟ್ಟು ಹಾಕಿರಬಹುದೋ ಎಂಬ ಸಂದೇಹವೂ ಬರುತ್ತದೆ.

ಕಳೆದ 15 ವರ್ಷಗಳ ಹಿಂದೆ ಹತ್ತಿ ಬೆಳೆಗೆ ಪರಿಚಯಿಸಲ್ಪಟ್ಟ ಬಿಟಿ ಹತ್ತಿ ತಳಿ ಈಗ ನಾಟಿ ಅಥವಾ ಬಿಟಿ ಅಲ್ಲದ ಹೈಬ್ರೀಡ್ ತಳಿಯನ್ನೆಲ್ಲಾ ಮೂಲೆಗೆ ಅಟ್ಟಿದೆ. 100 ಕ್ಕೆ 100% ಬಿಟಿ ಹತ್ತಿಯನ್ನೇ ಬೆಳೆಯುವ ರೈತರು ನಮ್ಮ ರಾಜ್ಯದಲ್ಲಿ, ಇಡೀ ದೇಶದಲ್ಲೂ ಪರಿಸ್ಥಿತಿ ಹಾಗೆಯೇ ಆಗಿದೆ. ಬಿಟಿ ತಳಿ ಬಂದ ನಂತರ ಹತ್ತಿ ಬೆಳೆಯುವವರ ಸಂಖ್ಯೆಯೂ ಹೆಚ್ಚಳವಾಗಿದೆ. ಅಧಿಕ ಇಳುವರಿ ಕೊಡುತ್ತದೆ ಎಂದಲ್ಲ. ಬಂದ ಇಳುವರಿಯಲ್ಲಿ ನಷ್ಟ ಇಲ್ಲ ಎನ್ನುತ್ತಾರೆ ನಂಜನಗೂಡು ಜಿಲ್ಲೆ, ಹುಲ್ಲಹಳ್ಳಿ ಹೋಬಳಿಯ ದೇವರ ಶೆಟ್ಟಿ ಪುರದ ಎಂ ಮಹೇಶ್ ರವರು. ಇವರು ಕಳೆದ 15 ವರ್ಷಗಳಿಂದ ಬಿ.ಟಿ ಹತ್ತಿ ಬೆಳೆಸುತ್ತಿದ್ದು, ಹಿಂದಿನ ತಳಿಗಳಿಗೆ ಹೋಲಿಸಿದರೆ ಈ ತಳಿಯಲ್ಲಿ ಕೀಟನಾಶಕ ಸಿಂಪರಣೆಯ ಕೆಲಸ ತುಂಬಾ ಕಡಿಮೆ. ಕೆಲವೊಮ್ಮೆ ಒಂದು ಸಿಂಪರಣೆ, ಕೆಲವರು ಮಾಡದೇ ಇರುವುದೂ ಇದೆ. ಹತ್ತಿಯಲ್ಲಿ ಬಿಟ್ಟ ಹೂವು ಉಳಿಯುತ್ತದೆ, ಕಾಯಿ ಹಾಳಾಗುವುದಿಲ್ಲ. ಅನವಶ್ಯಕ ಕೀಟನಾಶಕಗಳಿಗೆ ಖರ್ಚು ಮಾಡಬೇಕಾಗಿಲ್ಲ ಎನ್ನುತ್ತಾರೆ. ಮೊದಲಿಗೆ ಬಿಟಿ ಹತ್ತಿ ಬೆಳೆದರೆ ಹಾಗಾಗುತ್ತದೆ, ಹೀಗಾಗುತ್ತದೆ ಎಂದೆಲ್ಲಾ ಜನ ಆಡಿಕೊಳ್ಳುತ್ತಿದ್ದರು. ಅದೆಲ್ಲಾ ಸುಳ್ಳು ಎಂಬುದು ಈಗ ಮನವರಿಕೆಯಾಗಿದೆ.

ನಂಜನಗೂಡಿನ ಕೆಲವು ಭಾಗ, ಹುಣಸೂರಿನ ಕೆಲವು ಭಾಗ ಎಚ್ ಡಿ ಕೋಟೆ ಇಲ್ಲೆಲ್ಲಾ ಜನ ಬೆಳೆಸುವ ಮುಖ್ಯ ಬೆಳೆ ಒಂದು ತಂಬಾಕು, ಮತ್ತೊಂದು ಹತ್ತಿ. ಇವೆರಡೂ ಬೆಳೆಗಳಿಗೆ ಸುಮಾರು ವರ್ಷಗಳ ಇತಿಹಾಸ ಇದೆ. ಇದೇ ಬೆಳೆಗಳಲ್ಲಿ ಇವರ ಜೀವನ ಹೂರೆಯಬೇಕು. ಇಲ್ಲಿ ಹಿಂದೆ ಬೇರೆ ಬೇರೆ ತಳಿಯ ಹತ್ತಿಯನ್ನು ಬೆಳೆಸುತ್ತಿದ್ದರಂತೆ. ಆಗ ವಾರಕ್ಕೊಮ್ಮೆ ಕೀಟನಾಶಕ ಸಿಂಪಡಿಸುತ್ತಾ ಬೆಳೆ ಉಳಿಸಿಕೊಳ್ಳ ಬೇಕಿತ್ತಂತೆ. ಕ್ರಮೇಣ ಈ ಬೆಳೆಗೆ ಕೀಟನಾಶಕ ಸಿಂಪರಣೆಯ ಖರ್ಚು ಹುಟ್ಟುವಳಿಗಿಂತ ಹೆಚ್ಚಾಗುತ್ತದೆ ಎಂದು ಮನಗಂಡು ಬಹಳಷ್ಟು ಜನ ಹತ್ತಿ ಬೆಳೆಯನ್ನೇ ಕಡಿಮೆ ಮಾಡಲಾರಂಭಿಸಿದರು. ಹತ್ತಿ ಬೆಳೆಯ ಸಹವಾಸವೇ ಬೇಡ ಎಂಬಷ್ಟರ ಮಟ್ಟಿಗೆ ರೈತರು ನಿರಾಶೆ ಹೊಂದುವಂತಾಗಿತ್ತು. ಅದರ ಬದಲಿಗೆ ಕೆಲವರು ಮೇವಿನ ಜೋಳ, ತರಕಾರಿ, ತಂಬಾಕು ಬೆಳೆಯನ್ನು ಹೆಚ್ಚಿಸಿಕೊಂಡರು. ಬಿಟಿ ಹತ್ತಿ ಬಂದು ಕೆಲವು ವರ್ಷಗಳ ತನಕ ಇದರಿಂದ ತೊಂದರೆ ಇದೆ ಎಂಬೆಲ್ಲಾ ಪ್ರಚಾರಗಳಿತ್ತು. ಆದರೆ ಒಬ್ಬೊಬ್ಬರೇ ಬಿಟಿ ಬೆಳೆಯಲು ಪ್ರಾರಂಭಿಸಿದರು. ಅವರನ್ನು ನೊಡಿ ಮತ್ತೊಂದಷ್ಟು ಜನ ಬೆಳೆಯಲಾರಂಬಿಸಿ, ಈಗ ಬಿಟಿ ಹತ್ತಿ ಬಿಟ್ಟರೆ ಬೇರೆ ತಳಿಗಳನ್ನು ಬೆಳೆಯುವವರೇ ಇಲ್ಲ.

ಹಿಂದೆ ಬೆಳೆಯುತ್ತಿದ್ದ ತಳಿಗಳಿಗಳಿಗೆ ಹೂ, ಕಾಯಿ ಸಂರಕ್ಷಣೆಗಾಗಿ ಸಸ್ಯ ಸಂರಕ್ಷಣೆ ಮಾಡುವುದಕ್ಕೇ ಅಧಿಕ ಖರ್ಚು ಆಗುತ್ತಿತ್ತು. ಆದ ಕಾರಣ ಬೆಳೆಗೆ ಬೇಕಾದಷ್ಟು ಗೊಬ್ಬರವನ್ನು ಕೊಡಲೂ ಆಗುತ್ತಿರಲಿಲ್ಲ. ಇದರಿಂದ ಹತ್ತಿಯಲ್ಲಿ 4-5 ಕ್ವಿಂಟಾಲು ಇಳುವರಿ ಪಡೆಯುವವರೇ ಅಧಿಕವಾಗಿದ್ದರು. ಈಗ ಹಾಗಿಲ್ಲ. ಆ ಖರ್ಚು ಉಳಿತಾಯವಾಗಿದೆ. ಅದನ್ನು ಬೆಳೆ ಪೋಷಣೆಗೆ ಬಳಕೆ ಮಾಡುವ ಕಾರಣ ಇಳುವರಿಯೂ ಈಗ ಹೆಚ್ಚಳವಾಗಿದೆ. ಎಕ್ರೆಗೆ 7-8-9 ಕ್ವಿಂಟಾಲು ತನಕ ಇಳುವರಿ ಪಡೆಯುವವರಿದ್ದಾರೆ.



ಹತ್ತಿಯಲ್ಲಿ ಈಗ ಹೂವು ಉದುರುವುದು, ಕಾಯಿ ಉದುರುವುದು ಸಮಸ್ಯೆ ಇದೆ. ಅದಕ್ಕೆ ಕಾರಣ ಕೀಟ ಅಲ್ಲ. ಗೊಬ್ಬರ, ನೀರಾವರಿ ಮುಂತಾದ ಆರೈಕೆಯು ತುಂಬಾ ಕಡಿಮೆ ಇರುವಲ್ಲಿ ಈ ಸಮಸ್ಯೆ ಇದೆ. ಉತ್ತಮ ಪೋಷಣೆ ಮಾಡಿದ ಬೆಳೆಯಲ್ಲಿ ಬಹುತೇಕ ಎಲ್ಲಾ ಹೂವುಗಳೂ ಕಾಯಿ ಕಚ್ಚುತ್ತವೆ. ಪರಾಗಸ್ಪರ್ಷ ಮಾಡುವ ಕೀಟಗಳೂ ಬರುತ್ತವೆ. ಈಗ ನಾವೆಲ್ಲಾ ಹತ್ತಿ ಬೆಳೆಯುವಾಗ ಬದಿಯಲ್ಲಿ 2-3 ಸಾಲು ನಟಿ ತಳಿಯ ಹತ್ತಿಯನ್ನು ಬೆಳೆಸುತ್ತೇವೆ. ಅದರ ಎಡೆಯಲ್ಲಿ ಅಲಸಂಡೆ ಬೆಳೆಸುತ್ತೇವೆ. ಕಾಯಿಕೊರಕ ಹುಳು, ಹೇನು ಎಲ್ಲವೂ ಈ ಬೆಳೆಗಳಿಗೆ ಮೊದಲು ಹಾನಿ ಮಾಡುತ್ತವೆ. ಅಷ್ಟರಲ್ಲಿ ಈ ಬೆಳೆ ಮಾಗಿ ಕೀಟಗಳಿಗೆ ದೊರೆಯುವುದಿಲ್ಲ. ಕೀಟನಾಶಕದ ಸಿಂಪರಣೆ ತುಂಬಾ ಕಡಿಮೆಯಾದ ಕಾರಣ ಕೆಲವು ಉಪಕಾರಿ ಕೀಟಗಳ ಸಂಖ್ಯೆ ಹೆಚ್ಚಿದೆ. ಇದರಿಂದ ನೈಸರ್ಗಿಕವಾಗಿಯೇ ಕೀಟ ನಿಯಂತ್ರಣ ಆಗುತ್ತದೆ ಎನ್ನುತ್ತಾರೆ.

ಬಿಟಿ ಹತ್ತಿಯಲ್ಲಿ ಹಲವಾರು ಕಂಪೆನಿಗಳ ಬೀಜಗಳಿವೆ. ಕೆಲವು ಕಂಪೆನಿಗಳ ಬೀಜ ಉತ್ತಮವಾಗಿರುತ್ತದೆ. ಮತ್ತೆ ಕೆಲವು ಸ್ವಲ್ಪ ಕಡಿಮೆ ಗುಣಮಟ್ಟ. ಉತ್ತಮ ಕಂಪೆನಿಯ ಬೀಜ ಮಾರುಕಟ್ಟೆಯಲ್ಲಿ ಕೊರತೆ ಇರುತ್ತದೆ. ಆದ ಕಾರಣ ರೈತರು ನಿರ್ವಾಹವಿಲ್ಲದೆ ಕಡಿಮೆ ದರ್ಜೆಯ ಬೀಜ ಬಿತ್ತನೆ ಮಾಡಿ ಸ್ವಲ್ಪ ಇಳುವರಿ ಕಡಿಮೆ ಮಾಡಿಕೊಳ್ಳುತ್ತಿದ್ದಾರೆ. ಏನೇ ಆದರೂ ಹತ್ತಿ ಬೆಳೆ ಉಳಿಯಲು ಬಿಟಿ ತಳಿ ಬಂದುದು ಒಂದು ವರ ಎಂಬುದು ಹಲವಾರು ರೈತರ ಅನಿಸಿಕೆ.

- ರಾಧಾಕೃಷ್ಣ ಹೊಳ್ಳ

ಮಲ್ಲಿಕಾರ್ಜುನ ಖರ್ಗೆಗೆ ಮಾನಸಿಕ ಅಸ್ವಸ್ಥತೆ

ಸ್ವಯಂಪ್ರೇರಿತ ದೂರು ದಾಖಲಿಸಿ ಯೋಗ್ಯ ಚಿಕಿತ್ಸೆ ಕೊಡಿಸಿ: ಮಾಜಿ ಸಚಿವ ಸಿ.ಟಿ.ರವಿ ಒತ್ತಾಯ

• ಪ್ರಜೋದಯ ವರದಿ

ಬೆಂಗಳೂರು: ಬಿಜೆಪಿ ಮತ್ತು ಆರ್‌ಎಸ್‌ಎಸ್ ವಿರುದ್ಧ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆಕ್ಷೇಪಾರ್ಹ ಹೇಳಿಕೆ ನೀಡಿರುವುದು ಹತಾಶವಾದ ಮಾನಸಿಕ ಅಸ್ವಸ್ಥತೆಯನ್ನು ಪ್ರತಿಬಿಂಬಿಸುವ ರೀತಿ ಇದೆ. ಖರ್ಗೆ ಅವರ ವಿರುದ್ಧ ಸ್ವಯಂಪ್ರೇರಿತ ದೂರು ದಾಖಲಿಸಿ ಯೋಗ್ಯ ಚಿಕಿತ್ಸೆ ಕೊಡಿಸಿ ಮತ್ತು ಅವರಿಗೆ ರಾಜಕೀಯ ನಿವೃತ್ತಿ ಕೊಡಿಸಿ ಎಂದು ಮಾಜಿ ಸಚಿವ ಸಿ.ಟಿ.ರವಿ ಅವರು ಆಗ್ರಹಿಸಿದರು.

ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಅವರು ಬುಧವಾರ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಖರ್ಗೆ ಅವರು ಆರು ದಶಕಗಳ ಕಾಲ ರಾಜಕಾರಣದಲ್ಲಿ ಹಲವಾರು ಹುದ್ದೆಗಳನ್ನು ಅನುಭವಿಸಿ ಇಂತಹ ಹೇಳಿಕೆ ನೀಡುವುದು ಒಳ್ಳೆಯದಲ್ಲ. ಹಿರಿತನದ ಹಾಗೂ ಮುತ್ಸದ್ದಿತನದ ಹೇಳಿಕೆಗಳಾಗಿ ಕಾಣುತ್ತಿಲ್ಲ. ಇದೊಂದು ದ್ವೇಷದ ಹೇಳಿಕೆ ಎಂದರು.

ಗುಜರಾತ್ ಜನ ಅನಕ್ಷರಸ್ಥರಾಗಿರುವುದರಿಂದ ಬಿಜೆಪಿ ಗೆಲ್ಲಿಸಿದರು ಎಂದು ಖರ್ಗೆ ಅವರು ಹೇಳಿದರು. ಹೀಗೆ ಹೇಳಿ ಗುಜರಾತ್ ಜನರನ್ನು ಅವಮಾನಿಸಿದರು. ಕರ್ನಾಟಕದಲ್ಲಿ ನಿರಂತರವಾಗಿ ಲೋಕಸಭೆಗೆ ಬಿಜೆಪಿಯನ್ನು ಜನ ಬೆಂಬಲಿಸುತ್ತಿದ್ದಾರೆ, ಹಾಗಾದರೆ ಕರ್ನಾಟಕದ ಜನರೂ ಅನಕ್ಷರಸ್ಥರೇ ಎಂದು ಪ್ರಶ್ನಿಸಿದರು.

ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಮತ್ತು ಆರ್‌ಎಸ್‌ಎಸ್ ಅನ್ನು ವಿಷಸರ್ಪಕ್ಕೆ ಹೋಲಿಸಿದ್ದೀರಿ. ಮುಂದೆ ಮುಸ್ಲಿಮರನ್ನು ಪ್ರಚೋದಿಸುವ ಕೆಲಸ ಮಾಡಿದ್ದೀರಿ. ಈ ಮೂಲಕ ಪ್ರಜಾಪ್ರಭುತ್ವ ವಿರೋಧಿಯಾಗಿ ನೀವು ವರ್ತಿಸಿದ್ದೀರಿ. ಮಹಾತ್ಮ ಗಾಂಧಿ ಅವರ ಅನುಯಾಯಿ ಆದ

ನೀವು ಇಂತಹ ಹೇಳಿಕೆ ನೀಡಬಾರದು. ಗಾಂಧಿ ಅವರು ಇದನ್ನೇ ಬೋಧಿಸಿದ್ದೆ. ಅಹಿಂಸಾ ತತ್ವ ಅಂದರೆ ಇದೇನಾ. ಇವತ್ತಿನ ಗಾಂಧಿ ಗಳು ಇಂತಹ ಹೇಳಿಕೆ ನೀಡಿ ಎಂದು ಹೇಳಿಕೊಡುತ್ತಿದ್ದರಾ ಎಂದರು.

ಕರ್ನಾಟಕ ಸರ್ಕಾರವು ದ್ವೇಷ ಭಾಷಣ ನಿಷೇಧ ಮಸೂದೆ ತಂದಿದೆ. ಈಗ ಖರ್ಗೆ ಅವರ ಭಾಷಣವೂ ಇದೇ ಮಸೂದೆ ವ್ಯಾಪ್ತಿಗೆ ಬರುವುದಿಲ್ಲವೇ. ಮುಖ್ಯಮಂತ್ರಿಗಳು ಹಾಗೂ ಮರಿ ಖರ್ಗೆ ಯಾಕೆ ಮಾತನಾಡುತ್ತಿಲ್ಲ. ಪ್ರಿಯಾಂಕ್ ಅವರೂ ಸಮರ್ಥನೆ ಮಾಡುತ್ತಾರೆ ಅಂದರೆ ಅನುವಂಶೀಯವಾಗಿ ಮಾನಸಿಕ ಅಸ್ವಸ್ಥೆ ಇದೆ ಎಂದಾಯಿತು ಎಂದರು.

ಖರ್ಗೆ ಅವರ ಇಂತಹ ಹೇಳಿಕೆಗಳು ಸಮಾಜದ ಮೇಲೆ ಕೆಟ್ಟ ಪರಿಣಾಮ ಬೀರುತ್ತವೆ. ಒಂದು ವೇಳೆ ಕಾಂಗ್ರೆಸ್‌ಗೆ ಸಂಬಂಧ ಇದೆ ಅನ್ನುವುದಾದರೆ ಕಾಂಗ್ರೆಸ್ ಅನ್ನು ಚುನಾವಣಾ ವ್ಯಾಪ್ತಿಯಿಂಧ ನಿಷೇಧ ಮಾಡಲು ಕ್ರಮ ಕೈಗೊಳ್ಳಬೇಕು. ಕಾಂಗ್ರೆಸ್ಸಿಗರು ಸಂಬಂಧ ಇಲ್ಲ ಅಂತಾದರೆ ಸ್ಪಷ್ಟನೆ ಕೊಡಬೇಕು. ಆಯೋಗ ಗಂಭೀರ ಕ್ರಮ ಕೈಗೊಳ್ಳಬೇಕು ಎಂದರು.

ಬಿಜೆಪಿ ಮತ್ತು ಕಾಂಗ್ರೆಸ್‌ಗೆ ವೈಚಾರಿಕಾ ವಿರೋಧ ಇರಬಹುದು. ಆದರೆ ನಾವೂ ಎಂದೂ ಕಾಂಗ್ರೆಸ್ಸಿಗರನ್ನು ಕೊಲ್ಲಿ ಅಂತ ಹೇಳಿಲ್ಲ. ಚುನಾವಣೆಯಲ್ಲಿ ಸೋಲಿಸಿ ಅಂತ ಕರೆ ನೀಡುತ್ತೇವೆ. ಭ್ರಷ್ಟಾಚಾರಿಗಳಾದ ಕಾಂಗ್ರೆಸ್‌ನವರು ದೇಶ ವಿಭಜನೆಗೆ ಕಾರಣರಾದವರು. ಅಂದಿನಿಂದ ಕುಟುಂಬ ರಾಜಕಾರಣ ಮಾಡ್ತ ಬಂದವರು. ಸಂವಿಧಾನ ಶಿಲ್ಪಿ ಅಂಬೇಡ್ಕರ್ ಅವರನ್ನು ಸೋಲಿಸಿದವರು. ತುರ್ತು ಪರಿಸ್ಥಿತಿ ಹೇರಿದ ಸರ್ವಾಧಿಕಾರಿಗಳು ಎಂದು ನುಡಿದರು.

ಬಿಜೆಪಿ ಹಾಗೂ ಆರ್‌ಎಸ್‌ಎಸ್ ಇರೋದರಿಂದ ಕಾಂಗ್ರೆಸ್ ಇರೋದು. ಹಾಗೂ ರಾಜಕಾರಣ ಮಾಡಲು ಸಾಧ್ಯ. ಕಾಂಗ್ರೆಸ್‌ಗೆ ನಿರಂತರ ಸೋಲಿನಿಂದ ಹತಾಶೆ ಆಗಿದೆ. ಪಶ್ಚಿಮ ಬಂಗಾಳದಲ್ಲಿ ಠೇವಣಿ ಸಹ ಬರಲ್ಲ. ಪ್ರಚೋದಿಸಿದರೂ ಮುಸ್ಲಿಮರು ಹಾಗೂ ಹಿಂದೂಗಳು ಮತ ಹಾಕಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

2028 ರ ವರೆಗೆ ರಾಜ್ಯದ ಜನ ಅಧಿಕಾರ ಕೊಟ್ಟಿದ್ದಾರೆ. ನಂತರ ಕಾಂಗ್ರೆಸ್ ಸೋಲುತ್ತೆ. ಸೋಲು ಅವರಿಗೆ ಕಟ್ಟಿಟ್ಟ ಬುತ್ತಿ. ರಾಜ್ಯದಲ್ಲಿನ ಸರ್ಕಾರದ ಕೆಟ್ಟ ಆಡಳಿತದಿಂದ ಸೋಲು ಖಚಿತವಾಗಿದೆ. ಯಾರೇ ಬಂದರೂ ಕಾಂಗ್ರೆಸ್‌ನ್ನು ಗೆಲ್ಲಿಸಲು ಸಾಧ್ಯವಿಲ್ಲ ಎಂದು ಹೇಳಿದರು.

ತೊಗರನಹಳ್ಳಿಯಲ್ಲಿ ಸಂಭ್ರಮದ ಜಾತ್ರಾ ಉತ್ಸವ

• ಪ್ರಜೋದಯ ವರದಿ

ಆಲೂರು: ಕಸಬಾ ಕಣತೂರು ಗ್ರಾಮ ಪಂಚಾಯಿತಿ ತೊಗರನಹಳ್ಳಿ ಗ್ರಾಮದಲ್ಲಿ ಕೊಲ್ಲಿ ಅಮ್ಮನವರು, ಶನಿ ದೇವರು, ಬಸವಣ್ಣ ದೇವರು, ಆಂಜನೇಯ ಸ್ವಾಮಿ, ಬನಶಂಕರಿ ಅಮ್ಮನವರು, ಸುಂಕದಮ್ಮ ಹಾಗೂ ಲಕ್ಷ್ಮೀದೇವರ ಜಾತ್ರೋತ್ಸವ ಮತ್ತು ಕೆಂಡೋತ್ಸವ ಸಡಗರ ಸಂಭ್ರಮದಿಂದ ನಡೆಯಿತು.

ಬನಶಂಕರಿ ಅಮ್ಮನವರ ಸನ್ನಿದಿಯಲ್ಲಿ ಹೋಮ, ಅಭಿಷೇಕ ಹಾಗೂ ನವಗ್ರಹಗಳ ಪೂಜೆ ನಂತರ, ಬನದಿಂದ ಪೂರ್ವಜರ ಕಾಲದಿಂದಲೂ ನಡೆಸಿಕೊಂಡು ಬಂದಂತೆ ಸಂಕಲ್ಪ ಮಾಡಿಕೊಂಡ ಮಕ್ಕಳಿಂದ ಶನಿದೇವರ ಕಳಸ, ಲಕ್ಷ್ಮೀದೇವರ ಕಳಸ, ಬನಶಂಕರಿ ಅಮ್ಮನವರ ಕಳಸ, ಮುಂತಾದ ದೇವರ ಕಳಸಗಳನ್ನು ಪೂಜಿಸಲಾಯಿತು.

ಕೊಲ್ಲಿಯಮ್ಮ ಅಡ್ಡೆ ದೇವರ ಉತ್ಸವ ಗ್ರಾಮದ ಬೀದಿಗಳಲ್ಲಿ ಸಂಚರಿಸಿತು. ಗ್ರಾಮಸ್ಥರು ಸಂಭ್ರಮ ದಿಂದ ಆರತಿ ಬೆಳಗುವ ಮೂಲಕ ದೇವಸ್ಥಾನಗಳಿಗೆ ಬರಮಾಡಿಕೊಳ್ಳಲಾಯಿತು.

ಮರು ದಿನ ಪುನಃ ಕೊಲ್ಲಿಅಮ್ಮ

ನವರ ಅಡ್ಡೆಗೆ ಗಂಗಾ ಸ್ನಾನ ಮಾಡಿಸಿ, ವಸ್ತ್ರ ಪುಷ್ಪಲಂಕಾರ ಮಾಡಿ, ಶನಿದೇವರ ಕಳಸ, ಬಸವಣ್ಣನವರ ಕಳಸ, ಬನಶಂಕರಿ ಅಮ್ಮನವರ ಕಳಸ, ಲಕ್ಷ್ಮೀದೇವರ ಕಳಸ ಮೊದಲಾದ ದೇವರ ಕಳಸಗಳನ್ನು 7 ವರ್ಷ ಮೇಲ್ಪಟ್ಟ ಗಂಡು ಹಾಗೂ ಋತುಮತಿಯಾಗದ ಹೆಣ್ಣು ಮಕ್ಕಳ ತಲೆ ಮೇಲೆ ಇಟ್ಟು, ಗ್ರಾಮದ ಬೀದಿಗಳಲ್ಲಿ ಉತ್ಸವದ ಮೂಲಕ ವಾದ್ಯಗೋಷ್ಠಿಯೊಂದಿಗೆ ದೇವಸ್ಥಾನಗಳ ಆವರಣಗಳಿಗೆ ಬರಮಾಡಿಕೊಳ್ಳಲಾಯಿತು.

ನಂತರ ಬಸವಣ್ಣನವರ ದೇವಸ್ಥಾನದ ಮುಂಭಾಗ ಕೆಂಡೋತ್ಸವ ನಡೆಯಿತು. ದೇವರ ಪ್ರದಕ್ಷಣೆ ಹಾಕುವುದರಿಂದ ದುಷ್ಟ ಶಕ್ತಿಗಳ ಕಾಟದಿಂದ ಬಿಡುಗಡೆ ಆಗುತ್ತದೆ. ಆರೋಗ್ಯ ವೃದ್ಧಿಸುತ್ತದೆ ಎಂಬ ನಂಬಿಕೆಯಿಂದ ಮಕ್ಕಳು, ಮಹಿಳೆಯರು ಹಾಗೂ ಸುತ್ತಮುತ್ತಲ ಗ್ರಾಮಸ್ಥರು ಕೆಂಡವನ್ನು ಹಾಯ್ದು ದೇವರಲ್ಲಿ ಪ್ರಾರ್ಥಿಸಿದರು. ಭಕ್ತರಿಗೆ ಅನ್ನದಾನ ಪ್ರಸಾದ ವಿನಿಯೋಗ ಮಾಡಲಾಯಿತು.

ಸಂಜೆ ಜಾತ್ರೆ ಅಂಗವಾಗಿ ನಡೆಸಿದ್ದ ವಿವಿಧ ಕ್ರೀಡೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ನಂತರ ರಸಮಂಜರಿ ಕಾರ್ಯಕ್ರಮ ನಡೆಯಿತು.

ಕದನ ವಿರಾಮ ಸ್ವಾಗತಿಸಿದ ಭಾರತ ಮುಕ್ತ ವಾಣಿಜ್ಯ ಸಂಚಾರಕ್ಕೆ ಕರೆ

• ಪ್ರಜೋದಯ ವರದಿ

ಹೊಸದಿಲ್ಲಿ: ಪ್ರಾದೇಶಿಕ ಯುದ್ಧಕ್ಕೆ 2 ವಾರಗಳ ಕದನ ವಿರಾಮ ಘೋಷಿಸಿರುವ ಅಮೆರಿಕಾ ಹಾಗೂ ಇರಾನ್ ನಡೆಯನ್ನು ಸ್ವಾಗತಿಸಿದ್ದು, ಈ ಕದನವಿರಾಮ ಹೊರ್ಮುಜ್ ಜಲಸಂಧಿಯ ಮೂಲಕ ಜಾಗತಿಕ ವಾಣಿಜ್ಯ ಹರಿವನ್ನು ಪುನಃಸ್ಥಾಪಿಸುತ್ತದೆ ಎಂದು ಭಾರತ ನಿರೀಕ್ಷಿಸುತ್ತದೆ ಎಂದು ತಿಳಿಸಿದೆ.

ಕದನ ವಿರಾಮದ ಬೆನ್ನಲ್ಲೇ, ಬುಧವಾರ ಭಾರತದ ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಅವರು ಸಚಿವಾಲಯದಿಂದ ಬಿಡುಗಡೆಯಾದ ಹೇಳಿಕೆಯನ್ನು ತಮ್ಮ ಅಧಿಕೃತ ಖಾತೆಯ ಮೂಲಕ ಹಂಚಿಕೊಂಡಿದ್ದಾರೆ. ಇದರಲ್ಲಿ ಭಾರತ

ಕದನ ವಿರಾಮವನ್ನು ಸ್ವಾಗತಿಸುತ್ತದೆ ಮತ್ತು ಅದು ಪಶ್ಚಿಮ ಏಷ್ಯಾದಲ್ಲಿ ಶಾಶ್ವತ ಶಾಂತಿಗೆ ಕಾರಣವಾಗುತ್ತದೆ ಎಂದು ನಾವು ಆಶಿಸುತ್ತೇವೆ. ಜೊತೆಗೆ ಪ್ರಾದೇ ಶಿಕವಾಗಿ ನಡೆಯುತ್ತಿರುವ ಸಂಘರ್ಷ ವನ್ನು ಶಮನಗೊಳಿಸಲು ಉದ್ವಿಗ್ನತೆ ಶಮನಗೊಳಿಸುವ ಸಂವಾದ ಮತ್ತು ರಾಜತಾಂತ್ರಿಕ ಮಾತುಕತೆಗಳು ಅಗತ್ಯ ಎಂದು ನಿರಂತರವಾಗಿ ಪ್ರತಿಪಾದಿಸಿದೆ ಎಂದು ತಿಳಿಸಿದೆ.

ರಸ್ತೆ ಅಪಘಾತಗಳ ತಡೆಗೆ ಸೂಕ್ತ ಕ್ರಮ ವಹಿಸಿ

• ಪ್ರಜೋದಯ ವರದಿ

ಹಾಸನ: ಜಿಲ್ಲೆಯಲ್ಲಿ ರಸ್ತೆ ಅಪಘಾತಗಳ ತಡೆಗೆ ಸೂಕ್ತ ಕ್ರಮವಹಿಸಿ ಮರಣ ಪ್ರಮಾಣವನ್ನು ಕಡಿಮೆ ಮಾಡುವುದರ ಮೂಲಕ ಜನರ ಜೀವ ಉಳಿಸಲು ಪ್ರಾಮಾಣಿಕ ಪ್ರಯತ್ನ ಮಾಡುವಂತೆ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ವಿಡಿಯೋ ಸಂವಾದದ ಮೂಲಕ ಬುಧವಾರ ಸಭೆ ನಡೆಸಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ರಸ್ತೆ ಅಪಘಾತಗಳು ಸಂಭವಿಸುತ್ತಿವ ಬ್ಲಾಕ್ ಸ್ಪಾಟ್‌ಗಳನ್ನು ಗುರುತಿಸಿ ಅಪಘಾತ ತಡೆಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರಲ್ಲದೆ, ಅಧಿಕಾರಿಗಳು ಸಮನ್ವಯತೆಯಿಂದ ಕರ್ತವ್ಯ ನಿರ್ವಹಿಸುವ ಮೂಲಕ ರಸ್ತೆ ಅಪಘಾತಗಳನ್ನು ಪರಿಣಾಮಕಾರಿ

ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಸೂಚನೆ



ಯಾಗಿ ತಡೆಗಟ್ಟಲು ಸೂಚಿಸಿದರು.

ಸಮಾಜದ ಒಳಿತಿಗಾಗಿ ಪ್ರಮಾಣಿಕ ಪ್ರಯತ್ನವಿರಬೇಕು. ಈ ನಿಟ್ಟಿನಲ್ಲಿ ಗೋಲ್ಡನ್ ಅವರ್ ಅನುಷ್ಠಾನಕ್ಕೆ ಹೆಚ್ಚು ಒತ್ತು ನೀಡಬೇಕು. ಪಾದಚಾರಿಗಳು ಓಡಾಡಲು ತೊಂದರೆ ಆಗದಂತೆ ಫುಟ್‌ಪಾತ್ ಒತ್ತುವರಿಯಾಗಿದ್ದಲ್ಲಿ ಅದನ್ನು ತೆರವುಗೊಳಿಸಲು ಕ್ರಮ ವಹಿಸಲು ಅಧಿಕಾರಿಗಳಿಗೆ ಸೂಚಿಸಿದರಲ್ಲದೆ, ರಸ್ತೆ ಒತ್ತುವರಿ ಆಗಿರುವುದನ್ನು ಗುರುತಿಸಿ ತೆರವಿಗೆ ನಿಗಾ ವಹಿಸಬೇಕು ಎಂದು ಹೇಳಿದರು.

ರಸ್ತೆ ಅಪಘಾತಗಳನ್ನು ತಪ್ಪಿಸಲು ನ್ಯೂನ್ಯತೆಗಳನ್ನು ಗುರುತಿಸಿ ಸರಿಪಡಿಸುವ ಮೂಲಕ ರಸ್ತೆ ಸುರಕ್ಷತೆ ಬಲಪಡಿಸಬೇಕು. ಈ ಹಿನ್ನೆಲೆಯಲ್ಲಿ ವಾರಕ್ಕೆ ಒಮ್ಮೆ ಸಭೆ ನಡೆಸಿ ಚರ್ಚಿಸಿ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರಲ್ಲದೆ, ಸೈನೇಜ್ ಬೋರ್ಡ್, ಎಚ್ಚರಿಕೆ ಸೂಚನಾ ಫಲಕ ಅಳವಡಿಸುವುದು, ಬೀದಿ ದೀಪ ಅಳವಡಿಸುವುದು, ನಾಯಿಗಳ ಹಾವಳಿ ತಡೆಯಲು ಕ್ರಮ, ವೈಜ್ಞಾನಿಕವಾಗಿ ಹಂಪ್ಸ್ ಅಳವಡಿಸುವ ಮೂಲಕ ರಸ್ತೆ ಸುರಕ್ಷತೆಗೆ ಪ್ರಾಮುಖ್ಯತೆ ನೀಡಬೇಕು ಎಂದ ಅವರು, ಗ್ರಾಮೀಣ ಪ್ರದೇಶದಲ್ಲಿ ಟ್ರಾಕ್ಟರ್ ಹಾಗೂ ಎತ್ತಿನ ಗಾಡಿಗಳಿಗೆ ರಿಫ್ಲೆಕ್ಟರ್ ಅಳವಡಿಸಲು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ತಾಲ್ಲೂಕು ಮಟ್ಟದಲ್ಲಿಯೂ ರಸ್ತೆ ಸುರಕ್ಷತೆಗೆ ವಿಶೇಷ ಕಾಳಜಿವಹಿಸಿ ಅಪಘಾತ ತಡೆಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರಲ್ಲದೆ, ಹಸಿರು ಹಾಸನ' ನಿರ್ಮಾಣಕ್ಕೆ ಹೆಚ್ಚಿನ ಒತ್ತು ನೀಡಬೇಕು ಈ ನಿಟ್ಟಿನಲ್ಲಿ ಸಂಚಾರಕ್ಕೆ ತೊಂದರೆ ಆಗದಂತೆ ಗಿಡಗಳನ್ನು ನೆಟ್ಟು ಬೆಳೆಸಲು ಕ್ರಮವಹಿಸಲು ಅಧಿಕಾರಿಗಳಿಗೆ ಸೂಚಿಸಿದರು.

ವಿಡಿಯೋ ಸಂವಾದದಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು ಭಾಗವಹಿಸಿದ್ದರು.

ದ್ವಿತೀಯ ಪಿಯುಸಿ ಫಲಿತಾಂಶ ಇಂದು

• ಪ್ರಜೋದಯ ವರದಿ

ಬೆಂಗಳೂರು: ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯಮಾಪನ ಮಂಡಳಿ ದ್ವಿತೀಯ ಪಿಯುಸಿ ಪರೀಕ್ಷೆ-1ರ ಫಲಿತಾಂಶವನ್ನು ನಾಳೆ ಏಪ್ರಿಲ್ 9, 2026ರಂದು ಪ್ರಕಟವಾಗಲಿದೆ. ಮಂಡಳಿಯು ಸುದ್ದಿಗೋಷ್ಠಿ ಮೂಲಕ ಫಲಿತಾಂಶ ಪ್ರಕಟಿಸಲಿದ್ದು, ಶಿಕ್ಷಣ ಸಚಿವ ಮಧು ಬಂಗಾರಪ್ಪ ಫಲಿತಾಂಶ ಬಿಡುಗಡೆ ಮಾಡಲಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ. ಏಪ್ರಿಲ್ 9 ರಂದು ಫಲಿತಾಂಶ ಪ್ರಕಟವಾಗಲಿದೆ.

ಈ ವರ್ಷದ ದ್ವಿತೀಯ ಪಿಯುಸಿ ಪರೀಕ್ಷೆಗಳು ಫೆಬ್ರವರಿ 28 ರಿಂದ ಮಾರ್ಚ್ 17 ರವರೆಗೆ ರಾಜ್ಯಾದ್ಯಂತ ನಡೆದಿದ್ದವು. ಪರೀಕ್ಷೆಗೆ ಒಟ್ಟು 7,10,363 ವಿದ್ಯಾರ್ಥಿಗಳು ನೊಂದಾಯಿಸಿಕೊಂಡಿದ್ದು, ರಾಜ್ಯದ 1,217 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ಯಶಸ್ವಿಯಾಗಿ ನಡೆಸಲಾಗಿತ್ತು.

ಮೊದಲಿಗೆ ಮಂಡಳಿಯು ಏಪ್ರಿಲ್ 7ರಂದು ಫಲಿತಾಂಶ ಪ್ರಕಟಿಸುವ ಸೂಚನೆ ನೀಡಿದ್ದರೂ, ಚುನಾವಣಾ ನೀತಿ ಸಂಹಿತೆಯ ಅನುಮತಿ ಪ್ರಕ್ರಿಯೆ ಹಿನ್ನೆಲೆಯಲ್ಲಿ ಫಲಿತಾಂಶ ಪ್ರಕಟಣೆ ಮುಂದೂಡಲಾಗಿತ್ತು. ಈಗ ಚುನಾವಣೆ ಆಯೋಗ ಫಲಿತಾಂಶ ಪ್ರಕಟಣೆಗೆ ಒಪ್ಪಿಗೆ ಸೂಚಿಸಿದ್ದು, ನಾಳೆ ಫಲಿತಾಂಶ ಹೊರಬೀಳಲಿದೆ.

ವಿದ್ಯಾರ್ಥಿಗಳು ತಮ್ಮ ಫಲಿತಾಂಶವನ್ನು ಅಧಿಕೃತ ವೆಬ್‌ಸೈಟ್ https://karresults.nic ನಲ್ಲಿ ವೀಕ್ಷಿಸಬಹುದಾಗಿದೆ.

ರಾಜ್ಯದ ಲಕ್ಷಾಂತರ ವಿದ್ಯಾರ್ಥಿಗಳು ಕಾತರದಿಂದ ಕಾಯುತ್ತಿರುವ ದ್ವಿತೀಯ ಪಿಯುಸಿ ಫಲಿತಾಂಶ ಪ್ರಕಟಣೆಗೆ ಕ್ಷಣಗಣನೆ ಆರಂಭವಾಗಿದೆ.

ಪ್ರೇಕ್ಷಕರ ಮನಸೆಳೆದ ಸಂಪೂರ್ಣ ರಾಮಾಯಣ

• ಪ್ರಜೋದಯ ವರದಿ

ಹಾಸನ: ಜೈ ಮಾರುತಿ ಕೃಪಾ ಪೋಷಿತ ನಾಟಕ ಮಂಡಳಿ, ದೊಡ್ಡಮಂಡಿಗನಹಳ್ಳಿ ಕಲಾವಿದರು ಇತ್ತೀಚಿಗೆ ವಿಜಯನಗರ ಬಡಾವಣೆಯಲ್ಲಿ ಶ್ರೀ ಸಿದ್ದಲಿಂಗೇಶ್ವರ ಡ್ರಾಮ ಸೀನರಿ, ಬಂದೂರು ಇವರ ಭವ್ಯ ರಂಗಸಜ್ಜಿಕೆಯಲ್ಲಿ ಸಂಪೂರ್ಣ ರಾಮಾಯಣ ಪೌರಾಣಿಕ ನಾಟಕವನ್ನು ಯಶಸ್ವಿಯಾಗಿ ಪ್ರದರ್ಶಿಸಲಾಯಿತು.

ನಾಟಕದಲ್ಲಿ ಅಭಿನಯಿಸಿದ ಕಲಾವಿದರುಗಳನ್ನು ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ರಾವಣನ ಪಾತ್ರದಾರಿ ಜವರೇಗೌಡರ ನಿವಾಸದಲ್ಲಿ ಸಂಘದ ವತಿಯಿಂದ ಸನ್ಮಾನಿಸಿ ಗೌರವಿಸಿ ನಟರ ನಟನ ಕೌಶಲ್ಯ ಕುರಿತು ಕಲಾವಿದರು ಅಭಿಪ್ರಾಯ ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಸಂದರ್ಭ ತಂಡದ ನೇತೃತ್ವ ವಹಿಸಿ ಕಾರ್ಯಕ್ರಮವನ್ನು ಯಶಸ್ವಿ

ಯಾಗಿ ಸಂಘಟಿಸಿದ ಮತ್ತು ಭರತನ ಪಾತ್ರವನ್ನು ಸಮರ್ಥವಾಗಿ ನಿಭಾಯಿಸಿದ ಕಲಾವಿದರು ಎಂ.ಸಿ.ಶ್ರೀನಿವಾಸ್, ಡಿ.ಎಂ.ಹಳ್ಳಿ ಅವರನ್ನು ಕಲಾವಿದರು ಸನ್ಮಾನಿಸಿ ಗೌರವಿಸಿದರು.

ಈ ಸಂದರ್ಭದಲ್ಲಿ ಸಾಹಿತಿ ಗೊರೂರು ಅನಂತರಾಜು, ಕಲಾವಿದರಾದ ತೇಜೂರು ಸೋಮಣ್ಣ, ಹನುಮೇಗೌಡ ಬಾರೇ ಹೊಸೂರು, ಜವರೇಗೌಡ, ಸಾಣೇನಹಳ್ಳಿ ಸೋಮಣ್ಣ, ಎಲ್‌ಐಸಿ ರಂಗಸ್ವಾಮಿ, ಯೋಗೇಶ್, ಶ್ರೀಕಂಠಪ್ಪ, ಆಲೂಗೆಡ್ಡೆ ಶಶಿ, ಜವರೇಗೌಡ, ನಾಗಮೋಹನ್, ಬೆಂಡೆ ಮಂಜಣ್ಣ, ಬ್ಯಾಟಾಚಾರ್, ದೇವರಾಜು, ಅಭಿಷೇಕ್ ರಂಗಸ್ವಾಮಿ, ಶಿವಣ್ಣ, ವೆಂಕಟೇಶ್, ಜೀವನ್, ಪರಮೇಶ್, ಹರ್ಷ, ಮಂಜುನಾಥ್, ಅಭಿಷೇಕ್ ಮತ್ತು ನಾಟಕ ನಿರ್ದೇಶಕರು ಹೇಮಂತ್ ದೇವರಾಜ್ ಆಚಾರ್ಯ ಇತರರು ಹಾಜರಿದ್ದರು.

ಜೂಜಾಟ, ಬೆಟ್ಟಿಂಗ್‌ನಿಂದ ವಿದ್ಯಾರ್ಥಿಗಳ ಜೀವನ ಹಾಳು

• ಪ್ರಜೋದಯ ವರದಿ

ಹಳೇಬೀಡು: ಆನ್ ಲೈನ್ ಬೆಟ್ಟಿಂಗ್ ಹಾಗೂ ಗೇಮ್‌ನಲ್ಲಿ ವಿದ್ಯಾರ್ಥಿಗಳು ಸಹ ತೊಡಗಿಕೊಂಡು ಜೀವನ ಹಾಳು ಮಾಡಿಕೊಳ್ಳುತ್ತಿದ್ದಾರೆ. ಜೂಜಾಟ ಹಾಗೂ ಬೆಟ್ಟಿಂಗ್‌ಗೆ ಬಲಿಯಾದ ವ್ಯಕ್ತಿ ಸಮತೋಲನದಲ್ಲಿರಲು ಸಾಧ್ಯವಿಲ್ಲ ಎಂದು ಮಾನಸಿಕ ತಜ್ಞ ಡಾ.ಕಾರ್ತಿಕ್ ಹೇಳಿದರು.

ಹಳೇಬೀಡಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಬುಧವಾರ ವಿಶ್ವ ಆರೋಗ್ಯ ದಿನಾಚರಣೆ ಹಾಗೂ ಮಾದಕ ವ್ಯಸನ ಮುಕ್ತ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಶರವೇಗದಲ್ಲಿ ಬೆಳೆಯುತ್ತಿರುವ ಆನ್ ಲೈನ್ ಬೆಟ್ಟಿಂಗ್ ನಿಂದ ಜನರ ನೆಮ್ಮದಿ ಹಾಳಾಗುತ್ತಿದೆ. ಸೋಲು- ಗೆಲುವಿನ ಏರಿಳಿತದಿಂದ ಮಾನಸಿಕ ಸಮಸ್ಯೆಗೆ ಜನರು ಬಲಿಯಾಗುತ್ತಿದ್ದಾರೆ ಎಂದು ವಿಷಾದಿಸಿದರು.

ಜೂಜಾಟ, ಬೆಟ್ಟಿಂಗ್ ಮೊದಲು ಮನರಂಜನೆಗಾಗಿ ಶುರುವಾಗುತ್ತದೆ. ನಂತರ ಚಟವಾಗಿ ಪರಿಣಮಿಸುತ್ತದೆ. ಆಡದೆ ಇದ್ದರೆ ಕೋಪ ಬರುತ್ತದೆ. ಯಾರೊಂದಿಗೂ ಪ್ರೀತಿ ವಿಶ್ವಾಸದಿಂದ ಇರಲು ಸಾಧ್ಯವಾಗದೆ ಮಾನಸಿಕ ತೊಳಲಾಟಕ್ಕೆ ಬಲಿಯಾಗಿ ಜೀವನ ಹಾಳಾಗುತ್ತದೆ. ಬೆಟ್ಟಿಂಗ್, ಜೂಜಾಟದಿಂದ ದೂರವಿದ್ದು, ಉತ್ತಮ ಹವ್ಯಾಸ ರೂಢಿಸಿಕೊಂಡವರು ಆರೋಗ್ಯವಂತರಾಗಿ ನೆಮ್ಮದಿಯ ಜೀವನ ಸಾಗಿಸಬಹುದು ಎಂದು ತಿಳಿಸಿದರು.

ಬೇಲೂರು ರೋಟರಿ ಕ್ಲಬ್ ಅಧ್ಯಕ್ಷ ಬಿ.ಎಂ.ರಂಗನಾಥ್ ಮಾತನಾಡಿ, ಶಾಲಾ ಕಾಲೇಜು ಬಳಿ ಗಾಂಜಾ, ಅಫೀಮು, ಡ್ರಗ್ಸ್ ಮಾರಾಟವಾಗುತ್ತಿರುವುದು ಆತಂಕಕಾರಿ ಬೆಳವಣಿಗೆ. ವಿದ್ಯಾರ್ಥಿಗಳು ಚಟಗಳಿಗೆ ಬಲಿಯಾಗದಂತೆ ಎಚ್ಚರ ವಹಿಸಬೇಕಾಗಿದೆ ಎಂದು ಸಲಹೆ ನೀಡಿದರು.

ಭಾರತೀಯ ರೆಡ್‌ಕ್ರಾಸ್ ಜಿಲ್ಲಾ ಸಭಾಪತಿ ಎಚ್.ಪಿ.ಮೋಹನ್ ಮಾತನಾಡಿ, ರೆಡ್‌ಕ್ರಾಸ್ ಪರೀಕ್ಷೆಯಲ್ಲಿ ಬೇಲೂರು ರೆಡ್‌ಕ್ರಾಸ್ ಘಟಕ ಪ್ರಥಮ ಸ್ಥಾನದಲ್ಲಿದೆ. ರಕ್ತದಾನ ಹಾಗೂ ಆರೋಗ್ಯ ಅರಿವು ಕಾರ್ಯಕ್ರಮದಲ್ಲಿಯೂ ಮುಂಚೂಣಿಯಲ್ಲಿದೆ ಎಂದರು.

ಪ್ರಗತಿಪರ ರೈತ ಎಸ್.ಎನ್. ಯೋಗೀಶಪ್ಪ ಮಾತನಾಡಿ, ಕೀಟ, ಕ್ರಿಮಿ ಕಳೆನಾಶಕ ಬಳಕೆಯಿಂದ ಆಹಾರ ವಿಷಕಾರಿಯಾಗುತ್ತಿದೆ. ರಾಸಾಯನಿಕ ಬಳಸದೆ ತರಕಾರಿ, ಗೆಡ್ಡೆ-ಗೆಣಸುಗಳನ್ನು ಮನೆಯಲ್ಲಿಯೇ ಕುಂಡದಲ್ಲಿ ಬೆಳೆದು ಆರೋಗ್ಯಕರ ಸೇವಿಸಬಹುದೆಂದು ಸಲಹೆ ನೀಡಿದರು.

ಭಾರತೀಯ ರೆಡ್‌ಕ್ರಾಸ್ ತಾಲ್ಲೂಕು ಘಟಕ ಸಭಾಪತಿ ವೈ.ಎಸ್.ಸಿದ್ದೇಗೌಡ ಮಾತನಾಡಿ, ರೆಡ್‌ಕ್ರಾಸ್ ಯುದ್ಧ, ಪ್ರಕೃತಿ ವಿಕೋಪ, ಸುನಾಮಿ, ಭೂಕಂಪದಂತಹ ತುರ್ತು ಸಂದರ್ಭದಲ್ಲಿ ದೇಶದ ಸೇವೆ ಮಾಡುತ್ತದೆ. ರೆಡ್‌ಕ್ರಾಸ್‌ನಲ್ಲಿ ಮಾನವೀಯ ಮೌಲ್ಯ ಇದೆ. ರೆಡ್‌ಕ್ರಾಸ್ ಎಂಬುದು ತುರ್ತು ಸಂದರ್ಭದಲ್ಲಿ ಸಮಸ್ಯೆ ಪರಿಹಾರಕ್ಕೆ ಕೈ ಜೋಡಿಸುತ್ತದೆ ಎಂದು ಕಾರ್ಯವೈಖರಿಯನ್ನು ವಿವರಿಸಿದರು.

ನಿವೃತ್ತ ಪ್ರಾಂಶುಪಾಲ ಜಿ.ಡಿ. ನಾರಾಯಣ್, ಪ್ರಾಂಶುಪಾಲ ಡಾ. ಶ್ರೀನಿವಾಸ್, ಪತ್ರಕರ್ತ ಬಿ.ಆರ್. ಉದಯ್‌ಕುಮಾರ್, ಎಚ್.ಎಸ್. ಅನಿಲ್‌ಕುಮಾರ್, ಹಿರಿಯ ಶ್ರೇಣಿ ಗ್ರಂಥಪಾಲಕ ಡಾ.ಮನೋಜ್ ಕುಮಾರ್, ಸಹಾಯಕ ಪ್ರಾಧ್ಯಾಪಕರಾದ ಶಿವರಾಜ್ ಕುಮಾರ್, ಬಿ.ಇ, ಡಾ.ತಿಮ್ಮಾನಾಯ್ಕ್ ಕೆ.ಬಿ., ಶಂಕರಪ್ಪ ಜಿ.ಕೆ., ರಾಘವೇಂದ್ರ ಕೆ.ಎಸ್., ಚಂದ್ರಶೇಖರ್ ಸಿಂಗ್, ಡಿಂಪಲ್, ಪದ್ಮಪ್ರಿಯ, ಉಮಾ, ಸ್ಪಂದನ, ಸೈಯದ್ ತಾಯೀರ್, ಭಾರತೀಯ ರೆಡ್‌ಕ್ರಾಸ್ ತಾಲ್ಲೂಕು ಸಂಚಾಲಕ ಧನಂಜಯ ಹಾಜರಿದ್ದರು.

ರಾಜ್ಯದಲ್ಲಿ 2028ಕ್ಕೆ ಕಾಂಗ್ರೆಸ್ ನಿರ್ನಾಮ

ಬಾಗಲಕೋಟೆ: ರಾಜ್ಯದಲ್ಲಿ ಕಾಂಗ್ರೆಸ್ ಅನ್ನು ಬೇರುಸಮೇತ ಕಿತ್ತು ಹಾಕಲು ಜನ ತೀರ್ಮಾನಿಸಿದ್ದಾರೆ. 2028 ರಲ್ಲಿ ಕಾಂಗ್ರೆಸ್ ನಿರ್ನಾಮವಾಗಲಿದೆ. ಬಾಗಲಕೋಟೆ ಮತ್ತು ದಾವಣಗೆರೆಯಲ್ಲಿ ಬಿಜೆಪಿ ಅಭ್ಯರ್ಥಿಗಳೇ ಗೆಲುವು ಸಾಧಿಸಲಿದ್ದಾರೆ ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ಹೇಳಿದ್ದಾರೆ.

ಮಾಧ್ಯಮಗಳೊಂದಿಗೆ ಬುಧವಾರ ಮಾತನಾಡಿದ ಅವರು, ಎರಡೂ ಉಪ ಚುನಾವಣೆಯಲ್ಲಿ ಬಿಜೆಪಿ ಗೆಲ್ಲಿಸಲು ಜನರೇ ತೀರ್ಮಾನ ಮಾಡಿದ್ದಾರೆ. ಇಂತಹ ಅವಕಾಶವನ್ನು ಜನರು ತಪ್ಪಿಸಿಕೊಳ್ಳಬಾರದು. ಒಂದು ವೇಳೆ ಕಾಂಗ್ರೆಸ್ ಗೆದ್ದರೆ ಮತ್ತೆ ಇವರ ನಾಟಕ ಎರಡು ವರ್ಷ ಮುಂದುವರಿಯುತ್ತದೆ. ಡಿನ್ನರ್ ಮತ್ತು ಲಂಚ್ ನಲ್ಲೇ ಸರ್ಕಾರ ಕಳೆಯುತ್ತಾರೆ ಎಂದರು.

ಜಾತ್ರೆಗಳೆಂದರೆ ಎಲ್ಲರೂ ಒಂದೆಡೆ ಸೇರಿ ಸಾಮರಸ್ಯ ಮೆರೆಯುವುದು

• ಪ್ರಜೋದಯ ವರದಿ

ಅರಸೀಕೆರೆ: ಜಾತ್ರೆಗಳು ಎಂದರೆ ಸ್ಥಳೀಯರು ಹಾಗೂ ಸುತ್ತಮುತ್ತಲಿನ ಜನರು ಒಂದೆಡೆ ಸೇರಿ ಸಾಮರಸ್ಯ ಮೆರೆಯುವುದಾಗಿದೆ ಎಂದು ಶಾಸಕ ಕೆ.ಎಂ.ಶಿವಲಿಂಗೇಗೌಡ ತಿಳಿಸಿದರು.

ತಾಲ್ಲೂಕಿನ ಬಾಣಾವರದ ಸುಪ್ರಸಿದ್ಧ ಕೋಟೆ ಆಂಜನೇಯ ಸ್ವಾಮಿಯ ಅದ್ದೂರಿ ಜಾತ್ರಾ ಮಹೋತ್ಸವ ನಡೆಯಿತು. ಉತ್ಸವದಲ್ಲಿ ಶಾಸಕ ಕೆ. ಎಂ.ಶಿವಲಿಂಗೇಗೌಡ ಭಾಗಿಯಾಗಿ ಮಾತನಾಡಿ, ಬಾಣಾವರದಲ್ಲಿ ಮಣೆವು ಆಚರಣೆ ಹಿಂದಿನಿಂದಲೂ ನಡೆದುಕೊಂಡು ಬಂದಿದ್ದು, ಇದರಲ್ಲಿ ಸಾಂಕೇತಿಕವಾಗಿ ನಾನೂ ಭಾಗಿಯಾಗಿದ್ದು ತುಂಬಾ ಖುಷಿ ನೀಡಿದೆ ಎಂದರು.

ಗ್ರಾಮೀಣ ಜನರು ಈ ರೀತಿಯ ಆಚರಣೆಗಳಲ್ಲಿ ಭಾಗಿಯಾಗುವ ಮೂಲಕ ಹಳ್ಳಿಗಳಲ್ಲಿ ಶಾಂತಿ-

ಬಾಣಾವರದಲ್ಲಿ ಆಂಜನೇಯ ಸ್ವಾಮಿ ಅದ್ದೂರಿ ಜಾತ್ರಾ ಮಹೋತ್ಸವ

ಸೌಹಾರ್ದ ವಾತಾವರಣ ಕಾಯ್ದುಕೊಳ್ಳಬೇಕು ಎಂದು ಸಲಹೆ ನೀಡಿದರು.

ವಿಶೇಷ ಎಂದರೆ ಈ ಜಾತ್ರಾ ಮಹೋತ್ಸವದಂದು ಒಂದು ರೀತಿಯ ಸಂಪ್ರದಾಯವಾಗಿ ಆಚರಣೆಗೊಂಡು ಬಂದಿರುವ ಮಣೆವು ಆಚರಣೆಯಲ್ಲಿ ಸ್ವತಃ ಶಾಸಕರು ಭಾಗಿಯಾಗಿ ನೆರೆದಿದ್ದವರ ಗಮನ ಸೆಳೆದರು. ಮಣೆವು (ಅಥವಾ ಮಣೆವು ಕುಣಿತ/ಉತ್ಸವ) ಕರ್ನಾಟಕದ, ವಿಶೇಷವಾಗಿ ಚಿತ್ರದುರ್ಗ ಮತ್ತು ಶಿರಾ ಭಾಗದ ಕಾಡುಗೊಲ್ಲರ ಸಾಂಪ್ರದಾಯಿಕ ಮತ್ತು ಧಾರ್ಮಿಕ ಆಚರಣೆಯಾಗಿದೆ.

ಯುಗಾದಿ ಹಬ್ಬದ ಸಂದರ್ಭದಲ್ಲಿ ದೇವರಿಗೆ ಪೂಜೆ ಸಲ್ಲಿಸಿ, ಕಂಬಳಿ ಹೊದ್ದು, ಕೈಯಲ್ಲಿ ಬಿದಿರಿನ ಕೋಲು ಹಿಡಿದು, ಹಾಡುಗಳನ್ನು ಹಾಡುತ್ತಾ ಸಂಭ್ರಮದಿಂದ ಹೆಜ್ಜೆ ಹಾಕುವ ಜಾನಪದ ಕಲೆಯಿದಾಗಿದೆ.

ಮಣೆವು ಆಚರಣೆ ವಿಶೇಷತೆ-ಧಾರ್ಮಿಕತೆ: ಈ ಆಚರಣೆಯು ಹೆಚ್ಚಾಗಿ ಕಾಡುಗೊಲ್ಲರ ಸಮುದಾಯದ ದೇವತಾ ಆರಾಧನೆಯೊಂದಿಗೆ (ಜೂಂಜಪ್ಪ/ಏಳೇಳು ಮಲ್ಲಪ್ಪ) ಸಂಬಂಧ ಹೊಂದಿದೆ.ಮಣೆವು ಕುಣಿತದಲ್ಲಿ ಭಾಗವಹಿಸುವವರು ಹೆಗಲ ಮೇಲೆ ಕರಿಯ ಕಂಬಳಿ (ಕುರಿ ಉಣ್ಣೆಯ ಕಂಬಳಿ) ಹಾಕಿ, ತಲೆಗೆ ಟವೆಲ್ ಸುತ್ತಿ, ಕೈಯಲ್ಲಿ ಬಿದಿರಿನ ಕೋಲು ಹಿಡಿದಿರುತ್ತಾರೆ.

ಬಿಳಿವಸ್ತ್ರ, ಅಥವಾ ಕರಿ ಕಂಬಳಿಯ ಮೇಲೆ ಹಲಸಿನ ಹಣ್ಣಿಗೆ ಜೇನು ತುಪ್ಪ ಬೆರೆಸಿ ಇಬ್ಬರು ಇದ್ದರೆ ಮೂರು ಹಣ್ಣಿನ ಗುಡ್ಡೆ ಹಾಕಲಾಗುತ್ತದೆ. ನಾಲ್ವರು ಇದ್ದರೆ ಆರು ಇಲ್ಲವೇ ಒಂಭತ್ತು ಹಣ್ಣಿನ ಗುಡ್ಡೆ ಹಾಕಲಾಗುತ್ತಿದೆ. ಇದನ್ನು ತೆಗೆದುಕೊಳ್ಳಲು ಸುತ್ತಲೂ ಕುಣಿದು ಅಂತಿಮವಾಗಿ ಹಣ್ಣಿನ ಗುಡ್ಡೆಗೆ ಕೈ ಹಾಕಿ ಪಡೆದು ತಿನ್ನಲಾಗುತ್ತದೆ.

ಆದರೆ ಶಾಸಕರು ಮತ್ತು ಇತರರು ಕೇವಲ ಬಿಳಿ ಟವಲ್‌ನ್ನು ಕೈಯಲ್ಲಿ ಹಿಡಿದು ಕರಿ ಕಂಬಳಿ ಮೇಲೆ ಹಾಕಿದ್ದ ಹಲಸಿನ ಹಣ್ಣಿನ ಗುಡ್ಡೆಯ ಸುತ್ತಲೂ ತಾಳಕ್ಕೆ ತಕ್ಕಂತೆ ಹೆಜ್ಜೆ ಹಾಕುವ ಮೂಲಕ ತಾವೂ ಸಂಭ್ರಮಿಸಿದರು. ನೆರೆದಿದ್ದವರನ್ನೂ ಸಂತಸಗೊಳಿಸಿದರು.

ಎಲ್‌ಕೆಜಿ, ಯುಕೆಜಿ ತರಗತಿಗಳಿಗೆ ಅರ್ಜಿ ಆಹ್ವಾನ

ಹಾಸನ: 2026-27ನೇ ಸಾಲಿಗೆ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕರ್ನಾಟಕ ಮೌಲಾನ ಆಜಾದ್ ಪಬ್ಲಿಕ್ ಶಾಲೆಗಳಿಗೆ L.K.G ಮತ್ತು U.K.G ತರಗತಿಗಳಿಗೆ ಅಲ್ಪಸಂಖ್ಯಾತರ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಸಿಖ್, ಬೌದ್ಧ ಮತ್ತು ಪಾರ್ಸಿ ಸಮುದಾಯದ 75% ಹಾಗೂ ಇತರೆ ಓಬಿಸಿ 25% ವಿದ್ಯಾರ್ಥಿಗಳಿಗೆ ಅಲ್ಪಸಂಖ್ಯಾತರ ನಿರ್ದೇಶನಾಲಯದ ಅಧಿಕೃತ ವೆಬ್‌ಸೈಟ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ ವಿದ್ಯಾರ್ಥಿಗಳ ಪೋಷಕರು ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದು.

ವಿದ್ಯಾರ್ಥಿಯ ಜನನ ಪ್ರಮಾಣ ಪತ್ರ, ವಿದ್ಯಾರ್ಥಿಯ ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಆಧಾರ್ ಪ್ರತಿ/ ವಾಸಸ್ಥಳ ಪ್ರಮಾಣ ಪತ್ರ.

ಕರ್ನಾಟಕ ಮೌಲಾನ ಆಜಾದ್ ಪಬ್ಲಿಕ್ ಶಾಲೆ, ಅರಳೆಪೇಟೆ, ಹಾಸನ ತಾಲ್ಲೂಕು, ಕರ್ನಾಟಕ ಮೌಲಾನ ಆಜಾದ್ ಪಬ್ಲಿಕ್ ಶಾಲೆ, ಸಾಧನ ಚಿತ್ರಮಂದಿರ ಮುಂಭಾಗ, ಬಿ.ಹೆಚ್. ರಸ್ತೆ ಅರಸೀಕೆರೆ, ಕರ್ನಾಟಕ ಮೌಲಾನ ಆಜಾದ್ ಪಬ್ಲಿಕ್ ಶಾಲೆ, ಬಂಟೇನಹಳ್ಳಿ, ಬೇಲೂರು ತಾಲ್ಲೂಕು.

ಅರ್ಜಿ ಸಲ್ಲಿಸಲು ಮೇ 8 ಕೊನೆಯ ದಿನವಾಗಿದ್ದು, ವೆಬ್‌ಸೈಟ್ https://erp.dom.karnataka.gov.in/lkg ಮೂಲಕ ಅರ್ಜಿ ಸಲ್ಲಿಸಬಹುದು ಅಥವಾ ಜಿಲ್ಲಾ ಅಲ್ಪಸಂಖ್ಯಾತರ ಕಛೇರಿ, ಕರ್ನಾಟಕ ಮೌಲಾನ ಆಜಾದ್ ಪಬ್ಲಿಕ್ ಶಾಲೆಗಳು ಅಥವಾ ತಾಲ್ಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರಗಳಲ್ಲಿ ಉಚಿತವಾಗಿ ಸಲ್ಲಿಸಬಹುದು.

ಮಾಹಿತಿಗಾಗಿ 08172- 268373/ 08172-267373 ಅಥವಾ ಅಲ್ಪಸಂಖ್ಯಾತರ ತಾಲ್ಲೂಕು ಮಾಹಿತಿ ಕೇಂದ್ರಗಳನ್ನು ಸಂಪರ್ಕಿಸಬಹುದಾಗಿದೆ.

ದಿಂಡಗೂರು ಕೃಷಿ ಪತ್ತಿಗೆ ಆಯ್ಕೆ

**ಚನ್ನರಾಯಪಟ್ಟಣ: ದಿಂಡಗೂರು ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಶೆಟ್ಟಿಹಳ್ಳಿ ರಾಮಚಂದ್ರ ಅವಿರೋಧ ಆಯ್ಕೆಯಾಗಿದ್ದಾರೆ.
ದಿಂಡಗೂರು ಚೇತನ್ ಅವರು ರಾಜೀನಾಮೆ ನೀಡಿದ್ದ ಸ್ಥಾನಕ್ಕೆ ಚುನಾವಣೆ ನಡೆದಿದ್ದು ಅವಿರೋಧವಾಗಿ ರಾಮಚಂದ್ರ ಅವರನ್ನು ಆಯ್ಕೆ ಮಾಡಲಾಯಿತು.
ರಾಮಚಂದ್ರು ಅವರನ್ನು ಅಭಿನಂದಿಸಿ ಮಾತನಾಡಿದ ಶಾಸಕ ಸಿ.ಎನ್. ಬಾಲಕೃಷ್ಣ ಅವರು, ಇದುವರೆಗೆ ದಿಂಡಗೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ರಾಮಚಂದ್ರು ಹೆಚ್ಚಿನ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಅವರ ಸೇವೆಯನ್ನ ಗುರುತಿಸಿ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಹೆಚ್ಚಿನ ಕೆಲಸ ಮಾಡಿಕೊಂಡು ಹೋಗುವಂತೆ ತಿಳಿಸಿದರು.
ಶೆಟ್ಟಿಹಳ್ಳಿ ಗ್ರಾಮಸ್ಥರು ಹಾಗೂ ದಿಂಡಗೂರು ಪಂಚಾಯಿತಿ ವ್ಯಾಪ್ತಿಯ ಕಾರ್ಯಕರ್ತರು ಮತ್ತು ಮುಖಂಡರು ಭಾಗವಹಿಸಿದ್ದರು.**

ವಿದ್ಯಾರ್ಥಿಗಳು ಮನಸ್ಸಿಟ್ಟು ಪಾಠ ಆಲಿಸಬೇಕು: ಎಂ.ಸಿ.ಇ. ಕಾಲೇಜು ಅಧ್ಯಕ್ಷ ಆರ್.ಟಿ.ದ್ಯಾವೇಗೌಡ

ಪ್ರಾಯೋಗಿಕ ಜ್ಞಾನ - ಉದಯೋನ್ಮುಖ ಕೌಶಲ್ಯ ಕಲಿಕೆ ಮುಖ್ಯ

• ಪ್ರಜೋದಯ ವರದಿ

ಹಾಸನ: ವಿದ್ಯಾರ್ಥಿಗಳು ತಮ್ಮ ವ್ಯಾಸಂಗದ ಅವಧಿಯಲ್ಲಿ ಪಾಠವನ್ನು ಕೇಳುವಲ್ಲಿ ಮನಸ್ಸು ಇಟ್ಟು ಕಲಿಯಬೇಕು. ಅದರ ಜೊತೆಗೆ ಪ್ರಾಯೋಗಿಕ ಜ್ಞಾನ ಮತ್ತು ಉದಯೋನ್ಮುಖ ಕೌಶಲ್ಯಗಳನ್ನು ಕಲಿಯುವ ಅಂಗವಾಗಿ ಇಂತ ತರಬೇತಿ ಶಿಬಿರಗಳು ಪ್ರಯೋಜನಕಾರಿ ಅಂಶಗಳನ್ನು ತಿಳಿಸುವುದರಿಂದ ಬಹಳಷ್ಟು ಪ್ರಯೋಜನ ವಿದ್ಯಾರ್ಥಿಗಳಿಗೆ ಸಿಗಲಿದೆ ಎಂದು ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಆರ್.ಟಿ.ದ್ಯಾವೇಗೌಡ ತಿಳಿಸಿದರು.

ನಗರದ ಮಲೆನಾಡು ಕಾಲೇಜು ಇಂಜಿನಿಯರಿಂಗ್ ಎಲೆಕ್ಟ್ರಿಕಲ್ ಅಂಡ್ ಎಲೆಕ್ಟ್ರಾನಿಕ್ ವಿಭಾಗದ ವತಿಯಿಂದ ಸ್ಕಿಲ್ ಮತ್ತು ಕನ್ಸಲ್ಟನ್ಸಿ ಸೆಂಟರ್ ಸಯೋಗದೊಂದಿಗೆ 5 ದಿನಗಳ ಕಾಲ ಏರ್ಪಡಿಸಲಾಗಿರುವ ಪ್ರಾಕ್ಟಿಕಲ್ ಅಂಡ್ ಟ್ರೈನಿಂಗ್ ಆನ್ ಎಲೆಕ್ಟ್ರಿಕಲ್ ಸ್ವಿಚ್ ಗಿಯರ್ ವ್ಯವಸ್ಥೆಗಳು, ಪ್ರೊಟೆಕ್ಷನ್ ತಂತ್ರಗಳು ಹಾಗೂ ಅಪ್ಲಿಕೇಶನ್, ವಾಸ್ತವಿಕ ಜೀವನದಲ್ಲಿ ಬಳಸುವ ವಿಧಾನಗಳ ಬಗ್ಗೆ ಮಾಹಿತಿ ತಿಳಿಸುವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಎಲೆಕ್ಟ್ರಿಕಲ್ ಅಂಡ್ ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ ವಿಭಾಗ ಅತಿ ಪ್ರಮುಖವಾದ ಕ್ಷೇತ್ರವಾಗಿದೆ. ಇದು ಉದ್ಯೋಗದ ಜೊತೆಗೆ ವೃತ್ತಿಪರ ಕೋರ್ಸ್ ಆಗಿದೆ. ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ ಮಾಡಿದವರು ನಿರುದ್ಯೋಗಿಗಳಾಗದೆ ಸ್ವಯಂ ಉದ್ಯೋಗದಲ್ಲಿ ಸಹ ತೊಡಗಿಸಿಕೊಳ್ಳಬಹುದು ಎಂದು ಅಭಿಪ್ರಾಯಪಟ್ಟರು.

ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಚೌಡಳ್ಳಿ ಜಗದೀಶ್ ಮಾತನಾಡಿ, ವಿದ್ಯಾರ್ಥಿಗಳ ಅನುಕೂಲತೆಗಾಗಿ ಹಲವಾರು ತರಬೇತಿಗಳನ್ನು ನೀಡುವ ಉದ್ದೇಶವನ್ನು ಹೊಂದಿದ್ದು ನುರಿತ

ವಿಷಯವಾರು ತಜ್ಞರು ಹಲವಾರು ವಿಷಯಗಳ ಬಗ್ಗೆ ಉತ್ತಮ ಮಾಹಿತಿಯನ್ನು ಇಂತಹ ತರಬೇತಿ ಶಿಬಿರದಿಂದ ನೀಡಲಿದ್ದಾರೆ. ಇದು ನಮ್ಮ ವಿದ್ಯಾರ್ಥಿಗಳಿಗೆ ಸಾಕಷ್ಟು ಪ್ರಯೋಜನವಾಗಲಿದೆ. ಅವರ ಕಲಿಕೆಗೆ ಸಾಕಷ್ಟು ಪ್ರಯೋಜನವಾಗಲಿದೆ, ಇದರ ಪ್ರಯೋಜನವನ್ನು ವಿದ್ಯಾರ್ಥಿಗಳು ಪಡೆಯಬೇಕು. ಉದ್ಯೋಗ ಮಾಡುವ ಜೊತೆಗೆ ಸ್ವಂತ ಉದ್ದಿಮೆಗಳು ಸಹ ಆಗಬಹುದು, ಇಂಥ ತರಬೇತಿ ಶಿಬಿರವನ್ನು ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ವಿಭಾಗವು ಏರ್ಪಡಿಸಿ ವಿದ್ಯಾರ್ಥಿಗಳಿಗೆ ಹೆಚ್ಚಿನ ಅಧ್ಯಯನ ಮತ್ತು ಕಲಿಕೆಗೆ ಸಹಕಾರಿಯಾಗಿದೆ ಎಂದು ತಿಳಿಸಿದರು

ತರಬೇತಿ ವಿಭಾಗದ ನಿರ್ದೇಶಕ ಡಿ.ವಿ.ಶಿವಾನಂದ್ ಮಾತನಾಡಿ, ವಿದ್ಯಾರ್ಥಿಗಳಿಗೆ ಅಧ್ಯಯನದ ಜೊತೆಗೆ ಕೆಲಸದ ಅನುಭವವು ಇರಬೇಕಾದದ್ದು ಅವಶ್ಯಕತೆ ಇದೆ. ಪಾಠ ಕೇಳುವುದು ಮತ್ತು ಪ್ರಾಕ್ಟಿಕಲ್ ಕೆಲಸಗಳಿಗೆ ನಿರ್ವಹಿಸುವುದು ಅತ್ಯಂತ ಉಪಯೋಗಕಾರಿಯಾಗಲಿದೆ. ಎಲೆಕ್ಟ್ರಿಕಲ್ ಕಂಟ್ರೋಲ್ ಪ್ಯಾನಲ್‌ಗಳ ತಯಾರಿಕೆ, ಡಿಸೈನ್ ಎರೆಕ್ಷನ್ ಮತ್ತು ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಕ್ಷೇತ್ರದಲ್ಲಿ ಹಲವಾರು ವಿವಿಧ ತರಬೇತಿಯ ನೀಡುವ ಮೂಲಕ ವಿದ್ಯಾರ್ಥಿಗಳಿಗೆ ಕಲಿಸುವ ಕಾರ್ಯವನ್ನು ಮಾಡಲಾಗುತ್ತಿದೆ. ಹೆಚ್ಚಾಗಿ ಸ್ವಯಂ ಉದ್ಯೋಗದ ಅನುಭವವು ಅವರಿಗೆ ಸಿಗಲಿದೆ, ಅವರ ವೃತ್ತಿ ಜೀವನಕ್ಕೆ ಹೆಚ್ಚಿನ ಅನುಕೂಲತೆಗಳು ಸಿಗಲಿವೇ. ಅಧ್ಯಯನ ಮತ್ತು ತರಬೇತಿಯು ಉತ್ತಮ ಮಾರ್ಗದರ್ಶನದಿಂದ ವಿದ್ಯಾರ್ಥಿಯ ಜೀವನವನ್ನು ಬದಲಾಯಿಸಲಿದೆ ಎಂದರು.

ಪ್ರಾಂಶುಪಾಲ ಡಾ.ಎಚ್. ಜೆ. ಅಮರೇಂದ್ರ ಅವರು ಮಾತನಾಡಿ, ನಮ್ಮ ಕಾಲೇಜಿನ ಎಲ್ಲಾ ವಿಭಾಗಗಳು ಸಹ ವಿದ್ಯಾರ್ಥಿಗಳಿಗೆ ಹಲವಾರು ತರಬೇತಿಗಳನ್ನು ನೀಡುವ ಮೂಲಕ ಅವರಿಗೆ ಹೆಚ್ಚಿನ ಜ್ಞಾನ ಸಿಗುವಂತೆ ಮತ್ತು ಮನೋಸ್ಥೈರ್ಯ ಹೆಚ್ಚುವಂತೆ ಹಲವಾರು ತರಬೇತಿಗಳನ್ನು ಏರ್ಪಡಿಸಿ ಜ್ಞಾನ ಅಭಿವೃದ್ಧಿಗೆ ಸಹಕಾರಿ ಮಾಡುತ್ತಿದ್ದೇವೆ ಎಂದರು.

ಡಾ.ರಾಜಣ್ಣ, ಎಚ್.ಡಿ. ಪಾರ್ಶನಾಥ್, ಕಾಲೇಜಿನ ಸ್ಕಿಲ್ ಮತ್ತು ಕನ್ಸಲ್ಟೆನ್ಸಿ ಸೆಂಟರ್ ವಿಭಾಗದ ಮುಖ್ಯಸ್ಥ ಡಾ.ಎ.ಜೆ.ಕೃಷ್ಣಯ್ಯ, ತರಬೇತಿ ನಿರ್ದೇಶಕರಾದ ಬಸವೇಶ್ ಶೆಟ್ಟಿ ಎಸ್., ರಾಜೇಶ್ವರಿ, ಡಾ. ರಾಘವೇಂದ್ರ ಪ್ರಸಾದ್ ದೇಶಪಾಂಡೆ, ಡಾ.ಆರ್.ಕೆ.ಧವಳ, ಎಸ್.ಕೆ. ಯೋಗಿತಾ, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಅಧಿಕಾರಿ ಡಾ.ಇಂದ್ರ ಬಹದ್ದೂರ್, ಸಿವಿಲ್ ವಿಭಾಗದ ಮುಖ್ಯಸ್ಥೆ ಸುಮನಾ ಜಯಂತ್, ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಸಂಪುಟ ಪುನರ್ ರಚನೆ, ನಾಯಕತ್ವ ಬದಲಾವಣೆ | ನಾಲ್ವರ ನಿರ್ಧಾರವೇ ಅಂತಿಮ

• ಪ್ರಜೋದಯ ವರದಿ

ಬೆಂಗಳೂರು: ನಾಯಕತ್ವ ಬದಲಾವಣೆ, ಸಂಪುಟ ಪುನರ್‌ರಚನೆ ಸೇರಿ ಏನೇ ರಾಜಕೀಯ ಬದಲಾವಣೆಗಳಿದ್ದರೂ ಕಾಂಗ್ರೆಸ್‌ನಲ್ಲಿ ನಾಲ್ವರ ನಿರ್ಧಾರವೇ ಅಂತಿಮ ಎಂದು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರು ಹೇಳಿದರು.

ಸುದ್ದಿಗಾರರೊಂದಿಗೆ ಬುಧವಾರ ಮಾತನಾಡಿದ ಅವರು, ನಾಯಕತ್ವ ಬದಲಾವಣೆ ವಿಚಾರವಾಗಿ ನಾನು ಅಥವಾ ಬೇರೆ ಯಾರೇ ಆಗಲಿ ಏನೇ ಹೇಳಿಕೆ ನೀಡಿದರೂ ಅದು ಅಪ್ರಸ್ತುತ. ಅದಕ್ಕೆ ಯಾವುದೇ ಮಹತ್ವ ಇರುವುದಿಲ್ಲ ಎಂದರು.

ಈ ವಿಚಾರವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ರಾಹುಲ್ ಗಾಂಧಿ ನಿರ್ಧರಿಸುತ್ತಾರೆ. ಅವರು ಯಾವ ನಿರ್ಧಾರ ಕೈಗೊಳ್ಳುತ್ತಾರೊ ಅದೇ ಅಂತಿಮ ಎಂದರು.

ಆಟೋ ಚಾಲಕರು, ಸಾಮಾನ್ಯ ಜನರು, ಸಣ್ಣಪುಟ್ಟ ಕಾರ್ಖಾನೆಗಳು ಎಲ್‌ಪಿಜಿ ಸಿಗದೆ ಆತಂಕದಲ್ಲಿದ್ದಾರೆಂದರೆ ಅದಕ್ಕೆ ಕೇಂದ್ರ ಸರ್ಕಾರ ಕಾರಣ. ಪೆಟ್ರೋಲಿಯಂ ಉತ್ಪನ್ನಗಳ ಉತ್ಪಾದನೆ ಹಾಗೂ ಪೂರೈಕೆ ಕೇಂದ್ರ ಸರ್ಕಾರದ ನಿಯಂತ್ರಣದಲ್ಲಿದೆ. ಬಿಜೆಪಿ ನಾಯಕರು ಸಂಸತ್ತಿನಲ್ಲಿ ಪೆಟ್ರೋಲ್ ಉತ್ಪನ್ನಗಳ ದಾಸ್ತಾನು 75, 100 ದಿನಗಳಿಗೆ ಸಾಕಾಗುವಷ್ಟು ಇದೆಯೆಂದು ಹೇಳಿಕೆ ಕೊಟ್ಟಿದ್ದಾರೆ. ಆದರೆ, ಕೇಂದ್ರ ಪೆಟ್ರೋಲಿಯಂ ಸಚಿವ ಹರ್ದೀಪ್ ಸಿಂಗ್‌ಪುರಿ ಓಡಿ ಹೋಗಿದ್ದಾರೆಂದು ತರಾಟೆಗೆ ತೆಗೆದುಕೊಂಡರು.

ಎಲ್‌ಪಿಜಿ ಪೂರೈಕೆಯಲ್ಲಿ ಯಾವುದೇ ಸಮಸ್ಯೆ ಇಲ್ಲ, ಎಲ್ಲವೂ ಸರಿಯಿದೆ ಎಂದಾದರೆ ಏಕಾಏಕಿ ಪ್ರಧಾನಿ ನರೇಂದ್ರ ಮೋದಿ ಏಕೆ ಕಾಯ್ದೆಗಳನ್ನು ಜಾರಿಗೆ ತಂದಿದ್ದಾರೆ? ಕೋವಿಡ್ ಮಾದರಿಯಲ್ಲಿ ಯುದ್ಧ ಪರಿಸ್ಥಿತಿಯನ್ನು ನಿರ್ವಹಣೆ ಮಾಡೋಣವೆಂದು ಏಕೆ ಹೇಳುತ್ತಿದ್ದಾರೆ ಎಂದು ಪ್ರಶ್ನಿಸಿದರು.

ಗ್ರಾಮೀಣ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ ನಿವಾರಿಸಲು ಕ್ರಮ

ವೈದ್ಯಾಧಿಕಾರಿಗಳ ವರ್ಗಾವಣೆ ನಿಯಮ ತಿದ್ದುಪಡಿಗೆ ಮುಂದಾದ ರಾಜ್ಯ ಸರ್ಕಾರ

• ಪ್ರಜೋದಯ ವರದಿ

ಬೆಂಗಳೂರು: ಗ್ರಾಮೀಣ ಪ್ರದೇಶಗಳ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ ನಿವಾರಿಸಲು ಹಾಗೂ ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ವೈದ್ಯಾಧಿಕಾರಿಗಳನ್ನು ನಿಯೋಜಿಸುವ ಉದ್ದೇಶದಿಂದ ವರ್ಗಾವಣೆ ನಿಯಮಗಳಲ್ಲಿ ತಿದ್ದುಪಡಿ ತರಲು ಸರ್ಕಾರ ಮುಂದಾಗಿದೆ. ಈ ಬಗ್ಗೆ ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿದೆ.

ತಿದ್ದುಪಡಿಗಾಗಿ ಸಿದ್ಧಪಡಿಸಲಾಗಿರುವ ಪ್ರಸ್ತಾವಗಳನ್ನು ಗೆಜೆಟ್‌ನಲ್ಲಿ ಪ್ರಕಟಿಸಲಾಗಿದ್ದು, ಸಾರ್ವಜನಿಕರಿಂದ ಆಕ್ಷೇಪಣೆ, ಸಲಹೆಗಳನ್ನು ಆಹ್ವಾನಿಸಲಾಗಿದೆ. ಈ ತಿದ್ದುಪಡಿ ನಿಯಮಗಳು 2026ನೇ ಸಾಲಿನ ಸಾಮಾನ್ಯ ವರ್ಗಾವಣೆ ಪ್ರಕ್ರಿಯೆಗೆ ಅನ್ವಯ ಆಗಲಿದೆ. ಈ ತಿದ್ದುಪಡಿ ನಿಯಮದಲ್ಲಿ ಶೇ.50ಕ್ಕಿಂತ ಹೆಚ್ಚು ಹುದ್ದೆಗಳು ಖಾಲಿ ಇರುವ ಆಸ್ಪತ್ರೆಗಳಲ್ಲಿ ತಕ್ಷಣವೇ ವೈದ್ಯರನ್ನು ನಿಯೋಜಿಸಬೇಕೆಂದು ಸ್ಪಷ್ಟಪಡಿಸಲಾಗಿದೆ. ಜೊತೆಗೆ, ತುರ್ತು ಸೇವೆಗಳನ್ನು ನಿರ್ವಹಿಸಲು ಅಗತ್ಯವಿರುವ ಹುದ್ದೆಗಳನ್ನು ಅಧಿಸೂಚನೆಯ ಮೂಲಕ ಸರ್ಕಾರ ಭರ್ತಿ ಮಾಡಬೇಕೆಂದು ತಿಳಿಸಲಾಗಿದೆ.

ವಿಶೇಷ ವರ್ಗಗಳಿಗೆ ವಿನಾಯಿತಿ ನೀಡುವ ಪ್ರಸ್ತಾವವೂ ಅಧಿಸೂಚನೆಯಲ್ಲಿದೆ. ಅಂಗವಿಕಲರು, ಕುಟುಂಬದ ತುರ್ತು ಸಂಕಷ್ಟ ಎದುರಿಸುತ್ತಿರುವವರು, ಸರ್ಕಾರಿ ನೌಕರರ ಸಂಘದ ಪ್ರಮುಖ ಹುದ್ದೆಗಳಲ್ಲಿ ಇರುವವರಿಗೆ ನಿರ್ದಿಷ್ಟ ಅವಧಿಗೆ ವರ್ಗಾವಣೆ ವಿನಾಯಿತಿ ನೀಡಲಾಗುವುದು. ಪತಿ-ಪತ್ನಿ ಬೇರೆ ಬೇರೆ ಸ್ಥಳಗಳಲ್ಲಿ ಕೆಲಸ ಮಾಡುವುದರಿಂದ ಉಂಟಾಗುವ ಸಾಮಾಜಿಕ ಸಮಸ್ಯೆಗಳನ್ನು ಕಡಿಮೆ ಮಾಡಲು, ವೈದ್ಯಾಧಿಕಾರಿಗಳಿಗೆ ತಮ್ಮ ಪತ್ನಿ ಅಥವಾ ಪತಿಯ ಕೆಲಸದ ಸ್ಥಳದ ಸಮೀಪಕ್ಕೆ ವರ್ಗಾವಣೆಯ ಸೌಲಭ್ಯ ಕಲ್ಪಿಸಲಾಗಿದೆ.

ಆರೋಗ್ಯ ಸೇವೆಗಳ ನಿರಂತರತೆ ಕಾಪಾಡುವುದು ಈ ತಿದ್ದುಪಡಿಯ ಪ್ರಮುಖ ಉದ್ದೇಶ. ಗ್ರಾಮೀಣ ಹಾಗೂ ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ ತೀವ್ರವಾಗಿರುವುದರಿಂದ, ತಕ್ಷಣವೇ ಹುದ್ದೆಗಳನ್ನು ಭರ್ತಿ ಮಾಡುವ ಅಗತ್ಯವಿದೆ. ಈ ತಿದ್ದುಪಡಿಯ ಮೂಲಕ ವೈದ್ಯರ ವರ್ಗಾವಣೆ ಪ್ರಕ್ರಿಯೆಯಲ್ಲಿ ರಾಜಕೀಯ ಅಥವಾ ವೈಯಕ್ತಿಕ ಪ್ರಭಾವ ಕಡಿಮೆ ಮಾಡಿ, ನಿಯಮಬದ್ಧವಾಗಿ ನಿರ್ವಹಿಸಲು ಹಾಗೂ ವೈದ್ಯಕೀಯ ಕ್ಷೇತ್ರದಲ್ಲಿ ಪಾರದರ್ಶಕತೆ ತರಲು ಸಾಧ್ಯವಾಗಲಿದೆ ಎಂದು ಆರೋಗ್ಯ ಇಲಾಖೆಯ ಮೂಲಗಳು ತಿಳಿಸಿವೆ.

ಹಾಸನ: ತಾಲ್ಲೂಕಿನ ಸಾಲಗಾಮೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ರಂಗಸ್ವಾಮಿ ಹಾಗು ಉಪಾಧ್ಯಕ್ಷರಾಗಿ ಮಂಜುಳಾ ವಸಂತಕುಮಾರ್ ಗೆಲುವು ಸಾಧಿಸಿದ್ದಾರೆ. ತಣ್ಣೀರುಳ್ಳ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಬಾಲಕೃಷ್ಣ ಎತ್ತಿನಕಟ್ಟೆ, ಹೂವಿನಹಳ್ಳಿ ಕಾವಲು ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಯೋಗೇಶ್, ಅಗಲಹಳ್ಳಿ ಜೆಡಿಎಸ್ ಮುಖಂಡ ರೂಪೇಶ್ ಹಲಸನಹಳ್ಳಿ, ಕಲ್ದೆರಳ್ಳಿ ಮಲ್ಲಿಕ್, ಸಾಲಗಾಮೆ ನೀಲಕಂಠ, ಕರುಣಾಕರ, ಲೋಹಿತ್, ರಾಕೇಶ್, ಸತೀಶ್ ಇತರರಿದ್ದರು.

ಕ್ಷೇತ್ರ ಪುನರ್ ವಿಂಗಡಣೆ: ಕೇಂದ್ರದ ನಿರ್ಧಾರ ಒಪ್ಪಲ್ಲ

ಚೆನ್ನೈ: ನ್ಯಾಯಯುತವಾಗಿ ಕ್ಷೇತ್ರ ಪುನರ್ ವಿಂಗಡಣೆಯಾಗಬೇಕೆಂದು ದಕ್ಷಿಣ ಭಾರತ ಬಯಸುತ್ತದೆ ಮತ್ತು ಈ ವಿಚಾರವಾಗಿ ರಾಜ್ಯಗಳ ಅಭಿಪ್ರಾಯ ಪಡೆಯದೇ ಕೈಗೊಳ್ಳುವ ಯಾವುದೇ ನಿರ್ಧಾರವನ್ನು ನಾವು ಒಪ್ಪಿಕೊಳ್ಳುವುದಿಲ್ಲ ಎಂದು ತಮಿಳು ನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು ಬುಧವಾರ ತಿಳಿಸಿದ್ದಾರೆ.

ಶಾಂತವಾಗಿರುವ ದಕ್ಷಿಣದಲ್ಲಿ ಪ್ರಧಾನಿ ನರೇಂದ್ರ ಮೋದಿ ಬಿರುಗಾಳಿ ಎಬ್ಬಿಸ ಬಾರದು ಎಂದು ಎಚ್ಚರಿಸಿದ ಸ್ಟಾಲಿನ್ ಅವರು ಮೋದಿ ಅವರಿಗೆ ಹಲವು ಪ್ರಶ್ನೆಗಳನ್ನು ಕೇಳಿದ್ದಾರೆ. ಕ್ಷೇತ್ರ ಪುನರ್‌ವಿಂಗಡಣೆಯ ಅಪಾಯ ಭಾರತ ಸರ್ವಾಧಿಕಾರದತ್ತ ಜಾರುತ್ತಿದೆಯೇ? ಎಂಬ ಶೀರ್ಷಿಕೆಯಡಿ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಸ್ಟಾಲಿನ್, ದಕ್ಷಿಣದ ಜನರು ಎತ್ತಿರುವ ಪ್ರಶ್ನೆಗಳಿಗೆ ಪ್ರಧಾನಿ ಮೋದಿ ನ್ಯಾಯಯುತವಾಗಿ ಉತ್ತರಿಸಬೇಕೆಂದರು.

ನಾಳೆ ಬೇಲೂರಿನಲ್ಲಿ ಜನ ಸ್ಪಂದನಾ ಸಭೆ

» ಮೊದಲನೇ ಪುಟದಿಂದ

ವರಿಷ್ಠಾಧಿಕಾರಿ ಅವರ ಮಾರ್ಗದರ್ಶನದಂತೆ ಸಭೆಗೆ ಆಗಮಿಸುವ ಅತಿಥಿಗಳಿಗೆ ಮಾತ್ರ ತಾಲ್ಲೂಕು ಕಚೇರಿ ಒಳಾಂಗಣಕ್ಕೆ ಬರಲು ಅವಕಾಶ ನೀಡಲಾಗುವುದು. ಉಳಿದಂತೆ ಸಾರ್ವಜನಿಕರ ವಾಹನಗಳಿಗೆ ಪೊಲೀಸ್‌ಠಾಣೆ ಅಕ್ಕ-ಪಕ್ಕದಲ್ಲಿ ವಾಹನ ನಿಲುಗಡೆಗೆ ವ್ಯವಸ್ಥೆ ಮಾಡಿದೆ. ಇನ್ನು ಉಪಹಾರದ ವ್ಯವಸ್ಥೆಗೆ ಬ್ಯಾರಿಕೇಡ್ ನಿರ್ಮಿಸಲಾಗುತ್ತದೆ. ಸಚಿವರಿಗೆ ಅರ್ಜಿ ಸಲ್ಲಿಸಲು ಸರದಿ ಸಾಲಿನಲ್ಲಿ ಅವಕಾಶ ನೀಡಿದೆ. ಹೆಚ್ಚಿನ ಸಿಬ್ಬಂದಿ ಕೂಡ ನೇಮಕ ಮಾಡಲಾಗುತ್ತದೆ. ಸಭೆ ಯಶಸ್ವಿಗೆ ಸಾರ್ವಜನಿಕರು ಸಹಕಾರ ನೀಡಬೇಕೆಂದರು.

ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಸತೀಶ್ ಕುಮಾರ್ ಅವರು ಮಾತನಾಡಿ, ಜನ ಸ್ಪಂದನ ಸಭೆ ಅರ್ಥಪೂರ್ಣವಾಗಲು ಬಹುತೇಕ ಕೆಲಸಗಳಿಗೆ ಈಗಾಗಲೇ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ. ವಿಶೇಷವಾಗಿ ಉಪಹಾರ ಮತ್ತು ಅರ್ಜಿಗಳನ್ನು ತೆಗೆದುಕೊಳ್ಳುವುದು. ಹಾಗೆಯೆ ಇನ್ನುಳಿದ ಕೆಲಸಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಲು ಸೂಚನೆ ನೀಡಲಾಗುತ್ತದೆ. ಸಾರ್ವಜನಿಕರು ತಾಳ್ಮೆಯಿಂದ ಅರ್ಜಿ ಸಲ್ಲಿಸಬೇಕೆಂದರು.

ಬೇಲೂರು ಆರಕ್ಷಕ ಉಪನಿರೀಕ್ಷಕ ಶಿವಾನಂದಪಾಟೀಲ್, ಪುರಸಭೆ ಮುಖ್ಯಾಧಿಕಾರಿ ಬಸವರಾಜು ಶಿಗ್ಗಾವಿ, ಆರೋಗ್ಯ ನಿರೀಕ್ಷಕ ಲೋಹಿತ್, ಕಂದಾಯ ಇಲಾಖೆ ಮತ್ತು ವಿವಿಧ ಅಧಿಕಾರಿಗಳು ಹಾಜರಿದ್ದರು.

ಟಿಎಂಸಿ ನಾಯಕರಿಗೆ ತೊಲಗಿ ಎಂದ ಆಯೋಗ

• ಪ್ರಜೋದಯ ವರದಿ

ನವದೆಹಲಿ: ಪಶ್ಚಿಮ ಬಂಗಾಳದ ಮತದಾರರ ಪಟ್ಟಿಯ ಸಮಗ್ರ ವಿಶೇಷ ಪರಿಷ್ಕರಣೆ (ಎಸ್ ಐಆರ್) ಕುರಿತು ಚುನಾವಣಾ ಆಯೋಗ ಹಾಗೂ ತೃಣಮೂಲ ಕಾಂಗ್ರೆಸ್ ನಡು ವಣ ಬುಧವಾರ ನಡೆದ ಸಭೆಯಲ್ಲಿ ತೀವ್ರ ವಾಗ್ವಾದ ಉಂಟಾಗಿದೆ.

ಮುಖ್ಯ ಚುನಾವಣಾ ಆಯುಕ್ತರು, ಸಭೆಯಿಂದ ತೊಲಗಿ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆಂದು ಟಿಎಂಸಿ ಆರೋಪಿಸಿದೆ. ಬಳಿಕ ಮಾತನಾಡಿದ ಟಿಎಂಸಿ ನಾಯಕ, ರಾಜ್ಯಸಭಾ ಸದಸ್ಯ ಡೆರಿಕ್ ಓಬ್ರಿಯಾನ್, ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಪತ್ರಗಳನ್ನು ಸಿಇಸಿ ಜ್ಞಾನೇಶ್ ಕುಮಾರ್ ಅವರಿಗೆ ಹಸ್ತಾಂತರಿಸಲಾಯಿತು. ಚುನಾವಣಾ ಆಯೋಗದೊಂದಿಗೆ ಬಿಜೆಪಿಯ ನಂಟಿನ ಬಗ್ಗೆಯೂ ಮಾಹಿತಿ ನೀಡಲಾಗಿದೆ ಎಂದಿದ್ದಾರೆ. ಮತ್ತೊಂದೆಡೆ ಟಿಎಂಸಿ ನಾಯಕರು ಏರು ಧ್ವನಿಯಲ್ಲಿ ಕೂಗಾಡಿದ್ದಾರೆಂದು ಚುನಾವಣಾ ಆಯೋಗ ಆರೋಪಿಸಿದೆ.

ಅಂಬೇಡ್ಕರ್ ಜಯಂತಿ ಯಶಸ್ಸಿಗೆ ಎಲ್ಲರ ಸಹಕಾರ ಅಗತ್ಯ

• ಪ್ರಜೋದಯ ವರದಿ

ಬೇಲೂರು: ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತಿ ಕಾರ್ಯಕ್ರಮ ಯಶಸ್ಸಿಗೆ ಎಲ್ಲಾ ಇಲಾಖೆ ಅಧಿಕಾರಿ, ಸಿಬ್ಬಂದಿ ಹಾಗು ವಿವಿಧ ಸಂಘಟನೆ ಮುಖಂಡರು ಸಹಕಾರ ನೀಡಬೇಕೆಂದು ಶಾಸಕ ಹೆಚ್.ಕೆ.ಸುರೇಶ್ ಅವರು ಕೋರಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತಿ ಆಚರಣೆ ಅಂಗವಾಗಿ ತಾಲ್ಲೂಕು ಪಂಚಾಯಿತಿ ಕಚೇರಿ ಸಭಾಂಗಣದಲ್ಲಿ ನಡೆದ ದಲಿತ ಮುಖಂಡರ ಹಾಗು ವಿವಿಧ ಇಲಾಖೆ ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಏ.14ರಂದು ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತಿಯನ್ನು ತಾಲ್ಲೂಕು ಕಚೇರಿಯಲ್ಲಿ ಅದ್ದೂರಿಯಾಗಿ ಆಚರಿಸಲಾಗುತ್ತಿದೆ. ಕಾರ್ಯಕ್ರಮಕ್ಕೆ ಜನಪ್ರತಿನಿಧಿಗಳ ಸಂಪೂರ್ಣ ಸಹಕಾರ ದೊರೆಯಲಿದೆ ಎಂದರು.

ಸಮಾಜದ ಒಬ್ಬ ಸದಸ್ಯನಾಗಿ ನಾನೂ ಸಹ ಎಲ್ಲರೊಂದಿಗೆ ನಿಂತು ಕಾರ್ಯಕ್ರಮ ಯಶಸ್ವಿಗೊಳಿಸುವುದಾಗಿ ಭರವಸೆ ನೀಡುತ್ತೇನೆ. ಸಮಾಜಕ್ಕೆ ಉತ್ತಮ ಸಂದೇಶ ನೀಡುವ ಉದ್ದೇಶದಿಂದ ಏ. 14ರ ನಂತರ ದಿನಾಂಕ ನಿಗದಿಪಡಿಸಿ ವಿವಿಧ ಸಚಿವರನ್ನು ಆಹ್ವಾನಿಸಿ ದೊಡ್ಡ ಮಟ್ಟದ ಕಾರ್ಯಕ್ರಮ ಆಯೋಜಿಸೋಣ ವೆಂದರು.

ಅದಕ್ಕಾಗಿ ಒಂದು ಸಮಿತಿ ರಚಿಸಬೇಕು. ಚುನಾವಣೆ ನೀತಿ ಸಂಹಿತೆಯ ಅಡೆತಡೆಗಳಿಲ್ಲದ ಕಾರಣ ಇಲಾಖೆಯಿಂದ ನಿಗದಿಯಾದ ಹಣದೊಂದಿಗೆ ಮತ್ತಿತರೆ ಸಂಪನ್ಮೂಲ ಕ್ರೂಢಿಕರಿಸಿ ಅದ್ದೂರಿಯಾಗಿ ಆಚರಿಸೋಣ. ಅದಕ್ಕೆ ಎಲ್ಲರ ಸಹಕಾರ ಮುಖ್ಯವಾಗಿದ್ದು, ಕಳೆದ ವರ್ಷದಂತೆ ಈ ಬಾರಿಯೂ ಶಾಂತಿ, ಸೌಹಾರ್ದತೆ ಹಾಗು ಎಲ್ಲಾ ಸಮಾಜದವರ ಸಹಭಾಗಿತ್ವದೊಂದಿಗೆ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಲು ಒತ್ತು ನೀಡೋಣ ಎಂದರು.

ತಾಲ್ಲೂಕಿನ ದಲಿತ ಮುಖಂಡರು ಡಾ.ಅಂಬೇಡ್ಕರ್ ಜಯಂತಿ ಆಚರಣೆ ಬಗ್ಗೆ ಸಲಹೆ ನೀಡಿದರು. ತಹಶೀಲ್ದಾರ್ ಶ್ರೀಧರ್ ಕಂಕಣವಾಡಿ, ತಾಲ್ಲೂಕು ಪಂಚಾಯಿತಿಕಾರ್ಯನಿರ್ವಹ ಣಾಧಿಕಾರಿ ಸತೀಶ್, ಅರಸೀಕೆರೆ ತಾಲ್ಲೂಕು ಪಂಚಾಯಿತಿ ಇಒ ಗಂಗಾಧರ್, ಕ್ಷೇತ್ರ ಶಿಕ್ಷಣಾಧಿಕಾರಿ ಭಾಗ್ಯಮ್ಮ, ಪಿ.ಐ. ರೇವಣ್ಣ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಲಿಂಗರಾಜು, ದಲಿತ ಮುಖಂಡ ಮರಿಯಪ್ಪ ಹಾಗು ಇತರರಿದ್ದರು.

ರಸಗೊಬ್ಬರ ಸಬ್ಸಿಡಿಗೆ 41,534 ಕೋಟಿ ರೂ. : ಕೇಂದ್ರ ಸಚಿವ ಸಂಪುಟ ಅನುಮೋದನೆ

• ಪ್ರಜೋದಯ ವರದಿ

ನವದೆಹಲಿ: 2026ರ ಖಾರಿಫ್ ಋತುವಿನಲ್ಲಿ ಫಾಸ್ಫೇಟ್ ಹಾಗೂ ಪೊಟ್ಯಾಸಿಕ್ ರಸಗೊಬ್ಬರಗಳಿಗೆ 41,534 ಕೋಟಿ ಸಬ್ಸಿಡಿ ನೀಡಲು ಕೇಂದ್ರ ಸಚಿವ ಸಂಪುಟ ಬುಧವಾರ ಅನುಮೋದನೆ ನೀಡಿದೆ.

ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಆರ್ಥಿಕ ವ್ಯವಹಾರಗಳ ಸಚಿವ ಸಂಪುಟ ಸಮಿತಿ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ. ಸಬ್ಸಿಡಿ ಪ್ರಮಾಣವು ಕಳೆದ ವರ್ಷಕ್ಕಿಂತ ಶೇ.12ರಷ್ಟು ಹೆಚ್ಚಾಗಿದೆ.

ಜೂನ್ ತಿಂಗಳಲ್ಲಿ ನೈರುತ್ಯ ಮುಂಗಾರು ಪ್ರವೇಶದೊಂದಿಗೆ ಖಾರಿಫ್ ಬೆಳೆ ನಾಟಿ ಆರಂಭ ವಾಗಲಿದೆ.

ಸಂಪುಟದ ಇತರೆ ತೀರ್ಮಾನಗಳು

- ರಾಜಸ್ಥಾನದ ಜೈಪುರ ಮೆಟ್ರೊ ಎರಡನೇ ಹಂತಕ್ಕೆ ಅನುಮೋದನೆ. ಯೋಜನಾ ಮೊತ್ತ 13,037 ಕೋಟಿ
- ಅರುಣಾಚಲ ಪ್ರದೇಶದ ಅಂಜಾವ್ ಜಿಲ್ಲೆಯಲ್ಲಿ 1,200 ಮೆಗಾವಾಟ್ ಕಲೈ-ಜಲ ವಿದ್ಯುತ್ ಯೋಜನೆಯ ಅನುಷ್ಠಾನಕ್ಕೆ 14,105 ಕೋಟಿ ಹೂಡಿಕೆ ಪ್ರಸ್ತಾವನೆಗೆ ಅನುಮೋದನೆ
- ಅರುಣಾಚಲ ಪ್ರದೇಶದ ಕಮ್ಲೆ, ಕ್ರಾದಾಡಿ ಮತ್ತು ಕುರುಂಗ್ ಕುಮೆ ಜಿಲ್ಲೆಗಳಲ್ಲಿ 26,069 ಕೋಟಿ ರೂ. ವೆಚ್ಚದಲ್ಲಿ 1,720 ಮೆಗಾವಾಟ್ ಸಾಮರ್ಥ್ಯದ ಕಮಲಾ ಜಲ ವಿದ್ಯುತ್ ಯೋಜನೆ ಕಾರ್ಯಗತಕ್ಕೆ ಒಪ್ಪಿಗೆ

2025ರ ಖಾರಿಫ್ ಋತುವಿಗೆ ಹೋಲಿಸಿದರೆ ಸಬ್ಸಿಡಿ ಮೊತ್ತ 4,317 ಕೋಟಿ ಹೆಚ್ಚಳ ಆಗಿದೆ ಎಂದು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಸುದ್ದಿಗಾರರಿಗೆ ತಿಳಿಸಿದರು.

ಕೇಂದ್ರ ಸರ್ಕಾರವು ಖಾರಿಫ್ ಹಂಗಾಮಿನಲ್ಲಿ ಸಾರಜನಕಕ್ಕೆ ಪ್ರತಿ ಕೆಜಿಗೆ 47.32, ಫಾಸ್ಫೇಟ್ ಕೆಜಿಗೆ 52.76, ಪೊಟ್ಯಾಷ್ ಕೆಜಿಗೆ 2.38 ಮತ್ತು ಸಲ್ಫರ್‌ಗೆ ಕೆ.ಜಿ.ಗೆ 3.16 ಸಬ್ಸಿಡಿ ದರ ನಿಗದಿಪಡಿಸಿದೆ.

ಖಾರಿಫ್ ಹಂಗಾಮಿನಲ್ಲಿ ಸಾರಜನಕ, ಫಾಸ್ಫೇಟ್ ಮತ್ತು ಸಲ್ಫರ್ ರಸಗೊಬ್ಬರಗಳಿಗೆ ಸಬ್ಸಿಡಿ ದರ ಹೆಚ್ಚಿಸಲಾಗಿದೆ. ಆದರೆ, 2025ರ ರಬಿ ಹಂಗಾಮಿನಿಂದ ಪೊಟ್ಯಾಷ್‌ನ ಸಬ್ಸಿಡಿ ದರದಲ್ಲಿ ಬದಲಾವಣೆ ಆಗಿಲ್ಲ.

ಅದ್ದೂರಿ ದೊಡ್ಡಮ್ಮ, ಚಿಕ್ಕಮ್ಮ, ಆನೆಕೆರೆಮ್ಮ ದೇವಿ ರಥೋತ್ಸವ

» ಮೊದಲನೇ ಪುಟದಿಂದ

ಬುಧವಾರ ಬೆಳಿಗ್ಗೆ 6 ಗಂಟೆಗೆ ಗ್ರಾಮದ ಮಧ್ಯಭಾಗದಲ್ಲಿ ನಿಲ್ಲಿಸಲಾಗಿದ್ದ ಮೂರು ರಥಗಳ ಪೈಕಿ ಸಾಗತವಳ್ಳಿ ಮತ್ತು ನಿಂಬಿಹಳ್ಳಿ ರಥಗಳಲ್ಲಿ ಸೋಮ ಮತ್ತು ಬೀರನ ಮೂರ್ತಿಗಳನ್ನು ಪ್ರತಿಷ್ಠಾಪಿಸಿ ಆನೆಕೆರೆ ಗ್ರಾಮದ ರಥದಲ್ಲಿ ಅಮ್ಮನವರ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಿ ಪೂಜೆ ಸಲ್ಲಿಸಲಾಯಿತು. ಬಲಿ ಕೂಳು ಅರ್ಪಿಸಿ ಭಕ್ತರ ಜಯ ಘೋಷ ದೊಂದಿಗೆ ಮೂರು ರಥಗಳನ್ನು ಎಳೆಯಲಾ ಯಿತು. ಗ್ರಾಮದ ಮಧ್ಯ ಭಾಗದಿಂದ ಕೆರೆಯಂಚಿನಲ್ಲಿರುವ ದೊಡ್ಡಮ್ಮ, ಚಿಕ್ಕಮ್ಮ ದೇವಾಲಯದ ಆವರಣದವರೆಗೂ ಭಕ್ತರ ಜೈಕಾರ ದೊಂದಿಗೆ ರಥ ಎಳೆಯಲಾಯಿತು.

ನಂತರ ರಥದಲ್ಲಿರಿಸಿದ್ದ ಆನೆಕೆರೆ ಅಮ್ಮನವರ ಅಡ್ಡೆ ಮೂರ್ತಿಯನ್ನು ಕೆಳಗಿಳಿಸಿ ಸ್ವಲ್ಪ ಕಾಲ ಭಕ್ತರ ದರ್ಶನಕ್ಕಾಗಿ ಮೆರೆಸಲಾಯಿತು.

ವಿಧಾನ ಪರಿಷತ್ ಸದಸ್ಯ ಸೂರಜ್ ರೇವಣ್ಣ, ಸಂಸದ ಶ್ರೇಯಸ್ ಪಟೇಲ್ ಮತ್ತಿತರರು ಭಾಗವಹಿಸಿದ್ದರು. ಆನೆಕೆರೆ, ನಿಂಬಿಹಳ್ಳಿ, ಸಾಗತವಳ್ಳಿ, ಪಿಳ್ಳಳ್ಳಿ, ನಾಡನಹಳ್ಳಿ, ಶೆಟ್ಟಿಗೌಡನಹಳ್ಳಿ, ಚನ್ನಾಪುರ, ಕೋಡಿಹಳ್ಳಿ, ಮಾಳೇನಹಳ್ಳಿ, ಕಲ್ಲೇನಹಳ್ಳಿ, ಆಲಗೊಂಡನಹಳ್ಳಿ ಸುತ್ತಮುತ್ತಲ ಗ್ರಾಮಗಳ ಜನರು ಸಡಗರಿಂದ ಮಹೋತ್ಸವದಲ್ಲಿ ಭಾಗಿಯಾದರು.

ಸಾರ್ವಜನಿಕ ಬಳಕೆಗೆ 66 ಲ.ರೂ. ವೆಚ್ಚದ ಹೈಟೆಕ್ ಶೌಚಾಲಯ

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ಕ್ರೀಡಾಪಟುಗಳ ಅನುಕೂಲಕ್ಕಾಗಿ ಶೌಚಾಲಯ ನಿರ್ಮಿಸಿದ್ದು, ಅದರ ಪ್ರಯೋಜನ ಪಡೆಯಬೇಕೆಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ತಿಳಿಸಿದರು.

ಪಟ್ಟಣದ ತಾಲ್ಲೂಕು ಕ್ರೀಡಾಂಗಣದಲ್ಲಿ ಬುಧವಾರ ನಗರಾಭಿವೃದ್ಧಿ ಇಲಾಖೆಯಿಂದ 2024-25ನೇ ಸಾಲಿನ ಸ್ವಚ್ಛ ಭಾರತ ಮಿಷನ್ 2.0 ಮತ್ತು ಪುರಸಭಾ ಅನುದಾನದ ಅಡಿಯಲ್ಲಿ ನಿರ್ಮಿಸಲಾದ ಹೈಟೆಕ್ ಶೌಚಾಲಯ ಉದ್ಘಾಟಿಸಿ ಮಾತನಾಡಿದ ಅವರು, ಶುಚಿತ್ವ ಕಾಪಾಡುವ ದೃಷ್ಟಿಯಲ್ಲಿ ಮತ್ತು ಕ್ರೀಡಾಪಟುಗಳಿಗೆ ಅನುಕೂಲವಾಗುವಂತೆ 66 ಲಕ್ಷ ರೂ. ಅನುದಾನದಲ್ಲಿ ಪುರುಷರಿಗೆ ಮತ್ತು ಮಹಿಳೆಯರಿಗೆ ಪ್ರತ್ಯೇಕ ಶೌಚಾಲಯ ನಿರ್ಮಿಸಲಾಗಿದೆ. ಸಾರ್ವಜನಿಕರು ಎಲ್ಲೆಂದರಲ್ಲಿ ಮೂತ್ರ ವಿಸರ್ಜಿಸುವ ಮೂಲಕ ಬಯಲು ಶೌಚಾಲಯವನ್ನು ಅವಲಂಬಿಸಿದ್ದಾರೆ. ತಾಲ್ಲೂಕು ಕ್ರೀಡಾಂಗಣ ಅಭಿವೃದ್ಧಿಯಾಗುತ್ತಿದ್ದು, ಪ್ರತಿನಿತ್ಯ ಸಾವಿರಾರು ಜನರು ಕ್ರೀಡಾ ಚಟುವಟಿಕೆ, ವ್ಯಾಯಾಮ ಹಾಗು ವಾಕಿಂಗ್‌ಗೆ ಬರುವುದರಿಂದ ಶೌಚಾಲಯದ ಅಗತ್ಯವಿತ್ತು. ಈ ದಿಸೆಯಲ್ಲಿ ಅನುದಾನ ಕ್ರೂಢೀಕರಿಸಿ ಹೈಟೆಕ್ ಶೌಚಾಲಯ ನಿರ್ಮಿಸಲಾಗಿದೆ. ಅಂಬಿಕಾ ನಗರದ ಸರ್ಕಾರಿ ಪ್ರೌಢಶಾಲೆಯಲ್ಲಿ 33 ಲಕ್ಷ ರೂ. ವೆಚ್ಚದಲ್ಲಿ ಶೌಚಾಲಯ ನಿರ್ಮಿಸಲಾಗಿದೆ ಎಂದರು.

ಶೌಚಾಲಯವನ್ನು ಪುರಸಭೆಯವರೇ ಸ್ವಚ್ಛತೆ ಮಾಡುತ್ತಾರೆ. ಶೌಚಾಲಯದ ಉಸ್ತುವಾರಿ ಯನ್ನು ಕ್ರೀಡಾಂಗಣದ ನಿರ್ವಾಹಕ ಸೂರ್ಯ ಕುಮಾರ್ ವಹಿಸಿಕೊಳ್ಳಬೇಕು. ಶೌಚಾಲಯ ಮುಂಭಾಗ ಇಂಟರ್‌ಲಾಕ್ ಅಳವಡಿಸಿ ಶೌಚಾಲಯದ ಮುಂಬಾಗಿಲಿಗೆ ಮಳೆ ನೀರು ಬೀಳದ ಹಾಗೆ ಸೂಕ್ತ ವ್ಯವಸ್ಥೆ ಮಾಡಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು.

ಟಿಎಪಿಸಿಎಂಎಸ್ ನಿರ್ದೇಶಕ ಎಂ.ಆರ್.ಅನಿಲ್ ಕುಮಾರ್, ಪುರಸಭಾ ಮುಖ್ಯಾಧಿಕಾರಿ ಆರ್. ಯತೀಶ್ ಕುಮಾರ್, ಮಾಜಿ ಅಧ್ಯಕ್ಷ ಕೋಟೆ ಮೋಹನ್, ಪರಿಸರ ಅಭಿಯಂತರರಾದ ಬಿ.ಎ.ಕಾವ್ಯಶ್ರೀ, ಕಿರಿಯ ಅಭಿಯಂತರ ಬಸವರಾಜು, ಗಿರೀಶ್, ಹಿರಿಯ ಆರೋಗ್ಯ ನಿರೀಕ್ಷಕ ಮೂರ್ತಿ ಇತರರಿದ್ದರು.

ಮನೆ ಬೀಗ ಮುರಿದು ಒಂದು ಕೆ.ಜಿ. ಬೆಳ್ಳಿ ಆಭರಣ ಕಳವು



• ಪ್ರಜೋದಯ ವರದಿ

ಹಾಸನ: ಮುಸುಕು ಧರಿಸಿ ಮನೆಗೆ ನುಗ್ಗಿದ ಕಳ್ಳರು 1 ಕೆ.ಜಿ. ಬೆಳ್ಳಿ ಆಭರಣ ಹಾಗು 15 ಸಾವಿರ ರೂ. ನಗದು ಕಳವು ಮಾಡಿರುವ ಘಟನೆ ತಾಲ್ಲೂಕಿನ ಚಿಕ್ಕ ಕಡಲೂರು ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಪ್ರಸಾದ್ ಎಂಬುವವರಿಗೆ ಸೇರಿದ ತೋಟದ ಮನೆಯಲ್ಲಿ ಕಳ್ಳತನ ನಡೆದಿದೆ. ಹಾಸನದಲ್ಲೇ ವಾಸವಿರುವ ಕುಟುಂಬಸ್ಥರು ವಾರದಲ್ಲಿ ಎರಡು ಬಾರಿ ಮಾತ್ರ ಗ್ರಾಮದಲ್ಲಿರುವ ನಿವಾಸದಲ್ಲಿರುತ್ತಾರೆ. ಅದನ್ನೇ ಬಂಡವಾಳ ಮಾಡಿಕೊಂಡ ಕಳ್ಳರು ಕೃತ್ಯ ಎಸಗಿದ್ದಾರೆ.

ಕಪ್ಪು ಬಣ್ಣದ ಬಟ್ಟೆ ಹಾಕಿ ಮಾಸ್ಕ್ ಧರಿಸಿ ಕೈಯಲ್ಲಿ ಟಾರ್ಚ್ ಹಿಡಿದು ಬಂದಿರುವ ಐವರುಚೋರರು ಕಬ್ಬಿಣದ ರಾಡ್‌ನಿಂದ ಮನೆಯ ಡೋರ್ ಮೀಟಿ ನಂತರ ಒಳನುಗ್ಗಿ ದ್ದಾರೆ. ಐವರಲ್ಲಿ ಯಾರಾದರೂ ಬಂದಾರು ಎಂದು ನೋಡಿಕೊಳ್ಳಲು ಇಬ್ಬರು ಗೇಟಿನ ಹೊರಗೆ ನಿಂತಿದ್ದರೆ ಉಳಿದ ಮೂವರು ಒಳಗೆ ಪ್ರವೇಶಿಸಿ ರೂಂನಲ್ಲಿದ್ದ ಲಾಕರ್ ಮುರಿದು ನಗದು, ಬೆಳ್ಳಿ ವಸ್ತುಗಳನ್ನು ಕಳ್ಳತನ ಮಾಡಿದ್ದಾರೆ.

ಕಳ್ಳತನ ಮಾಡುವ ದೃಶ್ಯ ಸಿಸಿಟಿವಿಯಲ್ಲಿ ಸೆರೆಯಾಗಿದೆ. ಸುದ್ದಿ ತಿಳಿದು ಗ್ರಾಮಕ್ಕೆ ಭೇಟಿ ನೀಡಿದ ದುದ್ದ ಪೊಲೀಸರು ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿ ತನಿಖೆ ಕೈಗೊಂಡಿದ್ದಾರೆ. ಶ್ವಾನದಳ, ಬೆರಳಚ್ಚು ತಜ್ಞರೂ ಸಹ ಭೇಟಿ ನೀಡಿ ಪೂರಕ ಸಾಕ್ಷ್ಯಾಧಾರ ಸಂಗ್ರಹಿಸಿದರು.

ಅಂಬೇಡ್ಕರ್ ಜಯಂತಿಗೆ ಅಧಿಕಾರಿಗಳ ಹಾಜರಾತಿ ಕಡ್ಡಾಯ

• ಪ್ರಜೋದಯ ವರದಿ

ಸಕಲೇಶಪುರ: ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜನ್ಮ ದಿನಾಚರಣೆ ಯನ್ನು ಅರ್ಥಪೂರ್ಣವಾಗಿ ಆಚರಿಸುವ ಕುರಿತು ತಾಲ್ಲೂಕು ಆಡಳಿತ ಸೌಧದ ಸಭಾಂಗಣದಲ್ಲಿ ಬುಧವಾರ ಪೂರ್ವಭಾವಿ ಸಭೆ ನಡೆಯಿತು.

ಏ.14ರಂದು ಬೆಳಿಗ್ಗೆ 10 ಗಂಟೆಗೆ ಡಾ.ಬಿ.ಆರ್.ಅಂಬೇಡ್ಕರ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ನಂತರ, ಪಟ್ಟಣದ ಪ್ರಮುಖ ಬೀದಿಗಳಲ್ಲಿ ಭಾವಚಿತ್ರದೊಂದಿಗೆ ವೀರಗಾಸೆ, ನಾಸಿಕ್ ಡೋಲ್ ಹಾಗು ಕಹಳೆ ವಾದ್ಯಗೋಷ್ಠಿಗಳೊಂದಿಗೆ ಅದ್ದೂರಿ ಮೆರವಣಿಗೆ ನಡೆಸಲು ನಿರ್ಧರಿಸಲಾಯಿತು. ಬಳಿಕ ಅಂಬೇಡ್ಕರ್ ಸಮುದಾಯ ಭವನದಲ್ಲಿ ವೇದಿಕೆ ಕಾರ್ಯಕ್ರಮ ನಡೆಸಲು ತೀರ್ಮಾನ ಕೈಗೊಳ್ಳಲಾಯಿತು.

ವೇದಿಕೆ ಕಾರ್ಯಕ್ರಮದಲ್ಲಿ 2025ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ಪರಿಶಿಷ್ಟ ಜಾತಿ ಹಾಗು ಪರಿಶಿಷ್ಟ ಪಂಗಡದ ವಿದ್ಯಾರ್ಥಿ ಗಳನ್ನು ಗೌರವಿಸಲಾಗುವುದು. ಅದರೊಂದಿಗೆ ಯುಪಿಎಸ್‌ಸಿ ಪರೀಕ್ಷೆಯಲ್ಲಿ 389ನೇ ರ್‍ಯಾಂಕ್ ಗಳಿಸಿ ತಾಲ್ಲೂಕಿಗೆ ಕೀರ್ತಿ ತಂದ ಗುರ್ಜನಹಳ್ಳಿ ಗ್ರಾಮದ ಮನೋಜ್ ಕುಮಾರ್ ಅವರನ್ನು ಸನ್ಮಾನಿಸಲು ಸಭೆಯಲ್ಲಿ ನಿರ್ಣಯಿಸಲಾಯಿತು.

ಪೂರ್ವಭಾವಿ ಸಭೆಗೆ ಗೈರಾದ ತಾಲ್ಲೂಕು ಮಟ್ಟದ ಅಧಿಕಾರಿಗಳ ವಿರುದ್ಧ ದಲಿತ ಸಮು ದಾಯದ ಮುಖಂಡರು ಅಸಮಾಧಾನ ವ್ಯಕ್ತಪಡಿಸಿದರು. ಸಂವಿಧಾನ ಅರ್ಪಿಸಿದ ಮಹನೀಯರ ಜಯಂತಿಯ ಸಭೆಗೆ ಬಾರದಿರುವುದು ಸರಿಯಲ್ಲವೆಂದು ಆಕ್ಷೇಪಿಸಿದ ಅವರು, ಅಂತಹ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಆಗ್ರಹಿಸಿದರು.

ತಹಶೀಲ್ದಾರ್ ಸುಪ್ರೀತಾ ಅವರು ಮಾತನಾಡಿ, ರಾಷ್ಟ್ರ ನಾಯಕರ ಜಯಂತಿ ಹಾಗು ಪೂರ್ವಭಾವಿ ಸಭೆಗಳಿಗೆ ಗೈರಾಗುವ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಸಿದರು. ಪ್ರತಿಯೊಂದು ಇಲಾಖೆಯ ಅಧಿಕಾರಿಗಳು ಜಯಂತಿಯಂದು ಕಡ್ಡಾಯವಾಗಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಸೂಚಿಸಿದರು.

ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಗಂಗಾಧರ್, ತಹಶೀಲ್ದಾರ್, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಮೋಹನ್ ಕುಮಾರ್, ಪುರಸಭೆ ಮುಖ್ಯಾಧಿಕಾರಿ ಮಹೇಶ್ವರಪ್ಪ, ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ಪ್ರಕಾಶ್, ಸಬ್ ಇನ್‌ಸ್ಪೆಕ್ಟರ್ ಮಹೇಶ್, ತಾಲ್ಲೂಕು ಆರೋಗ್ಯ ಅಧಿಕಾರಿ ಡಾ|| ಮಹೇಶ್ ಹಾಗು ಇತರರಿದ್ದರು.

ಕಾರು ಡಿಕ್ಕಿ: ಬೈಕ್ ಸವಾರ ಸಾವು

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ಬೈಕ್ ಓವರ್‌ಟೇಕ್ ಮಾಡಲು ಕಾರು ಜೋರಾಗಿ ಓಡಿಸಿದ ಪರಿಣಾಮ ಡಿಕ್ಕಿಯಾಗಿ ಬೈಕ್ ಸವಾರ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಅಡಗೂರು ಗೇಟ್ ಸಮೀಪ ನಡೆದಿದೆ.

ಮಂಡ್ಯ ಜಿಲ್ಲೆ ಕಿಕ್ಕೇರಿ ಹೋಬಳಿ ಗುಡ್ಡೆಹೊಸಹಳ್ಳಿ ಗ್ರಾಮದ ಜಿ.ಕೆ. ನಂದೀಶ್ ಮೃತರು. ಬುಧವಾರ ಬೆಳಿಗ್ಗೆ 5ರ ಸಮಯದಲ್ಲಿ ಗ್ರಾಮದಿಂದ ಚನ್ನರಾಯಪಟ್ಟಣಕ್ಕೆ ಬರುತ್ತಿದ್ದಾಗ ಹಿಂದಿನಿಂದ ವೇಗವಾಗಿ ಬಂದ ಕಾರು ಚಾಲಕ ಓವರ್‌ಟೇಕ್ ಮಾಡಲು ಜೋರಾಗಿ ಓಡಿಸಿದ್ದರಿಂದ ಬೈಕ್‌ಗೆ ಡಿಕ್ಕಿಯಾಗಿದೆ. ಅಪಘಾತವಾಗುತ್ತಿದ್ದಂತೆ ಕಾರು ಚಾಲಕ ನಿಲ್ಲಿಸದೆ ಪರಾರಿಯಾಗಿದ್ದಾನೆ.

ಡಿಕ್ಕಿಯ ರಭಸಕ್ಕೆ ಬೈಕ್ ಸಮೇತ ರಸ್ತೆಯ ಮೇಲೆ ಬಿದ್ದ ನಂದೀಶ್ ಅವರ ತಲೆ ಹಾಗು ಹೊಟ್ಟೆ ಭಾಗಕ್ಕೆ ಬಲವಾದ ಪೆಟ್ಟು ಬಿದ್ದು ಮೃತಪಟ್ಟಿದ್ದಾರೆ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗುಜರಾತಿನ ಜನರು ಅನಕ್ಷರಸ್ಥರು ಹೇಳಿಕೆಗೆ ವಿಷಾದ ವ್ಯಕ್ತಪಡಿಸಿದ ಖರ್ಗೆ

• ಪ್ರಜೋದಯ ವರದಿ

ನವದೆಹಲಿ: ಗುಜರಾತಿನ ಜನರು ಅನಕ್ಷರಸ್ಥರು ಎಂಬ ವಿವಾದಾತ್ಮಕ ಹೇಳಿಕೆಗೆ ಸಂಬಂಧಿ ಸಿದಂತೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ವಿಷಾದ ವ್ಯಕ್ತಪಡಿಸಿದ್ದಾರೆ.

ತಮ್ಮ ಹೇಳಿಕೆಯನ್ನು ತಪ್ಪಾಗಿ ಅರ್ಥೈಸಲಾಗಿದ್ದು, ಯಾವಾಗಲೂ ಗುಜರಾತಿನ ಜನರ ಬಗ್ಗೆ ಅಪಾರ ಗೌರವ ಇದೆ ಎಂದು ಹೇಳಿದ್ದಾರೆ. ಈ ಕುರಿತು ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಖರ್ಗೆ, ಕೇರಳದಲ್ಲಿ ನಡೆದ ಚುನಾವಣಾ ಪ್ರಚಾರದ ವೇಳೆ ತನ್ನ ಹೇಳಿಕೆ ಗಳನ್ನು ಉದ್ದೇಶಪೂರ್ವಕವಾಗಿ ತಪ್ಪಾಗಿ ಅರ್ಥೈಸಲಾಗಿದೆ. ಹಾಗಿದ್ದರೂ ನಾನು ಪ್ರಾಮಾಣಿಕವಾಗಿ ವಿಷಾದ ವ್ಯಕ್ತಪಡಿಸುತ್ತೇನೆಂದಿದ್ದಾರೆ.

ಗುಜರಾತಿನ ಜನರ ಭಾವನೆಗಳನ್ನು ನೋಯಿಸುವ ಉದ್ದೇಶ ನನ್ನದಾಗಿರಲಿಲ್ಲ, ಅವರ ಬಗ್ಗೆ ಗೌರವ ಇದೆ. ಮುಂದೆಯೂ ಇರುತ್ತದೆ. ಕೇರಳದಲ್ಲಿ ನಡೆದ ಚುನಾವಣಾ ಪ್ರಚಾರದ ವೇಳೆ ಪ್ರಧಾನಿ ಮೋದಿ ಗುಜರಾತಿನ ಜನರನ್ನು ಮೂರ್ಖರನ್ನಾಗಿಸುತ್ತಿದ್ದಾರೆಂದು ಖರ್ಗೆ ಆರೋಪಿಸಿ ದ್ದರು.

ಗುಜರಾತಿನ ಅನಕ್ಷರಸ್ಥ ಜನರನ್ನು ನೀವು ಮೋಸಗೊಳಿಸಬಹುದು. ಆದರೆ ಕೇರಳದ ಜನರನ್ನು ಮೋಸ ಗೊಳಿಸಲು ಸಾಧ್ಯವಿಲ್ಲವೆಂದು ಹೇಳಿದ್ದರು.

ಕೇರಳದ ಜನರು ಬುದ್ಧಿವಂತರು ಹಾಗೂ ವಿದ್ಯಾವಂತರಾಗಿದ್ದು, ಮೋದಿ ಹಾಗೂ ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್‌ಗೆ ಮೋಸ ಮಾಡಲು ಸಾಧ್ಯವಿಲ್ಲ ಎಂದಿದ್ದರು.

ವರ್ಷಕ್ಕೊಮ್ಮೆ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಿ

• ಪ್ರಜೋದಯ ವರದಿ

ಹಾಸನ: ಕೃಷಿ ಕೆಲಸದಲ್ಲಿ ನಿರಂತರವಾಗಿ ತೊಡಗುವ ಗ್ರಾಮೀಣ ಜನರು ವರ್ಷಕ್ಕೆ ಒಮ್ಮೆ ಯಾದರೂ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವ ಮೂಲಕ ಉತ್ತಮ ಬದುಕು ಕಟ್ಟಿಕೊಳ್ಳಬೇಕೆಂದು ಮಣಿ ಆಸ್ಪತ್ರೆ ಮುಖ್ಯಸ್ಥ ಡಾ|| ಜಿ.ಕೆ.ಯತೀಶ್ ಅವರು ಹೇಳಿದರು.

ತಾಲ್ಲೂಕಿನ ಕೆಲವತ್ತಿ ಗ್ರಾಮದಲ್ಲಿ ಗಿಡ್ಡಮ್ಮ ದೇವಿ ಚಾರಿಟಬಲ್ ಟ್ರಸ್ಟ್, ಪೂರ್ಣಪ್ರಜ್ಞ ಇನ್ಸ್ಟಿಟ್ಯೂಟ್ ಆಫ್ ಅರೆ ವೈದ್ಯಕೀಯ ವಿಜ್ಞಾನ ಸಂಸ್ಥೆ (ಕಂಚಮಾರನಹಳ್ಳಿ) ಹಾಗು ಮಣಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಮತ್ತು ಸಂಶೋಧನಾ ಸಂಸ್ಥೆಯಿಂದ ವಿಶ್ವ ಆರೋಗ್ಯ ದಿನದ ಅಂಗವಾಗಿ ಆಯೋಜಿಸಿದ್ದ ಆರೋಗ್ಯ ಉಚಿತ ತಪಾಸಣಾ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಆರೋಗ್ಯದ ಬಗ್ಗೆ ನಿರ್ಲಕ್ಷ್ಯ ಹೆಚ್ಚಾಗುತ್ತಿರುವುದರಿಂದ ಸಮಸ್ಯೆಗಳು ಹೆಚ್ಚುತ್ತಿವೆ. ಪ್ರತಿಯೊಬ್ಬರೂ ತಮ್ಮ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕೆಂದು ತಿಳಿಸಿದರು.

ಪ್ರಸುತಿ ಮತ್ತು ಸ್ತ್ರೀರೋಗ ತಜ್ಞೆ ಡಾ|| ಬಿ.ಕೆ.ಸೌಮ್ಯಮಣಿ ಅವರು ಮಾತನಾಡಿ, ಜೀವನಶೈಲಿ ಬದಲಾವಣೆಯಿಂದ ಆರೋಗ್ಯದ ಮೇಲೆ ದುಷ್ಪರಿಣಾಮಗಳು ಬೀರುತ್ತವೆ. ವಯಸ್ಸಿಗೆ ಅನುಗುಣವಾಗಿ ನಿಯಮಿತ ಪರೀಕ್ಷೆಗಳನ್ನು ಮಾಡಿಸಿಕೊಂಡರೆ ರೋಗಗಳನ್ನು ಮುಂಚಿತವಾಗಿ ತಡೆಗಟ್ಟಬಹುದೆಂದು ಹೇಳಿದರು.

ರೋಗ ಬಂದ ನಂತರ ಮಾತ್ರ ವೈದ್ಯರನ್ನು ಸಂಪರ್ಕಿಸುವ ಬದಲು ಮುಂಜಾಗ್ರತಾ ಕ್ರಮಗಳನ್ನು ಅನುಸರಿಸುವುದು ಅಗತ್ಯ. ಈ ಬಾರಿ ವಿಶ್ವ ಆರೋಗ್ಯ ದಿನಾಚರಣೆಯ ಸಂದೇಶವಾದ 'ನಾವೆಲ್ಲರೂ ವಿಜ್ಞಾನದ ಕಡೆಗೆ ಸಾಗೋಣ' ಎಂಬುದನ್ನು ಅಳವಡಿಸಿಕೊಳ್ಳಬೇಕು. ಅಜ್ಞಾನ ಮತ್ತು ಮೂಢನಂಬಿಕೆಗಳಿಂದ ದೂರವಿದ್ದು ಆರೋಗ್ಯದ ಬಗ್ಗೆ ಜಾಗೃತಿ ವಹಿಸಬೇಕೆಂದು ಅಭಿಪ್ರಾಯಪಟ್ಟರು.

ಉದ್ಯಮಿ ಕಂಚಮಾರನಹಳ್ಳಿ ಲಕ್ಷ್ಮೀಕಾಂತ್ ಅವರು ಮಾತನಾಡಿ, ಗ್ರಾಮೀಣ ಪ್ರದೇಶಗಳಲ್ಲಿ ಇಂತಹ ಆರೋಗ್ಯ ಶಿಬಿರಗಳನ್ನು ಹೆಚ್ಚಾಗಿ ಆಯೋಜಿಸುವುದು ಅಗತ್ಯ. ಅದರಿಂದ ಜನರಿಗೆ ಉಚಿತ ತಪಾಸಣೆ ಜೊತೆಗೆ ಆರೋಗ್ಯ ಅರಿವು ಹೆಚ್ಚುತ್ತದೆಂದು ಹೇಳಿದರು.

ಮಕ್ಕಳ ತಜ್ಞ ಡಾ||ದಿನೇಶ್ ಅವರು ಮಾತನಾಡಿ, ಹಿಂದಿನ ಕಾಲದಲ್ಲಿ ಆರೋಗ್ಯಕರ ಜೀವನಶೈಲಿ ಇತ್ತು. ಆದರೆ ಇಂದಿನ ದಿನಗಳಲ್ಲಿ ನಿರ್ಲಕ್ಷ್ಯದಿಂದ ಅನೇಕ ರೋಗಗಳು ಹೆಚ್ಚುತ್ತಿವೆ. ಜನರು ಆರೋಗ್ಯದ ಬಗ್ಗೆ ಜಾಗೃತಿ ವಹಿಸಿ ಮುಂಜಾಗ್ರತಾ ಕ್ರಮಗಳನ್ನು ಅನುಸರಿಸಬೇಕೆಂದು ಸಲಹೆ ನೀಡಿದರು.

ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಜಾಲತಾಣ ಹಾಗು ಮೊಬೈಲ್‌ಗಳ ಅತಿಯಾದ ಬಳಕೆ ಯಿಂದ ಮಾನವ ಸಂಬಂಧಗಳು ಕುಗ್ಗುತ್ತಿವೆ. ಜೊತೆಗೆ ದೈಹಿಕ ಚಟುವಟಿಕೆಗಳ ಕೊರತೆಯಿಂದ ಆರೋಗ್ಯದ ಮೇಲೂ ದುಷ್ಪರಿಣಾಮ ಬೀರುತ್ತಿದೆಂದು ಆತಂಕ ವ್ಯಕ್ತಪಡಿಸಿದರು.

ಇರಾನ್‌ಗೆ ಶಸ್ತ್ರಾಸ್ತ್ರ ಪೂರೈಸುವ ದೇಶಗಳ ಮೇಲೆ ಶೇ.50ರಷ್ಟು ಸುಂಕ

ವಾಷಿಂಗ್ಟನ್: ಇರಾನ್‌ಗೆ ಮಿಲಿಟರಿ ಶಸ್ತ್ರಾಸ್ತ್ರಗಳನ್ನು ಪೂರೈಸುವ ದೇಶಗಳ ಮೇಲೆ ಶೇ. 50ರಷ್ಟು ಸುಂಕ ವಿಧಿಸುವುದಾಗಿ ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ.

ಅಂತಹ ದೇಶಗಳು ಅಮೇರಿಕಕ್ಕೆ ಮಾರಾಟ ಮಾಡುವ ಎಲ್ಲಾ ಸರಕುಗಳ ಮೇಲೆ ತಕ್ಷಣವೇ ಶೇ.50ರಷ್ಟು ಸುಂಕ ವಿಧಿಸಲಾಗುವುದು. ಈ ವಿಚಾರದಲ್ಲಿ ಯಾವುದೇ ವಿನಾಯಿತಿ ನೀಡಲಾಗುವುದಿಲ್ಲವೆಂದು ಸಾಮಾಜಿಕ ಮಾಧ್ಯಮ ಟ್ರುಥ್‌ನಲ್ಲಿ ತಿಳಿಸಿದ್ದಾರೆ.

ಎರಡು ವಾರಗಳ ತಾತ್ಕಾಲಿಕ ಕದನ ವಿರಾಮಕ್ಕೆ ಅಮೇರಿಕಾ, ಇಸ್ರೇಲ್ ಹಾಗೂ ಇರಾನ್ ಬುಧವಾರ ಸಮ್ಮತಿಸಿವೆ. ಇದರೊಂದಿಗೆ ಪಶ್ಚಿಮ ಏಷ್ಯಾದಲ್ಲಿ ಕಳೆದ ಒಂದೂವರೆ ತಿಂಗಳಿಂದ ನಡೆಯುತ್ತಿರುವ ಸಂಘರ್ಷಕ್ಕೆ ಬಿಡುವು ಸಿಕ್ಕಂತಾಗಿದೆ. ಪಾಕಿಸ್ತಾನದ ಮಧ್ಯಸ್ಥಿಕೆಯಲ್ಲಿ ಈ ಮಾತುಕತೆಗಳು ನಡೆದಿವೆ. ಹೊರ್ಮುಜ್ ಜಲಸಂಧಿಯನ್ನು ಮುಕ್ತಗೊಳಿಸಲು ಸಮ್ಮತಿಸದಿದ್ದಲ್ಲಿ ಇರಾನ್‌ನ ನಾಗರಿಕತೆಯನ್ನು ನಾಶ ಮಾಡಲಾಗುವುದೆಂದು ಟ್ರಂಪ್ ಬೆದರಿಕೆ ಒಡ್ಡಿದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK